Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-19 | ಸಂಚಿಕೆ-32 | ಆಗಸ್ಟ್ 4-10, 2025 | ಪುಟ 16 | ರೂ.10
Volume-19 | Issue-32 | Aug 4-10, 2025 | Pages 16 | Price 10/-



ಪ್ಯಾಲೆಸ್ಟೈನ್ ಸೌಹಾರ್ದತೆ: ಬಾಂಬೆ ಹೈಕೋರ್ಟ್‌ನ ಅಘಾತಕಾರಿ ಹೇಳಿಕೆ






ಟ್ರಂಪ್‌ಗೆ 'ಬ್ರಿಕ್ಸ್' ಭಯ ಏಕೆ?

SCSP-TSP: ದಮನಿತರ ಪಾಲಿನ ದುಡ್ಡಿಗೆ ಕನ್ನ ಹಾಕುವಿರೇಕೆ?

ಧರ್ಮಸ್ಥಳ ಪದ್ಮಲತಾ ಪ್ರಕರಣ: ಸತ್ಯ ಏನು?



ಇಂಗ್ಲೆಂಡ್ ಸಾಮ್ರಾಜ್ಯವನ್ನು ಹಲ ಹಲವು ಕಿರುಪುಸ್ತಿಕೆಗಳಿಂದ ತುಂಬಿದರು. ಜನರ ಮೆದುಳನ್ನು ವಿವಿಧ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳಿಂದ ತುಂಬಿದರು. ಇವು ಕಾಗದದ ಕಂತೆಗಳಲ್ಲ, ಕಾಗದದ ಗುಂಡುಗಳಾಗಿ ಪರಿಣಮಿಸಿದವು. ಪ್ರಜಾಪ್ರಭುತ್ವ ಎಂದರೆ ಚರ್ಚೆ, ವಿವಿಧ ವಿಚಾರಗಳ ನಡುವಣ ಸಂವಾದ. ಪರಸ್ಪರ ವಿರುದ್ಧ ವಿಚಾರಗಳ ವಾದ, ವಿವಾದ. ಒಂದು ವಿಷಯದ ವಿವಿಧ ಮಗ್ಗಲುಗಳ ಪರಿಶೀಲನೆ.



ಜೆ.ಎನ್ ಕಾಲಂ

ಭಾಗ 34

‘ಇವು ಕಾಗದದ ಕಂತೆಗಳಲ್ಲ ಕಾಗದದ ಬುಲ್ಲೆಟ್‌ಗಳು’

ಧರ್ಮ, ಪ್ರಜಾಪ್ರಭುತ್ವ, ಸಂವಿಧಾನದ ಮೂಲ ತತ್ವಗಳ ಚರ್ಚೆಯನ್ನು ಬೀದಿ, ಹಳ್ಳಿಗಳಿಗೆ ಕೊಂಡೊಯ್ದ ಪಾಂಪ್ಲೆಟ್ ವಾರ್ (ಕಿರುಪುಸ್ತಿಕೆಗಳ ಕದನ)ಗಳು.

ಇಂಗ್ಲೆಂಡಿನಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗಿಂತ ನೂರಾರು ವರ್ಷ ಮೊದಲೇ ಕಿರುಪುಸ್ತಿಕೆಗಳ ಪ್ರಕಟಣೆ ಆರಂಭವಾಯಿತು. ಪ್ರಜಾಪ್ರಭುತ್ವ ಕ್ರಾಂತಿಯ ಮೊದಲೇ ಸಾವಿರಾರು ಕಿರುಪುಸ್ತಿಕೆಗಳ ಪ್ರಕಟಣೆಯ ಮೂಲಕ ಜನರಲ್ಲಿ ಚರ್ಚೆಗಳನ್ನು ಎಬ್ಬಿಸಿದವು.

ಲಂಡನ್‌ನ ಬೀದಿ, ಬೀದಿಗಳಲ್ಲಿ, ವ್ಯಾಪಾರ ಕೇಂದ್ರಗಳ ಕೂಲಿಕಾರರು, ಹಮಾಲಿಗಳ ನಡುವೆ, ತಯಾರಿಕಾ ಕಾರ್ಯಾಗಾರಗಳಲ್ಲಿ ಅಪ್ರೆಂಟಿಸ್‌ಗಳ ನಡುವೆ, ಹಲವು ಹಳ್ಳಿಗಳಲ್ಲಿ ರೈತರು, ಗೇಣಿದಾರರ ನಡುವೆ ಚರ್ಚೆಗಳು ಎದ್ದವು. ರಾಜಪ್ರಭುತ್ವದ ಬದಲಾಗಿ ಏನಿರಬೇಕು, ಪ್ರಜೆಗಳ ಆಡಳಿತ ಎಂದರೇನು, ಚುನಾವಣೆಗಳು ಹೇಗೆ ನಡೆಯಬೇಕು, ಯಾರಿಗೆಲ್ಲ ಮತದಾನದ ಹಕ್ಕು ಲಭ್ಯವಾಗಬೇಕು ಎಂಬೆಲ್ಲ ಚರ್ಚೆಗಳು ಲೆವಲರ್ಸ್‌ಗಳು ಪ್ರಕಟಿಸಿದ ಕಿರುಪುಸ್ತಿಕೆಗಳಿಂದ ಎದ್ದವು ಎಂಬ ಬಗ್ಗೆ ಓದಿದ್ದೀರಿ. ಕೇವಲ ಲೆವಲರ್ಸ್‌ಗಳ ವಿಚಾರದ ಒಮ್ಮುಖದ ಮಂಡನೆ ಚರ್ಚೆ ಎನಿಸುವುದಿಲ್ಲ. ಅಲ್ಲವೇ!

ಇಂಗ್ಲೆಂಡ್‌ನಲ್ಲಿ ಲೆವಲರ್ಸ್‌ಗಳು, ಡಿಗ್ಗರ್ಸ್‌ಗಳು ಬರೆದ ಕೆಲ ಮುಖ್ಯ ಪಾಂಪ್ಲೆಟ್‌ಗಳ ಮುಖ್ಯ ವಿಚಾರಗಳ ಬಗ್ಗೆ ಹಿಂದಿನ ನಾಲ್ಕಾರು ಲೇಖನಗಳಲ್ಲಿ ವಿವರಿಸಲಾಗಿದೆ. ಆದರೆ ಅಷ್ಟೇ ಅಲ್ಲ! ಲೆವಲರ್ಸ್‌ಗಳ ಧೀರ ನಾಯಕ ಲಿಲ್‌ಬರ್ನ್ ಒಬ್ಬನೇ ನೂರಕ್ಕಿಂತ ಹೆಚ್ಚು ಪಾಂಪ್ಲೆಟ್‌ಗಳನ್ನು ಬರೆದಿದ್ದಾನೆ ಎಂದರೆ ಯೋಚಿಸಿ.

ಕೆಲ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಸಂಗ್ರಹಣೆಯಲ್ಲಿ ಲಭ್ಯವಾಗಿರುವ ಕಿರುಪುಸ್ತಿಕೆಗಳ ಸಂಖ್ಯೆ 2200. ಇವು ಪ್ರಜಾಪ್ರಭುತ್ವ ಕ್ರಾಂತಿಯ ಮುನ್ನೆಲೆಯ ಕಾಲವಾದ 1600 ರಿಂದ ಕ್ರಾಂತಿಯ ಎಲ್ಲ ಹಂತಗಳೂ ಕೊನೆಯಾದ 1715 ರವರೆಗಿನ ಕಿರುಪುಸ್ತಿಕೆಗಳು. ಈ ಪ್ರಮಾಣದ ಕಿರುಪುಸ್ತಿಕೆಗಳು ಕೇವಲ ಪ್ರತ್ಯೇಕ ಪ್ರಕಟಣೆಗಳಲ್ಲ. ಒಂದರಲ್ಲಿನ ವಿಚಾರಗಳಿಗೆ ಮತ್ತೊಂದು ಉತ್ತರವಾಗಿ, ಆ ಉತ್ತರಕ್ಕೆ ಪ್ರತಿಯಾಗಿ ಮತ್ತೊಂದು ಹೀಗೆ ನಡೆದ ವೈಚಾರಿಕ ಸಂಘರ್ಷ. ಪಾಂಪ್ಲೆಟ್ ವಾರ್.

ಪಾಂಪ್ಲೆಟ್‌ಗಳ ಆಂದೋಲನದ ಆರಂಭಿಕ ಘಟ್ಟ

ಈ ಪಾಂಪ್ಲೆಟ್‌ಗಳ ಪ್ರಕಟಣೆ ಆರಂಭವಾಗಿದ್ದು ಪ್ರಜಾಪ್ರಭುತ್ವ ಕ್ರಾಂತಿಗೆ ಒಂದು ಶತಮಾನಕ್ಕಿಂತ ಮೊದಲು. ರೋಮಿನ ಪೋಪ್‌ನ, ಕ್ಯಾಥೊಲಿಕ್ ಚರ್ಚ್‌ನ ಧರ್ಮಾಧಿಕಾರಿಗಳ ಧಾರ್ಮಿಕ, ಆರ್ಥಿಕ, ರಾಜಕೀಯ ದಬ್ಬಾಳಿಕೆಯ ವಿರುದ್ಧದ ಪ್ರತಿಭಟನೆಯಾಗಿ.

14ನೇ ಶತಮಾನದಲ್ಲಿ ವೈಕ್ಲಿಫ್‌ರವರಿಂದ ಬೈಬಲ್‌ನ ಇಂಗ್ಲೀಷ್ ಭಾಷಾಂತರ, ಪೋಪ್‌ನ ದಬ್ಬಾಳಿಕೆ ಹಾಗೂ ಬೈಬಲ್‌ನ ಸರಳ ಧಾರ್ಮಿಕ ವಿಚಾರಗಳ ನಡುವೆ ಎಷ್ಟೊಂದು ಅಗಾಧ ಅಂತರ ಎಂಬುದನ್ನು ಎತ್ತಿ ತೋರಿಸಿದವಲ್ಲ. ಅದನ್ನು ಮನಗಂಡ ಇಂಗ್ಲಿಷ್ ಸಾಮಾನ್ಯ ಜನತೆ ಬೈಬಲ್ ಅನ್ನು ಗುಂಪು ಗುಂಪಾಗಿ ತಾವೇ ಓದಿಕೊಂಡರು. ಯಾವ ಬಿಷಪ್, ಪೋಪರ ತಿರುಚುವಿಕೆ ಇಲ್ಲದೆ ತಾವೇ ಅರ್ಥ ಮಾಡಿಕೊಂಡಂತೆ ಕ್ರಿಸ್ತನ ಆರಾಧನೆ ಕೈಗೊಂಡರು. ತಮ್ಮದೇ ಭಾಷೆಯಲ್ಲಿ ತಾವು ಪರಮ ಪವಿತ್ರ ಎಂದು ಭಾವಿಸಿದ್ದ ಬೈಬಲ್ ಅನ್ನು ಓದಲು ಸಿಕ್ಕಿದ ಅವಕಾಶ ಕೆಲವೇ ವರ್ಷಗಳ ಅವಧಿಯಲ್ಲಿ ಎಷ್ಟೊಂದು ಕ್ರಿಶ್ಚಿಯನ್ ಪಂಥಗಳು ಹುಟ್ಟಿಕೊಂಡವು ಎಂದರೆ ಯಾರಾದರೂ ಬೆಕ್ಕಸ ಬೆರಗಾಗುವಷ್ಟು!

ಈ ಪಂಥಗಳು ಸಮಾಜದ ವಿವಿಧ ವರ್ಗಗಳು ತಂತಮ್ಮ ಜೀವನದ ಸ್ಥಿತಿಗೆ ಅನುಸಾರವಾಗಿ ಬೈಬಲ್ ಅನ್ನು ಅರ್ಥೈಸಿಕೊಂಡವು. ಕ್ಯಾಥೊಲಿಕ್ ಚರ್ಚ್ ಹಾಗೂ ಪೋಪರ ದಬ್ಬಾಳಿಕೆಯನ್ನು ಟೀಕೆಗೆ ಒಳಪಡಿಸಲು ಹಾಗೂ ತಮ್ಮದೇ ಹೊಸ ವಿಚಾರಗಳನ್ನು ಇತರೆಲ್ಲರ ಮುಂದೆ ವಿವರಿಸಲು ಕಿರುಪುಸ್ತಿಕೆಗಳನ್ನು ಪ್ರಕಟಿಸತೊಡಗಿದರು. ಶಿಕ್ಷಣ ವಂಚಿತರಾಗಿದ್ದ ದುಡಿಯುವ ಜನರ ತಿಳುವಳಿಕೆಯನ್ನು ಹೆಚ್ಚಿಸಲು, ತಮ್ಮ ಸಮಸ್ಯೆಗಳ ಹೊರತಾಗಿ ಇಡೀ ಸಮಾಜದ, ದೇಶದ ಬಗೆಗೆ ಅರಿವನ್ನು ಪಡೆದುಕೊಳ್ಳಲು ಸಹಾಯವಾಯಿತು. ಇದು ಕಿರುಪುಸ್ತಿಕೆಗಳ ಆಂದೋಲನದ ಆರಂಭಿಕ ಘಟ್ಟ.

ರೈತರ ದಂಗೆಯಲ್ಲಿ ಕಿರುಪುಸ್ತಿಕೆಗಳ ಆಂದೋಲನ

ಈ ಹಿಂದೆ ಲಂಡನ್ ನಗರವನ್ನೇ ಆಕ್ರಮಿಸಿದ ರೈತ ದಂಗೆಯ ಬಗ್ಗೆ ಬರೆದದ್ದು ನೆನಪಿದೆಯಲ್ಲ. ಈ ರೈತ ದಂಗೆ ವೈಕ್ಲಿಫ್‌ರವರ ವಿಚಾರಗಳಿಂದ ಪ್ರಭಾವಿತವಾಗಿದ್ದ ಲೊಲ್ಲಾರ್ಡ್‌ಗಳೆಂಬ ಧಾರ್ಮಿಕ ಪಂಥದ ಸಮುದಾಯ, ನೇಕಾರರು ಮತ್ತು ರೈತರ ನಡುವೆ ಜನಪ್ರಿಯವಾಗಿತ್ತು. ಪಾಳೆಯಗಾರಿ ವ್ಯವಸ್ಥೆಯ ಜಮೀನುದಾರರು, ಜಹಗೀರುದಾರರಿಗೆ ಜೀತಗಾರಿಕೆ, ಗೇಣಿ, ಕಂದಾಯ, ಬಿಟ್ಟಿ ಸೇವೆ ಇತ್ಯಾದಿ ಸಲ್ಲಿಸಬೇಕಾಗಿಲ್ಲ ಎಂದು ಲೊಲ್ಲಾರ್ಡ್‌ಗಳು ಪ್ರತಿಪಾದಿಸಿದರು. ಹನ್ನೆರಡು ಅಂಶಗಳ ಪ್ರತಿಪಾದನೆಯನ್ನು ಮಂಡಿಸಿದರು. ಇವುಗಳನ್ನು ರಾಜರ ಮುಂದೆ, ಸಮಾಜದ ಮುಂದೆ

–ಪುಟ 7ಕ್ಕೆ



ಪಾಂಪ್ಲೆಟ್‌ಗಳೆಂದರೆ ...

ಪಾಂಪ್ಲೆಟ್ ಎನ್ನುವುದನ್ನು ಕನ್ನಡದಲ್ಲಿ ಕರಪತ್ರ ಎಂದು ಅನುವಾದಿಸಲಾಗಿದೆ. ಪಾಮ್ ಎಂದರೆ ಅಂಗೈಯಲ್ಲಿ ಹಿಡಿಯಬಹುದಾದ್ದು ಎಂದು ಅರ್ಥೈಸಿಕೊಂಡಂತೆ ಕಾಣುತ್ತದೆ. ಕರಪತ್ರ ಎಂದರೆ ಅಂಗೈಯಲ್ಲಿ ಸಣ್ಣ ಒಂದು ಅಥವಾ ಎರಡು ಪುಟದಲ್ಲಿ ಮುದ್ರಿಸಲಾಗಿದ್ದು, ಕೆಲವೊಮ್ಮೆ ನಾಲ್ಕು ಪುಟ ಇರಬಹುದು ಎಂಬುದು ನಮ್ಮಲ್ಲಿ ಸಾಮಾನ್ಯವಾಗಿರುವ ಕಲ್ಪನೆ.

ನಮ್ಮ ರಾಜ್ಯದಲ್ಲಿ ಒಂದು ಕಾರ್ಯಕ್ರಮ, ಪ್ರತಿಭಟನೆ, ಹೋರಾಟಗಳ ಬಗ್ಗೆ, ಅದರ ಕಾರಣ, ಒತ್ತಾಯಗಳ ಬಗ್ಗೆ ಸಾರ್ವಜನಿಕರಿಗೆ ವಿವರ ನೀಡುವುದು ಕರಪತ್ರಗಳು ಬಳಕೆಯಾಗುತ್ತಿರುವ ರೀತಿ. ಆದರೆ ಯುರೋಪಿನಲ್ಲಿ ಪಾಂಪ್ಲೆಟ್ ಎಂದರೆ ಎಂಟರಿಂದ 96 ಪುಟದವರೆಗೂ ಇರುತ್ತಿದ್ದವು. ಸಾಮಾನ್ಯವಾಗಿ ಅಗ್ಗವಾದ ಕಾಗದಗಳಲ್ಲಿ ಸರಳವಾಗಿ ಮುದ್ರಿಸಲಾಗುತ್ತಿದ್ದವು. ಪುಟಗಳಾಗಿ ಕತ್ತರಿಸದೆ, ಹೊಲಿಗೆ ಹಾಕದೆ ಕೇವಲ ಮಡಚುತ್ತಾ ಹೋಗಿರುವ ಹಾಳೆಗಳ ಕಂತೆ. ಅಪರೂಪಕ್ಕೆ ಪಿನ್ ಹಾಕಿರಬಹುದು. ಸರಾಸರಿಯಾಗಿ 25ರಿಂದ 30 ಪುಟದಷ್ಟು, ಇವುಗಳ ಸ್ವರೂಪ ಕನ್ನಡದಲ್ಲಿ ಕಿರುಪುಸ್ತಿಕೆಗಳು ಎಂದು ಕರೆಯುವಂತಹವು.

ಮುದ್ರಣ ತಂತ್ರಜ್ಞಾನದ ಬೆಳವಣಿಗೆ, ಮುದ್ರಣಾಲಯಗಳ ಲಭ್ಯತೆ ಕಿರುಪುಸ್ತಿಕೆಗಳ ಮುದ್ರಣಕ್ಕೆ ಅವಕಾಶ ಮಾಡಿಕೊಟ್ಟಿತು. ಇದರ ಜೊತೆಗೆ ಗಣನೀಯವಾದ ಸಾಕ್ಷರತೆ, ಅರಿವಿನ ಕುತೂಹಲ, ಎದುರಿಸುತ್ತಿದ್ದ ಬದುಕಿನ ಸಮಸ್ಯೆಗಳು ಮತ್ತು ಸಾಗರ ಸಾಹಸ, ದೂರ ವ್ಯಾಪಾರಗಳಿಂದ ಬದಲಾಗುತ್ತಿದ್ದ ಪರಿಸ್ಥಿತಿ, ಇವುಗಳಿಂದ ಎಚ್ಚರಾಗುತ್ತಿದ್ದ ಪ್ರಜ್ಞೆ ಈ ಕಿರುಪುಸ್ತಿಕೆಗಳಿಗೆ ವ್ಯಾಪಕ ಓದುಗರನ್ನು ದೊರಕಿಸಿತು. ಆಗಿನ ಪುಸ್ತಕದ ಅಂಗಡಿಗಳ ಮುಂಗಡೆಯಲ್ಲಿ ಇವುಗಳು ತೂಗು ಹಾಕಲಾಗುತ್ತಿತ್ತು.

ಪ್ರಚಲಿತವಾದ, ಬಹು ಚರ್ಚಿತ ವಿಷಯಗಳ ಬಗ್ಗೆ ವಿವಿಧ ವಾದಗಳ ಮಂಡನೆಗೆ ಬಹಳಷ್ಟು ಬಳಕೆಯಾಗುತ್ತಿತ್ತು. ತತ್ವಶಾಸ್ತ್ರ, ಸಾಹಿತ್ಯ ಇವುಗಳ ಬಗ್ಗೆ ಆಳವಾದ ವಿಷಯಗಳನ್ನೂ ಈ ಕಿರುಪುಸ್ತಿಕೆಗಳ ಮೂಲಕ ಮಂಡಿಸಲಾಗುತ್ತಿತ್ತು. ಅಂದು ದಿನಪತ್ರಿಕೆ, ವಾರಪತ್ರಿಕೆಗಳು ಇಲ್ಲದ ಕಾಲ. ನಿಯತಕಾಲಿಕೆಗಳು ಪ್ರಕಟವಾಗಲಾರಂಭಿಸಿದ ಮೇಲೆ ಕಿರುಪುಸ್ತಿಕೆಗಳ ಪ್ರಕಟಣೆಯ ಬಿರುಸು ತಗ್ಗಿತು. ಆದರೆ ನಿಲ್ಲಲಿಲ್ಲ. 19ನೆಯ ಶತಮಾನದವರೆಗೂ ಚಳುವಳಿಗಳು ತೀವ್ರಗೊಂಡ ಬಹಳಷ್ಟು ಸಂದರ್ಭಗಳಲ್ಲಿ ಕಿರುಪುಸ್ತಿಕೆಗಳು ಮುಖ್ಯ ಪಾತ್ರ ವಹಿಸುತ್ತಿದ್ದವು.

ಹತ್ತಾರು ಸಾವಿರ ಸಂಖ್ಯೆಯಲ್ಲಿ ಬರೆಯಲ್ಪಟ್ಟ, ವಿಶ್ವ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ ಪಾಂಪ್ಲೆಟ್‌ಗಳು, ಜನರನ್ನು ಸೆಳೆದ ಈ ಕಿರುಪುಸ್ತಿಕೆಗಳು ಇಂಗ್ಲಿಷ್, ಫ್ರೆಂಚ್, ಜರ್ಮನ್ ಭಾಷೆಯ ಶೈಲಿ, ವಾದ ಸಂವಾದಗಳ ಶೈಲಿಯನ್ನು ಬೆಳೆಸುವ ಹಾಗೂ ಜನರ ಮುಂದೆ ವಿಚಾರಗಳನ್ನು ಮುಂದಿಡುವ, ಮನವರಿಕೆ ಮಾಡುವ ಮಾದರಿಯನ್ನು ನೀಡುವ ಮೂಲಕ ಕೂಡಾ ಆಯಾ ಸಾಹಿತ್ಯಕ್ಕೆ ಕಾಣಿಕೆ ನೀಡಿದವು.

ದಮನಿತರ ಪಾಲಿನ ದುಡ್ಡಿಗೆ ಕನ್ನ ಹಾಕುವಿರೇಕೆ?

ಕರ್ನಾಟಕದ ಸಿದ್ದರಾಮಯ್ಯನವರ ಸರ್ಕಾರ ತನ್ನ ಹಳೆಯ ಚಾಳಿಯನ್ನೆ ಮುಂದುವರಿಸಿದೆ. ದಲಿತರು ಮತ್ತು ಬುಡಕಟ್ಟು ಸಮುದಾಯಗಳ ಅಭಿವೃದ್ದಿಗೆಂದು ಮೀಸಲಿಟ್ಟಿದ್ದ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಯೋಜನೆಯ ರೂ.42,017.51 ಕೋಟಿ ಮೊತ್ತದಲ್ಲಿ 11,896.84 ಕೋಟಿ ಹಣವನ್ನು ಸರ್ಕಾರದ ಐದು ಗ್ಯಾರಂಟಿಗಳಿಗೆ ವರ್ಗಾಯಿಸಿ ಸಮುದಾಯಗಳನ್ನು ವಂಚಿಸುತ್ತಿದೆ.



ಈ ವಾರ

ಎಸ್.ವೈ.ಗುರುಶಾಂತ್

ಇಲ್ಲವಾಗಿರುವ ಬದ್ಧತೆ

ಕಳೆದ ವರ್ಷವೂ 2024–25ರ ಸಾಲಿನಲ್ಲಿ ಇದೇ ರೀತಿ ಒಟ್ಟು 14,282.38 ಕೋಟಿ ರೂ.ಗಳ ಮೊತ್ತವನ್ನು ದುರ್ಬಳಕೆ ಮಾಡಿತ್ತು. ಈ ರೀತಿಯಲ್ಲಿ ಈ ಉಪ ಯೋಜನೆಯ ಹಣ ಬಳಸುವುದು ಸರ್ವಥಾ ಸರಿಯಲ್ಲ ಎಂದು ಜನ ಸಂಘಟನೆಗಳು ತೀವ್ರ ಆಕ್ಷೇಪ, ಕಡು ವಿರೋಧವನ್ನು ವ್ಯಕ್ತಪಡಿಸಿದ್ದವು, ಈಗಲೂ ಪ್ರತಿಭಟಿಸಿವೆ. ವಿರೋಧ ಪಕ್ಷವಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಆಕ್ಷೇಪವೂ ಇದೆ. ಅಧಿಕಾರದಲ್ಲಿರುವಾಗ ತನ್ನ ಈ ನಿಲುವಿಗೆ ಬದ್ಧವಾಗಿಲ್ಲದ ಈ ಪಕ್ಷಗಳು ಈಗ ರಾಜ್ಯದಾದ್ಯಂತ ಆಂದೋಲನವನ್ನು ಸಂಘಟಿಸುತ್ತಿವೆ. ಎಸ್‌ಸಿ ಮತ್ತು ಎಸ್‌ಟಿಗಳು ತಮ್ಮ ಕುರುಡು ಬೆಂಬಲಿಗರು ಎಂದು ಭ್ರಮಿಸಿರುವ ಕಾಂಗ್ರೆಸ್‌ನ ಈ ಜನದ್ರೋಹದ ಕೃತ್ಯವನ್ನು ಸಹಜವಾಗಿ ತನ್ನ ರಾಜಕೀಯಕ್ಕೆ ಬಳಸಿಕೊಳ್ಳಲು ಬಿಜೆಪಿ–ಜೆಡಿಎಸ್ ಯತ್ನಿಸುತ್ತಿವೆ. ಇಂತಹವುಗಳಿಗೆ ಅವಕಾಶ ನೀಡುತ್ತಿರುವುದು ಇದೇ ಕಾಂಗ್ರೆಸ್.

ಪಾಲಿಸದ ಘೋಷಿತ ಉದ್ದೇಶ

ಪರಿಶಿಷ್ಟ ಜಾತಿ ಉಪಯೋಜನೆ –ಎಸ್‌ಸಿಎಸ್‌ಪಿ, ಪರಿಶಿಷ್ಟ ಪಂಗಡಗಳ ಉಪಯೋಜನೆ– ಟಿಎಸ್‌ಪಿ ಈ ಎರಡೂ ಯೋಜನೆಗಳನ್ನು ಭಾರತ ಸರ್ಕಾರ ತನ್ನ ಐದನೆಯ ಪಂಚವಾರ್ಷಿಕ ಯೋಜನೆಯ (1974–79) ಅವಧಿಯಲ್ಲಿ ಜಾರಿಗೆ ತಂದಿತು. ಭಾರತದ ಒಕ್ಕೂಟದ ಸರ್ಕಾರದ ರೀತಿಯಲ್ಲಿಯೇ ರಾಜ್ಯ ಸರ್ಕಾರಗಳು ಕೂಡ ಈ ಉಪಯೋಜನೆಗಳನ್ನು ರೂಪಿಸಿ, ಅದಕ್ಕೆ ಹಣಕಾಸನ್ನು ಪ್ರತ್ಯೇಕವಾಗಿ ನೀಡಬೇಕು ಎಂದು ಅಂದು ನಿರ್ದೇಶಸಲಾಗಿತ್ತು. ಹಾಗೆ ನೋಡಿದರೆ ಭಾರತ ಸರ್ಕಾರದ ಯೋಜನಾ ಆಯೋಗವು ಬಜೆಟ್ಟಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಅವರ ಸಂಖ್ಯೆಗೆ ಅನುಗುಣವಾಗಿ (17+7=24%) ಹಣವನ್ನು ಬಜೆಟ್ಟಿನಲ್ಲಿ ಮೀಸಲಿಡಬೇಕು, ಅಷ್ಟು ಹಣ ಹಂಚಿಕೆಯಾಗಬೇಕು ಎಂದು ನಿರ್ದೇಶನ ನೀಡಿತು. ಆದರೆ ಇಲ್ಲಿವರೆಗೂ ಅದನ್ನು ಭಾರತ ಸರ್ಕಾರವನ್ನೂ ಒಳಗೊಂಡು ಯಾರೂ ಪಾಲಿಸಲಿಲ್ಲ ಎನ್ನುವುದು ಈ ಸರ್ಕಾರಗಳ ಸೋಗಲಾಡಿತನಕ್ಕೆ, ರಾಜಕೀಯ ಇಚ್ಛಾಶಕ್ತಿಯ ಹೀನತೆಗೆ ಒಂದು ಜ್ವಲಂತ ಉದಾಹರಣೆ.

ಎಸ್‌ಸಿ ಮತ್ತು ಎಸ್‌ಟಿ ಪಟ್ಟಿಯಲ್ಲಿರುವ ಈ ಸಮುದಾಯಗಳು ಚಾರಿತ್ರಿಕವಾಗಿ ಅತ್ಯಂತ ಅನ್ಯಾಯಕ್ಕೆ ಒಳಗಾಗಿವೆ. ಆ ಚಾರಿತ್ರಿಕ ಅಸಮಾನತೆ, ತಾರತಮ್ಯದ ನಿವಾರಣೆಗೆ ಈ ಸಮುದಾಯಗಳ ಅಭಿವೃದ್ಧಿ ಮುನ್ನಡೆಗೆ ವಿಶೇಷವಾದ ಗಮನ, ಅದಕ್ಕನುಗುಣವಾದ ಪ್ರತ್ಯೇಕ ಯೋಜನೆ ಅದಕ್ಕೆ ಬಜೆಟ್ ನ ಬಲ–ಹಣದ ನೀಡಿಕೆ ಮುಖ್ಯ ಎಂದು ಮನಗಂಡು ಈ ಉಪಯೋಜನೆಯನ್ನು ತರಲಾಯಿತು. ಅಂದರೆ ಸಾಮಾನ್ಯವಾಗಿ ರೂಪಿಸಲಾಗುವ, ಅಂಗೀಕರಿಸುವ ಸಾಮಾನ್ಯ ವಾರ್ಷಿಕ ಆಯ ವ್ಯಯದಲ್ಲಿ ಒಂದಿಷ್ಟು ಹನಿಗಳ ಫಲ ಸಿಗಬಹುದಾದರೂ ನಿಜಕ್ಕೂ ಒಟ್ಟಾರೆ ಈ ಸಮುದಾಯಗಳಿಗೆ ಅಗತ್ಯವಿರುವಷ್ಟು ಧಕ್ಕುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ವಿಶೇಷವಾದ ಯೋಜನೆಯ ಮೂಲಕ ಅವರ ಶೈಕ್ಷಣಿಕ, ಉದ್ಯೋಗ, ಆರೋಗ್ಯ, ಮೂಲ ಸೌಕರ್ಯಗಳು, ಆರ್ಥಿಕ ಸಬಲೀಕರಣಕ್ಕೆ, ಮಾನವ ಸಂಪನ್ಮೂಲಗಳ ಬೆಳವಣಿಗೆಗೆ ಒತ್ತು ನೀಡಲು ಈ ಹಣವನ್ನು ಬಳಸಬೇಕೆಂದು ನಿರ್ಧರಿಸಲಾಯಿತು. ಇದು ಸಾಮಾನ್ಯ ಆಯವ್ಯಯದ ಹಣದಲ್ಲಿ ವಿವಿಧ ಇಲಾಖೆಗಳ ಮೂಲಕ ವಿವಿಧ ಯೋಜನೆಗಳ ಮೂಲಕ ಸಿಗುವ ಫಲಾನುಭವಲ್ಲದೇ ವಿಶೇಷವಾದ ಯೋಜನೆ ಎನ್ನುವುದನ್ನು ಗಮನಿಸಬೇಕು. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಈ ಮೂಲ ಉದ್ದೇಶವನ್ನೇ ಉಲ್ಲಂಘಿಸಿದೆ.

ಎಲ್ಲರಿಗೂ ಗ್ಯಾರಂಟಿಗಳು

ಸ್ತ್ರೀ–ಶಕ್ತಿ, ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಅನ್ನ ಭಾಗ್ಯ, ಯುವ ನಿಧಿ, ಈ ಐದು ಗ್ಯಾರಂಟಿಗಳು ಚುನಾವಣೆಗೆ ಮುನ್ನ ಇಡೀ ಕರ್ನಾಟಕದ ಜನತೆಗೆ ಕಾಂಗ್ರೆಸ್ ಕೊಟ್ಟಿದ್ದ ವಚನ. ಅಧಿಕಾರಕ್ಕೆ ಬಂದ ನಂತರ ಅವುಗಳನ್ನು ಜಾರಿಗೆ ತರುವುದು ಅದರ ಹೊಣೆಗಾರಿಕೆ ನಿಜ, ಇದರಲ್ಲಿ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳು ಹೊರತಲ್ಲ. ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣವನ್ನು ಬಳಕೆ ಮಾಡಲಾಗುವುದು ಎಂದು ಹೇಳಿರಲಿಲ್ಲ. ಹಾಗಿದ್ದಲ್ಲಿ ಅಂದೇ ಈ ಸಮುದಾಯಗಳನ್ನು ಹೊರತುಪಡಿಸಿ ಐದು ಗ್ಯಾರಂಟಿಗಳು ಎಂದು ಹೇಳಬಹುದಿತ್ತಲ್ಲ! ಗ್ಯಾರಂಟಿ ಯೋಜನೆಗಳ ಫಲ ಎಲ್ಲ ಸಾಮಾನ್ಯ ಜನರಿಗೆ ಸಿಗುವಂತೆ ಈ ಸಮುದಾಯಗಳಿಗೂ ಕೂಡ ಸಿಗುವುದು ನ್ಯಾಯ ಸಮ್ಮತ. ಅದರಲ್ಲಿ ಅವರ ಸಹಜ ಪಾಲಿದೆ. ಅದಕ್ಕಾಗಿ ಮೀಸಲಿರಿಸಿರುವ ಹಣ ಇವರಿಗೆ ಬಳಸದೆ, ಈ ಸಮುದಾಯಗಳ ಅಭ್ಯುದಯಕ್ಕೆ ಮೀಸಲಿಸಿರುವ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದು ಈ ಸಮುದಾಯಗಳ ಅಭಿವೃದ್ಧಿಯ ಹಣವನ್ನು ಕಡಿತಗೊಳಿಸಿದಂತೆ ಆಗುತ್ತದೆ.

ವಂಚನೆಯ ಸಮರ್ಥನೆ ಏಕೆ?

ಪ್ರತಿ ಬಾರಿ ಆಯವ್ಯಯವನ್ನು ಮಂಡಿಸುವಾಗ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯನವರು ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಗೆ ಪ್ರತಿ ವರ್ಷವೂ ಹಣದ ಮೀಸಲಿರಿಸಿರುವುದನ್ನು ಹೆಚ್ಚಿಸುತ್ತಿದ್ದೇನೆ ಎಂದು ಕೊಚ್ಚಿಕೊಳ್ಳುತ್ತಾರೆ. 2024–25ರಲ್ಲಿ ಮೀಸಲಾಗಿಟ್ಟ 39,121 ಕೋಟಿ ರೂ.ಗಳಲ್ಲಿ 14,282.38 ಕೋಟಿ ಮತ್ತು 2025 –26ರಲ್ಲಿನ 42,017.51 ಕೋಟಿ ರೂಪಾಯಿಗಳಲ್ಲಿ ಈ ಸಮುದಾಯಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಹಣದಲ್ಲಿ 11,896.74 ಕೋಟಿ ರೂಪಾಯಿಗಳನ್ನು ಗ್ಯಾರಂಟಿಗೆ ಬಳಸುವುದೆಂದರೆ, ಅಷ್ಟು ಹಣ ಸಮುದಾಯಗಳ ಅಭಿವೃದ್ಧಿಗೆ ಕಡಿತವಾಗಿದೆ ಎನ್ನುವುದು ಸುಸ್ಪಷ್ಟ. ಆದರೆ ಕರ್ನಾಟಕದ ಸರ್ಕಾರದ ಸಮಾಜ ಕಲ್ಯಾಣ ಮಂತ್ರಿ ಹೆಚ್.ಸಿ.ಮಹದೇವಪ್ಪ, ಸಚಿವ ಪ್ರಿಯಾಂಕ್ ಖರ್ಗೆಯವರು ಮತ್ತು ಮುಖ್ಯಮಂತ್ರಿಗಳು ಈ ಮೇಲಿನ ಮಾತನ್ನು, ಟೀಕೆ ವಿಮರ್ಶೆಗಳನ್ನು ಒಪ್ಪುವುದಿಲ್ಲ. ಬದಲಾಗಿ ಸಾರಾಸಗಟು ತಿರಸ್ಕರಿಸುತ್ತಾರೆ. ದಲಿತ ಸಮುದಾಯದ ಪ್ರತಿನಿಧಿಗಳು ತಾವೆಂದು ಹೇಳಿಕೊಳ್ಳುವ ಈ ಸಚಿವರುಗಳು ಒಕ್ಕೊರಲಿನಿಂದ ಈ ಸಮುದಾಯಗಳಿಗೆ ಮಾಡಲಾಗುವ ವಂಚನೆಯನ್ನು ಸಮರ್ಥಿಸಿಕೊಳ್ಳುತ್ತಿರುವುದು ಅತ್ಯಂತ ನಾಚಿಕೆಗೇಡು. ಇದು ಸಾಮಾಜಿಕ ನ್ಯಾಯಕ್ಕೆ ಬಗೆಯುವ ದ್ರೋಹ.

ಇವನ್ನು ಕಾನೂನು ನಿಯಮದಡಿ 7ಎ,7ಬಿ, 7ಸಿ ಅಂತಿಯೇ ಹಣವನ್ನು ಬಳಸಲಾಗುತ್ತಿದೆ ಎಂಬ ಸಮಜಾಯಿಷಿಯನ್ನು ಅವರು ನೀಡುತ್ತಿದ್ದಾರೆ. ಈ ಉಪಯೋಜನೆಯಲ್ಲಿನ ಹಣವನ್ನು ಕಲ್ಯಾಣದ ಕಾರ್ಯಕ್ರಮ, ಮಾನವ ಅಭಿವೃದ್ಧಿಗೆ, ಈ ಸಮುದಾಯಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಮತ್ತು ಸಮಾಜದಲ್ಲಿರುವ ವಿವಿಧ ವರ್ಗ ಮತ್ತು ಸಮುದಾಯಗಳ ನಡುವಿನ ಅಸಮಾನತೆಯನ್ನು ತೊಲಗಿಸಿ ಸಮಾನತೆಯನ್ನು ಸಾಧಿಸಲು ಸೇತುವೆ ಕಟ್ಟಲು ಬಳಸಬೇಕು ಎಂದಿದೆ. ಆದರೆ ಇವುಗಳ ಕಡೆಗೆ ಸರ್ಕಾರದ ಲಕ್ಷ್ಯವೇ ಇಲ್ಲ. ಪ್ರತಿ ಬಾರಿಯೂ ಈ ಯೋಜನೆಗಳಿಗೆಂದು ಮೀಸಲಿಟ್ಟ ಹಣ ಪೂರ್ಣವಾಗಿ ಖರ್ಚಾಗುತ್ತಿರಲಿಲ್ಲ. ಮತ್ತು ಮುಂಜಾಗರೂಕತೆಯಿಂದ ಯೋಜನೆ ರೂಪಿಸಿ ಅಗತ್ಯಕ್ಕೆ ಅನುಗುಣವಾಗಿ ಖರ್ಚು ಮಾಡುತ್ತಲೂ ಇರಲಿಲ್ಲ. ಇನ್ನೇನು ಮಾರ್ಚ್ ತಿಂಗಳಿಗೆ ಬಜೆಟ್ಟಿನ ಲೆಕ್ಕ ಮುಕ್ತಾಯವಾಗುವುದು ಎನ್ನುವಾಗ ಅವಸರದಲ್ಲಿ ಯಾವುದ್ಯಾವುದು ಕೆಲಸಗಳಿಗೆ ಹಣ ಹಂಚಿಕೆ ಮಾಡಿ ಅದರಲ್ಲೂ ದೊಡ್ಡ ಪ್ರಮಾಣದ ಹಣವನ್ನು ಉಳಿಸಿಕೊಳ್ಳುತ್ತಿದ್ದು ನಡೆದು ಬಂದ ದಾರಿ. ಈ ಬಗ್ಗೆ ಬಂದ ತೀವ್ರ ಪ್ರತಿಭಟನೆಯ ಬಳಿಕ ಕಳೆದೆರಡು ವರ್ಷಗಳಲ್ಲಿ ಹಣವನ್ನು ಶೇ. 97ರಷ್ಟು ಖರ್ಚು ಮಾಡಲಾಗುತ್ತಿದೆ ಎಂದು ವರದಿ ಮಾಡಲಾಗುತ್ತಿದೆ. ಆದರೆ ಈ ಹಣ ಯಾವುದಕ್ಕೆ ಖರ್ಚಾಗುತ್ತಿದೆ, ಅದು ನಿಜಕ್ಕೂ ಈ ಸಮುದಾಯಗಳ ಅಗತ್ಯಗಳನ್ನು ಆಧರಿಸಿದೆಯೇ, ಅವರನ್ನು ಸಬಲೀಕರಣ ಗೊಳಿಸಲು ಬಳಸಲಾಗುತ್ತಿದೆಯೇ, ಹಾಗಿದ್ದರೆ ಆದ ಪ್ರಗತಿ ಏನು ಎಂಬ ಬಗ್ಗೆ ಸೂಕ್ತವಾದ ವಿಮರ್ಶೆ ಇಲ್ಲ, ಮೌಲ್ಯಮಾಪನವಿಲ್ಲ. ಅಂತಹ ಯೋಜನೆಗಳಿಲ್ಲ. ಹಾಗೆ ನೋಡಿದರೆ ಈ ಉಪಯೋಜನೆಗಳು ಜಾರಿಗೆ ಬಂದ ವರ್ಷಗಳಿಂದ ಇಲ್ಲಿಯವರೆಗೂ ಅವು ಉದ್ದೇಶದ ಗುರಿಯನ್ನು ಸಾಧಿಸಲಾಯಿತೇ ಎನ್ನುವ ಬಗ್ಗೆ ವಿವರವಾದ ವಿಮರ್ಶೆಯೂ ಇಲ್ಲ. ಆ ವಿಮರ್ಶೆಯನ್ನು ಕೈಗೊಳ್ಳಬೇಕು ಎಂದು ಸಂಘಟನೆಗಳು ಎಷ್ಟೇ ಒತ್ತಾಯಿಸಿದರೂ ಸರ್ಕಾರ ಅದರತ್ತ ಎಳ್ಳಷ್ಟು ಗಮನವನ್ನು ಕೊಡುತ್ತಿಲ್ಲ. ಹಾಗೆ ಕಾಲಹರಣ ಮಾಡುತ್ತಿರುವುದು ನಿಜಕ್ಕೂ ಈ ಸರ್ಕಾರಗಳಿಗೆ ಸಮುದಾಯಗಳ ಬಗ್ಗೆ ಕಾಳಜಿ ಇದೆಯೇ ಎಂಬ ಪ್ರಶ್ನೆ ಹುಟ್ಟುತ್ತದೆ. ಈಗಿರುವ ಸ್ಥಿತಿಯನ್ನು ಹಾಗೆ ಮುಂದುವರಿಸಿಕೊಂಡು ಹೋಗುವ ಜಾಣತನವನ್ನು ತೋರುತ್ತಿವೆ ಎಂಬ ಅನುಮಾನ ಬರುತ್ತದೆ.

ಈಗಾಗಲೇ ಅವಲೋಕಿಸಿರುವಂತೆ ಎಸ್‌ಸಿಪಿ ಮತ್ತು ಟಿಎಸ್‌ಪಿ ಯ ಹಣದ ದುರ್ಬಳಕೆ ಎನ್ನುವುದು ಅನೇಕ ದಶಕಗಳಿಂದ ನಡೆಯುತ್ತಿದೆ. ದಲಿತರು ಮತ್ತು ಬುಡಕಟ್ಟು ಜನರ ಹೆಸರಿನಲ್ಲಿ ಎಲ್ಲ ಸಾಮಾನ್ಯರಿಗೂ ಅನುಕೂಲವಾಗುವ ಯೋಜನೆಗಳಿಗೆ ಹಣವನ್ನು ದುರ್ಬಳಕೆ ಮಾಡುತ್ತಾ ಬರಲಾಗಿದೆ. ಅವರು ಕೊಡುವ ಸಬೂಬು ಏನೆಂದರೆ, ಇದರ ಪ್ರಯೋಜನವನ್ನು ದಲಿತ ಕುಟುಂಬಗಳು ಸಹ ಪಡೆಯುತ್ತವೆ. ಇಲ್ಲಿನ ಬಹು ದೊಡ್ಡ ಮೊತ್ತವನ್ನು ಲೋಕೋಪಯೋಗಿ ಕಾಮಗಾರಿಗಳಿಗೆ, ನೀರಾವರಿ ಯೋಜನೆಗಳಿಗೆ ಮುಂತಾದ ಸಾಮಾನ್ಯ ಕಾರ್ಯಯೋಜನೆಗಳಿಗೆ ದುರ್ಬಳಕೆ ಮಾಡಿಕೊಂಡು ಬರಲಾಗಿದೆ.

ಭಂಡತನ ಬಿಡಿ

ಈಗಲಾದರೂ ಭಂಡತನದಿಂದ ಮುಖ್ಯಮಂತ್ರಿಗಳು ಸಮರ್ಥಿಸಿಕೊಳ್ಳದೆ ಈ ಸಮುದಾಯಗಳಿಗೆ ಮೀಸಲಿರಿಸಿರುವ ಒಟ್ಟು ಹಣವನ್ನು ಸಮುದಾಯಗಳ ಸಬಲೀಕರಣ, ಮುನ್ನಡೆಗಾಗಿ ಬಳಸಲು ಕ್ರಮವಹಿಸಬೇಕು. ಇಲ್ಲವಾದರೆ, ಸಾಮಾಜಿಕ ನ್ಯಾಯ, ಸಮಾನತೆ ಸಾಧನೆಗೆ ಬದ್ಧ ಎನ್ನುವುದು ಈ ಸರ್ಕಾರದ ಬೊಗಳೆ ಭಾಷಣವಾಗಿ ಉಳಿಯುತ್ತದೆ. ಅತೀ ಕಡಿಮೆ ಪ್ರತಿರೋಧ ಇರುವ ದುರ್ಬಲರನ್ನು ದೋಚುವುದೇ ಸುಲಭದ ಮಾರ್ಗ ಎನ್ನುವ ಉದಾರೀಕರಣದ ಮಂತ್ರವನ್ನೇ ಪಾಲಿಸಲಾಗುತ್ತಿದೆ.

ಸಂಪನ್ಮೂಲ ಸಂಗ್ರಹಕ್ಕೆ ಪರ್ಯಾಯ ಹುಡುಕಿ

ಸರ್ಕಾರಕ್ಕೆ ಹಣಕಾಸಿನ ಕೊರತೆ ಇರಬಹುದು. ಜನರಿಗೆ ಉಪಯುಕ್ತವಾದ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ, ನಂತರ ಜಾರಿಗೊಳಿಸುವಾಗ ಅದಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳದೆ ಧುಮುಕಿದ್ದು ವಿಪರ್ಯಾಸ. ಒಂದು ವೇಳೆ ಹಣಕಾಸಿನ ಕೊರತೆ ಇದೆ ಎಂದು ಹೇಳುವ ಸರ್ಕಾರ ಒಂದು ಸರಿಯಾದ ಮಾರ್ಗದಲ್ಲಿ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಪರ್ಯಾಯವಾದ ರೂಪುರೇಷೆಗಳನ್ನು ರೂಡಿಸಿಕೊಳ್ಳಬೇಕಾಗುತ್ತದೆ ಹೊರತು ದುರ್ಬಲ ವರ್ಗದ ಜನರ ಹಣಕ್ಕೆ ಕೈಹಾಕುವ ಅಡ್ಡ ಮಾರ್ಗಗಳಲ್ಲ.




ಪದ್ಮಲತಾ

ಧರ್ಮಸ್ಥಳ ಗ್ರಾಮದ ಪದ್ಮಲತಾ ಪ್ರಕರಣ

ಮಾಹಿತಿ ಬಿಚ್ಚಿಟ್ಟ ಲಕ್ಷ್ಮಣ್‌ಗೌಡ

ಧರ್ಮಸ್ಥಳ ಗ್ರಾಮದಲ್ಲಿ ತಾನು ಸ್ವಚ್ಛತಾ ಕಾರ್ಯದಲ್ಲಿ ನಿಯುಕ್ತನಾಗಿದ್ದವನಾಗಿದ್ದು, ಆ ಅವಧಿಯಲ್ಲಿ ಒತ್ತಾಯಪೂರ್ವಕವಾಗಿ ಹಲವಾರು ದೇಹಗಳನ್ನು ಹೂಳುವ ಕೆಲಸ ಮಾಡಿದ್ದೇನೆಂದು ಅನಾಮಧೇಯ ವ್ಯಕ್ತಿಯೊಬ್ಬರ ದೂರು, ನಂತರದ ಬೆಳವಣಿಗೆಗಳನ್ನು ರಾಜ್ಯ, ದೇಶ ಮಾತ್ರವಲ್ಲದೆ ಜಗತ್ತಿನ ಮಾಧ್ಯಮಗಳು ಸುದ್ದಿಮಾಡುತ್ತಿವೆ. ರಾಜ್ಯ ಸರ್ಕಾರದಿಂದ ಎಸ್‌ಐಟಿ ರಚನೆಯಾಗಿ ತನಿಖೆಯೂ ಆರಂಭವಾಗಿದೆ. ಅಸ್ತಿಪಂಜರಗಳನ್ನು ಹುಡುಕುವ ಕಾರ್ಯವೂ ಅಲ್ಲಿ ನಡೆಯುತ್ತಿದೆ. ಲಕ್ಷಾಂತರ ಜನರ ದೃಷ್ಟಿ ಅತ್ತಕಡೆಯೇ ಇದೆ. ಈ ಸಂದರ್ಭದಲ್ಲಿ 1986ರಲ್ಲಿ ಹತ್ಯೆಗೀಡಾದ ವಿಧ್ಯಾರ್ಥಿನಿ ಪದ್ಮಲತಾ ಪ್ರಕರಣದ ಕುರಿತು ಜನರು ಮತ್ತೆ ಮಾತನಾಡತೊಡಗಿದ್ದಾರೆ. ಈ ಪ್ರಕರಣ ಕುರಿತಂತೆ, ಪದ್ಮಲತಾಳಿಗೆ ನ್ಯಾಯ ಸಿಗಬೇಕೆಂದು ಹೋರಾಟ ಮಾಡಿದವರಲ್ಲಿ ಒಬ್ಬರಾದ, ಅಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲೂಕು ಸಮಿತಿಯ ಉಪಾಧ್ಯಕ್ಷರಾಗಿದ್ದ ಲಕ್ಷ್ಮಣ್ ಗೌಡ ಅವರ ಸಂದರ್ಶನದ ಅಕ್ಷರ ರೂಪ ಇಲ್ಲಿದೆ.



ನಾನು, 1972ರಿಂದಲೇ ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯ. 1986ರಲ್ಲಿ ರೈತ ಸಂಘದ ತಾಲೂಕು ಸಮಿತಿಯ ಉಪಾಧ್ಯಕ್ಷನಾಗಿದ್ದೆ. ಧರ್ಮಸ್ಥಳ ಗ್ರಾಮದಲ್ಲಿಯೂ ಕೂಡ ನಮ್ಮ ಕರ್ನಾಟಕ ಪ್ರಾಂತ ರೈತ ಸಂಘಟನೆ ಇತ್ತು. ಅದು ಸಿಪಿಐ(ಎಂ) (ಭಾರತ ಕಮ್ಯೂನಿಸ್ಟ್ ಪಕ್ಷ –ಮಾರ್ಕ್ಸ್‌ವಾದಿ) ನೇತೃತ್ವದ ರೈತ ಸಂಘಟನೆ. ದೇವಾನಂದರವರು ಧರ್ಮಸ್ಥಳದ ರೈತ ಸಂಘದ ಅಧ್ಯಕ್ಷರಾಗಿದ್ದರು.

‘ಅವರು’ ಹೇಳುವವರೇ ಪಂಚಾಯ್ತಿಗೆ ಅಧ್ಯಕ್ಷರು

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ, ಗ್ರಾಮ ಪಂಚಾಯ್ತಿ ಹೋಗಿ ಮಂಡಲ ಪಂಚಾಯ್ತಿ ರಚನೆಯಾಯ್ತು. ದೇಶದಲ್ಲಿ ಎಲ್ಲಾ ಪಂಚಾಯ್ತಿಗಳಲ್ಲಿ ಚುನಾವಣೆ ನಡೆಯುತ್ತಿದ್ದರೆ, ನಮ್ಮ ಧರ್ಮಸ್ಥಳದಲ್ಲಿ ನಡೆಯುತ್ತಿರಲಿಲ್ಲ. ಉಳಿದ ಕಡೆ ಎರಡು ಮೂರು ಗ್ರಾಮಗಳು ಸೇರಿ ಒಂದು ಮಂಡಲ ಪಂಚಾಯಿತಿಯಾದರೆ, ಧರ್ಮಸ್ಥಳ ಒಂದೇ ಗ್ರಾಮಕ್ಕೆ ಒಂದು ಮಂಡಲ ಪಂಚಾಯ್ತಿ. ಆ ಗ್ರಾಮದ ಪಂಚಾಯಿತಿ ಆಗಲಿ ಅಥವಾ ಸ್ಥಳೀಯ ಕೊ ಅಪರೇಟಿವ್ ಸೊಸೈಟಿ ಆಗಲಿ, ಇಂತಹ ಯಾವುದೇ ಸಂಸ್ಥೆಗೆ ಚುನಾವಣೆ ಎಂಬುದು ಇಲ್ಲವೇ ಇಲ್ಲ. ‘ಅವರು’ ಯಾರನ್ನು ಹೇಳುತ್ತಾರೋ ಅವರೇ ಸದಸ್ಯರಾಗಬೇಕು, ‘ಅವರು’ ಹೇಳಿದವರೇ ಪಂಚಾಯಿತಿ ಅಧ್ಯಕ್ಷರಾಗಬೇಕು, ‘ಅವರು’ ಹೇಳಿದ ಹಾಗೆಯೇ ಪಂಚಾಯ್ತಿ ಇರಬೇಕು. ಅದು ನಡೆಯುತ್ತ ಬಂದ ಒಂದು ಪದ್ಧತಿ. ಒಂದು ಸರ್ವಾಧಿಕಾರದ ರೀತಿಯಲ್ಲಿ ನಡೆಯುತ್ತಾ ಬಂದಿದ್ದ ಊರು ಇದು.

ಚುನಾವಣೆಗೆ ಸ್ಪರ್ಧಿಸದಂತೆ ಒತ್ತಡ

‘ಇವರು’ ಒಕ್ಕಲೆಬ್ಬಿಸುವ ಪ್ರಶ್ನೆ ಬಂದಾಗ ನಾವು ಅಲ್ಲಿ ರೈತ ಸಂಘಟನೆ ಕಟ್ಟಿದೆವು. ಅಲ್ಲಿ ದೇವಾನಂದರು ರೈತ ಸಂಘದ ಅಧ್ಯಕ್ಷರಾಗಿದ್ದರು. ನಮಗೂ ಸಂಘಟನೆಯ ಬಲ ಇತ್ತು. ಮಂಡಲ ಪಂಚಾಯ್ತಿ ಚುನಾವಣೆ ಬಂತು. ನಾವು ಅಲ್ಲಿ ಚುನಾವಣೆಗೆ ಸ್ಪರ್ಧಿಸಲು ತೀರ್ಮಾನಿಸಿ ಸ್ಪರ್ಧೆ ಮಾಡಿದೆವು. ಚರಿತ್ರೆಯಲ್ಲೇ ಧರ್ಮಸ್ಥಳ ಗ್ರಾಮದಲ್ಲಿ ಚುನಾವಣೆ ಆಗಿಲ್ಲ, ಚುನಾವಣೆಗೆ ಸ್ಪರ್ಧೆ ಮಾಡಬಾರದು ಎಂದು ನಮ್ಮ ಮೇಲೆ ಒತ್ತಡ ಬಂತು. ನಾವು ನಾಮಪತ್ರ ಹಿಂತೆಗೆಯಲಿಲ್ಲ. ಸಿಪಿಐ(ಎಂ) ಪಕ್ಷದ ಬೆಳ್ತಂಗಡಿ ತಾಲ್ಲೂಕು ಸಮಿತಿಯ ಮೇಲೆ ಒತ್ತಡ ಬಂದಾಗ, ನಾವು ಸ್ಥಳೀಯ ಸಮಿತಿ ಸದಸ್ಯರು ಏನು ಹೇಳುತ್ತಾರೆ ಎಂಬುದನ್ನು ಗಮನಕ್ಕೆ ತೆಗೆದುಕೊಂಡು, ಅವರು ಹೇಳಿದಂತೆ ನಡೆದುಕೊಳ್ಳಬೇಕಾಗಿತ್ತು. ಸ್ಥಳೀಯ ಸಮಿತಿ ತೆಗೆದುಕೊಳ್ಳುವ ತೀರ್ಮಾನಕ್ಕೆ ತಾಲ್ಲೂಕು ಸಮಿತಿ ಬೆಂಬಲ ನೀಡಬೇಕು ಎಂಬ ತೀರ್ಮಾನಕ್ಕೆ ಬಂದೆವು. ಸ್ಥಳೀಯ ಸಮಿತಿ ಸ್ಪರ್ಧೆ ಮಾಡಲು ತೀರ್ಮಾನಿಸಿತು. ನಾಲ್ಕೈದು ಸ್ಥಾನಗಳಲ್ಲಿ ಸ್ಪರ್ಧೆ ಮಾಡಿ, ಪ್ರಬಲ ಪೈಪೋಟಿ ಕೊಟ್ಟಿದ್ದೇವೆ. ಸ್ಥಾನ ಗೆಲ್ಲಲು ಆಗಲಿಲ್ಲ, ಆದರೆ, 2, 4 ಹೀಗೆ ಹತ್ತಕ್ಕಿಂತ ಕಡಿಮೆ ಮತಗಳಿಂದ ಸೋತಿದ್ದೇವೆ.

ದೇವಾನಂದರ ಮಗಳು ಪದ್ಮಲತಾ ಕಿಡ್ನಾಪ್

ಅದುವರೆಗೆ ಇವರಿಗೆ ಸ್ಪರ್ಧೆಯೇ ಕೊಡದ ಊರಿನಲ್ಲಿ ಚುನಾವಣೆಗೆ ನಿಂತು ಪ್ರಭಲ ಸ್ಪರ್ಧೆ ಕೊಟ್ಟಿದ್ದೇವೆ ಎಂಬುದೇ ಅವರಿಗೆ ತಲೆನೋವಾಗಿದೆ. ಈ ಕಾರಣದಿಂದ ಇಲ್ಲಿಂದ ರೈತ ಸಂಘ, ಕಮ್ಯೂನಿಸ್ಟ್ ಪಕ್ಷವನ್ನು ತೆಗೆಯಬೇಕು. ಆಗ ಮಾತ್ರ ಎಂದಿನಂತೆ ಸರ್ವಾಧಿಕಾರ ಮುಂದುವರಿಸಿಕೊಂಡು ಹೋಗಬಹುದು ಎಂಬ ತೀರ್ಮಾನಕ್ಕೆ ಅವರು ಬಂದರು. ಇದಕ್ಕೆ ಏನು ಮಾಡಬೇಕು? ರೈತ ಸಂಘದ ಅಧ್ಯಕ್ಷ ದೇವಾನಂದರನ್ನು ಬಗ್ಗಿಸಿದರೆ, ಇಡೀ ಸಂಘಟನೆ ಹೋಗುತ್ತೆ, ಎಲ್ಲಾ ಸರಿಹೋಗುತ್ತೆ ಎಂಬ ಲೆಕ್ಕಾಚಾರ ಅವರಿಗೆ. ಅದಕ್ಕೆ ದೇವಾನಂದರು ಬಗ್ಗೋದಿಲ್ಲ. ಅವರು ಮೊದಲು ಹಲವು ಬಾರಿ ದೇವಾನಂದರನ್ನು ಮಾತುಕತೆಗೆ ಕರೆದಿದ್ದಾರೆ. ದೇವಾನಂದರು ಹೋಗಲಿಲ್ಲ. ಹಾಗಾಗಿ, ದೇವಾನಂದರನ್ನು ಕರೆದು ಮಾತನಾಡಲು ಅವರು ಮುಂದಾಗಲಿಲ್ಲ. ದೇವಾನಂದರನ್ನು ಬಗ್ಗಿಸಿ, ರೈತಸಂಘದಿಂದ, ಕಮ್ಯೂನಿಸ್ಟ್ ಪಕ್ಷದಿಂದ ಬಿಡಿಸಿದರೆ, ಧರ್ಮಸ್ಥಳದಲ್ಲಿ ನಡೆಯುವ ಯಾವುದೇ ಅನಾಚಾರದ ಬಗ್ಗೆ ಮಾತನಾಡುವ ಜನ ಇರುವುದಿಲ್ಲ. ದೇವಾನಂದರ ನಾಯಕತ್ವದಲ್ಲಿ ಮಾತ್ರ ಆ ಸುದ್ದಿಗಳೆಲ್ಲ ಬರುತ್ತವೆ ಎಂಬ ಲೆಕ್ಕಾಚಾರ ಅವರದ್ದು. 1986ರ ಡಿಸೆಂಬರ್ 22ರಂದು ದೇವಾನಂದರ ಮಗಳು ಪದ್ಮಲತಾಳನ್ನು ಕಿಡ್ನಾಪ್ ಮಾಡಿಸಿದರು. ಮಗಳು ಕಾಣದಾದಾಗ ದೇವಾನಂದರು ಖಂಡಿತ ತಮ್ಮ ಕಾಲು ಹಿಡಿಯುತ್ತಾರೆ, ಮಗಳನ್ನು ಬಿಡಿಸಿಕೊಡಿ, ಹುಡುಕಿಕೊಡಿ ಎಂದು ಬೇಡಿಕೊಳ್ಳುತ್ತಾರೆ ಎಂಬ ಲೆಕ್ಕಾಚಾರ ಅವರಲ್ಲಿತ್ತು ಎಂಬುದು ನಮ್ಮ ಅಂದಾಜು.

ಪೊಲೀಸರು ದೂರು ದಾಖಲಿಸಿಕೊಳ್ಳಲಿಲ್ಲ

ಆದರೆ, ಪರಿಸ್ಥಿತಿ ಆ ರೀತಿ ಇರಲಿಲ್ಲ. ದೇವಾನಂದರು ಅವರ ಕಾಲು ಹಿಡಿಯಲು ಹೋಗಲಿಲ್ಲ. ತನ್ನ ಮಗಳು ಪದ್ಮಲತಾ ಕಾಣೆಯಾದ ಬಗ್ಗೆ ದೇವಾನಂದ ಅವರು ಪೊಲೀಸರಿಗೆ ದೂರು ಕೊಡಲು ಹೋಗಿದ್ದಾರೆ. ನಿನ್ನ ಮಗಳು ಯಾರ ಜೊತೆಗಾದರೂ ಓಡಿಹೋಗಿರಬೇಕು ಎಂದು ಏನೇನೋ ಹೇಳಿದ ಪೊಲೀಸರು ದೂರು ದಾಖಲಿಸಿಕೊಳ್ಳಲಿಲ್ಲ. ವಿಷ್ಣುಮೂರ್ತಿ ಸೇರಿ ಪಕ್ಷದ ಒಂದಷ್ಟು ಜನರು ಜಗಳವಾಡಿದ ನಂತರ ದೂರು ದಾಖಲಿಸಿಕೊಂಡರು. ಕಾಲೇಜಿನ ಪ್ರಿನ್ಸಿಪಾಲರು ಮತ್ತು ಮತ್ತೊಬ್ಬರ ಹೆಸರನ್ನೇ ಕೊಟ್ಟು, ಅವರೇ ಕಿಡ್ನಾಪ್ ಮಾಡಿದ್ದು ಎಂದು ದೂರು ಕೊಟ್ಟಿದ್ದೇವೆ ಎಂದು ದೇವಾನಂದ ಮತ್ತು ವಿಷ್ಣುಮೂರ್ತಿ ಹೇಳುತ್ತಾರೆ.

ಅಮಾಯಕನನ್ನು ಸಿಲುಕಿಸುವ ಪ್ರಯತ್ನ

ಪ್ರಿನ್ಸಿಪಾಲರು ಮತ್ತು ಮತ್ತೊಬ್ಬರ ಮೇಲೆ ಆರೋಪ ಬರುವುದನ್ನು ತಪ್ಪಿಸಲು, ಯಾರಾದರೂ ಒಬ್ಬ ಅಮಾಯಕನನ್ನು ಇದರಲ್ಲಿ ಸಿಲುಕಿಸಬೇಕು ಎಂಬ ಕಾರಣಕ್ಕೆ, ನಮ್ಮ ಊರಿನ, ಕುಂಬಾರ ಜನಾಂಗದ, ಬಡ ಕುಟುಂಬದ ವಸಂತ್ ಎಂಬ ಜೀಪ್ ಚಾಲಕನನ್ನು ಅಪರಾಧಿಯನ್ನಾಗಿ ಮಾಡುವ ಪ್ರಯತ್ನ ಪೊಲೀಸರಿಂದ ನಡೆಯಿತು.

ಆಗ ಬಸ್ಸುಗಳು ಬಹಳಷ್ಟು ಕಡಿಮೆ ಇದ್ದವು. ನಮ್ಮ ಊರೂ ಸೇರಿದಂತೆ, ಹಳ್ಳಿಗಳಿಂದ ಜನರು ಧರ್ಮಸ್ಥಳದವರೆಗೆ ಜೀಪ್ ಗಳಲ್ಲಿಯೇ ಪ್ರಯಾಣ ಮಾಡಬೇಕಿತ್ತು. ಶಾಲೆಗೆ ಹೋಗುವ ಸಮಯಕ್ಕೆ ಯಾವ ಜೀಪ್ ಬರುತ್ತದೊ ಆ ಜೀಪಿನಲ್ಲಿ ಮಕ್ಕಳು ಹೋಗುತ್ತಿದ್ದರು. ಸಂಬಳಕ್ಕೆ ದುಡಿಯುತ್ತಿದ್ದ ಚಾಲಕ ವಸಂತ್ ನ ಜೀಪಿನಲ್ಲಿಯೂ ಪದ್ಮಲತಾ ಪ್ರಯಾಣಿಸುತ್ತಿದ್ದಳು. ಆತನದು ಬಡ ಕುಟುಂಬ. ವಸಂತ್ ನ ರಕ್ಷಣೆ ಮಾಡಲು ಯಾರೂ ಬರುವುದಿಲ್ಲ, ಪದ್ಮಲತಾ ಕಾಣೆಯಾದ ಪ್ರಕರಣವನ್ನು ಇವನ ತಲೆಗೆ ಕಟ್ಟಬಹುದು ಎಂಬ ಲೆಕ್ಕಾಚಾರದಿಂದ, ಆತನನ್ನು ಹಿಡಿದು ಆತನನ್ನೇ ಆರೋಪಿಯನ್ನಾಗಿ ಮಾಡಲು ಮುಂದಾದರು. (ಸೌಜನ್ಯ ಅತ್ಯಾಚಾರ ಮತ್ತು ಹತ್ಯೆಯ ಪ್ರಕರಣದಲ್ಲಿ ಸಹಾ ನಿರಪರಾಧಿ ಸಂತೋಷ್ ರಾವ್ ನನ್ನು ಪೊಲೀಸರು ಆರೋಪಿಯನ್ನಾಗಿ ಮಾಡಿದ್ದರು.) ವಸಂತ್‌ನನ್ನು ಔಟ್ ಪೋಸ್ಟ್ ಠಾಣೆಗೆ ಕರೆದೊಯ್ದರು, ಅಲ್ಲಿಂದ ಬೆಳ್ತಂಗಡಿ ಠಾಣೆಗೆ ಕರೆದೊಯ್ದರು. ಠಾಣೆಯಲ್ಲಿ ಬಹಳಷ್ಟು ಹೊಡೆದಿದರು. ಆದರೆ, ವಸಂತ್ ವಿರುದ್ಧ ಯಾವುದೇ ದೂರುಗಳಿರಲಿಲ್ಲ.

ಪೊಲೀಸರ ಕುತಂತ್ರ ಫಲಿಸಲಿಲ್ಲ

ಇದನ್ನೆಲ್ಲಾ ನೋಡಿದ ಇಲ್ಲಿನ ಕಾಂಗ್ರೆಸ್ ಹಿರಿಯ ನಾಯಕ ಮತ್ತು ಸಮಾಜ ಸೇವಕರಾದ ಸಿ.ಎ. ವರ್ಗೀಸ್ ತಮ್ಮ ಪಕ್ಷದ ಕೆಲ ಸ್ನೇಹಿತರನ್ನು ಸೇರಿಸಿಕೊಂಡು, ಏನಾದರೂ ಮಾಡಿ ಚಾಲಕ ವಸಂತ್ ನನ್ನು ಬಿಡಿಸಬೇಕು, ಇಲ್ಲದಿದ್ದರೆ ಆತನನ್ನು ಅವರು ಕೊಲ್ಲುತ್ತಾರೆ ಎಂದು, ಕುಂಬಾರ ಜನಾಂಗ ಪೋಪಣ್ಣನ ಮನೆಗೆ ಹೋಗಿ, ಅವರಿಗೆ ಮುಂದೆ ಆಗಬಹುದಾದ ಅನಾಹುತದ ಬಗ್ಗೆ ತಿಳಿಸಿದರು ಮತ್ತು ಹೆಚ್ಚಿನ ಸಂಖ್ಯೆಯ ಜನರೊಂದಿಗೆ ಬೆಳ್ತಂಗಡಿ ಠಾಣೆಗೆ ಮುತ್ತಿಗೆ ಹಾಕಿದರು. ಪೊಲೀಸರು ವಸಂತನನ್ನು ಮತ್ತೆ ಔಟ್ ಪೋಸ್ಟ್ ಠಾಣೆಗೆ ಕರೆದೊಯ್ಯಲು ಠಾಣೆಯಿಂದ ಹೊರಗೆ ಕರೆತರುವಾಗ, ನಮ್ಮ ಜನರೆಲ್ಲಾ ಅಲ್ಲೇ ಇದ್ದರು. ಯುವಕರೆಲ್ಲಾ ಸೇರಿ ವಸಂತ್ ನ ರಟ್ಟೆ ಹಿಡಿದು ತಮ್ಮ ಜೀಪಿಗೆ ಹಾಕಿ ಕರೆತಂದರು. ವಸಂತ್ ಮೇಲೆ ಯಾವುದೇ ದೂರುಗಳಿರಲಿಲ್ಲವಾದ ಕಾರಣ ಆತನನ್ನು ವಶಕ್ಕೆ ಪಡೆಯಲು ಪೊಲೀಸರು ಮತ್ತೆ ಬರಲಿಲ್ಲ. ಹೀಗಾಗಿ, ನಿರಪರಾಧಿಯನ್ನು ಅಪರಾಧಿಯನ್ನಾಗಿ ಮಾಡುವ ಪೊಲೀಸರ ಕುತಂತ್ರ ಫಲಿಸಲಿಲ್ಲ.

58 ದಿನಗಳ ನಂತರ ಹೆಣವಾಗಿ, ಕೊಳೆತ ಸ್ಥಿತಿಯಲ್ಲಿ ಪದ್ಮಲತಾ

1987ರ ಪೆಬ್ರವರಿ 17ರಂದು 56 ದಿನಗಳ ನಂತರ ಪದ್ಮಲತಾ ಹೆಣವಾಗಿ, ಕೊಳೆತ ಸ್ಥಿತಿಯಲ್ಲಿ ನೆಗೆಹೊಲೆಯಲ್ಲಿ ಕುದುರೆ ಹತ್ತಿರ ಸಿಕ್ಕಳು. ಅವಳ ಹುಡುಪು ಮತ್ತು ಕೈಗಡಿಯಾರದ ಮೂಲಕ ಆಕೆಯ ಗುರುತು ಹಿಡಿಯಲಾಯಿತು. ಶವ ಕಲ್ಲಿನ ಮೇಲಿತ್ತು ಎಂದು ದೇವಾನಂದರು ನನಗೆ ಹೇಳಿದರು. ಕೆಲವರು ನೀರಿನಲ್ಲಿತ್ತು ಎಂದು ಹೇಳುತ್ತಾರೆ. ನೀರಿನಲ್ಲಿ ಇದ್ದರೆ, ಶವ ಮುಂದೆ ಹೋಗಬಹುದಿತ್ತು ಎಂಬುದು ನನ್ನ ಲೆಕ್ಕಾಚಾರ.

ಶವ ಸಿಕ್ಕಿದ ದಿನವೇ ನಮ್ಮ ರೈತ ➚

ಸಂಘದ ಸದಸ್ಯರೊಬ್ಬರು ನನ್ನ ಬಳಿ ಬಂದು ಮಾಹಿತಿ ನೀಡಿದರು. ಈ ವಿಷಯ ಕೇಳಿ ದಿಗ್ಭ್ರಮೆಗೊಂಡು, ತಕ್ಷಣವೇ ಮಂಗಳೂರಿನ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಕಚೇರಿಗೆ ಹೊರಟೆ. ಅಲ್ಲಿ ಪಕ್ಷದ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಬಿ.ಮಾದವ ಇದ್ದರು. “ನೀವು ಈ ತಕ್ಷಣವೇ ಸ್ಥಳಕ್ಕೆ ಹೋಗಿ. ಶವವನ್ನು ಸುಡಲು ಬಿಡಬೇಡಿ, ಹೂಳಬೇಕು. ಶವವನ್ನು ಹೂತ ನಂತರವೂ ಅವರು ಹೊರತೆಗೆಯಬಹುದು, ಜಾಗ್ರತೆಯಿಂದ ಅದನ್ನು ಕಾಯಬೇಕು ಎಂದು ಬಿ.ಮಾದವ್ ಹೇಳಿದರು. ಹಣದ ಪ್ರಭಾವದಿಂದ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನಮಾಡಿದರೂ, ಪ್ರಕರಣವನ್ನು ಮತ್ತೆ ಎಬ್ಬಿಸಲು ಸಾಧ್ಯವಾಗುತ್ತದೆ. ಮತ್ತೊಮ್ಮೆ ಪೋಸ್ಟ್ ಮಾರ್ಟಮ್ ಮಾಡಿಸಬಹುದು, ಶವವೇ ಇಲ್ಲದಿದ್ದರೆ ಪೋಸ್ಟ್ ಮಾರ್ಟಮ್ ಮಾಡಿಸುವುದಾದರೂ ಹೇಗೆ?

ಪದ್ಮಲತಾಳ ಶವವಿದ್ದ ಸ್ಥಳಕ್ಕೆ ವಿದ್ಯಾರ್ಥಿ ರಂಗದ ಮುಖಂಡರಾಗಿದ್ದ ಸುನಿಲ್ ನಾಟೆಕರ್ ಬಂದ. ದೇವಾನಂದರನ್ನು ಪಕ್ಷದಿಂದ ಬಿಡಿಸುವುದಕ್ಕಾಗಿ ಮಗಳನ್ನು ಇವರು ಕಿಡ್ನಾಪ್ ಮಾಡಿದ್ದಾರೆಂದು ನಾನು ಹೇಳಿದೆ. ಅದಕ್ಕವರು, ‘ನೀವು ಹೇಳಿದಂತೆ ಒಂದೇ ಯಾಂಗಲ್‌ನಲ್ಲಿ ತನಿಖೆ ಮಾಡಿದರೆ ಆಗುತ್ತಾ’ ಎಂದು ಕೇಳಿದರು. ಆ ಯಾಂಗಲ್ ಬಿಟ್ಟು ತನಿಖೆ ಮಾಡಿದರೆ ಅಪರಾಧಿಗಳು ಸಿಗುತ್ತಾರಾ ಎಂದು ನಾನು ಕೇಳಿದೆ. ಆ ಯಾಂಗಲ್ ಬಿಟ್ಟು ತನಿಖೆ ಮಾಡಿದ್ದರಿಂದ ಅಪರಾಧಿಗಳು ಇಲ್ಲಿಯವರೆಗೆ ಸಿಗಲಿಲ್ಲ ಎಂಬುದು ನನ್ನ ಲೆಕ್ಕಾಚಾರ.

ಶವ ಸಿಕ್ಕ ನಂತರವೂ ನಮ್ಮ ಹೋರಾಟವನ್ನು ನಾವು ಮುಂದುವರಿಸಿದೆವು. ಒಮ್ಮೆ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸುವ ಸಂದರ್ಭದಲ್ಲಿ, ಪ್ರತಿಭಟನಾಕಾರರಿಗಿಂತ ಹೆಚ್ಚು ಜನರನ್ನು ಅವರು ಕರೆತಂದರು. ಅವರು ದೇವರ ಹೆಸರನ್ನು ಮುಂದಿಟ್ಟು, ನಮ್ಮನ್ನು ಯಾರೂ ಮುಟ್ಟಬಾರದು ಎಂದು ಪೊಲೀಸ್ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ರಾಜಕೀಯ ನಾಯಕರಿಗೆ ತೋರಿಸುವ ರೀತಿಯಲ್ಲಿ ಪ್ರತಿಭಟನೆ ಕೂಡ ಮಾಡಿದರು.

ವಿಧಾನಸಭೆಯಲ್ಲಿ ಪ್ರಶ್ನೆ ಮಾಡದಂತೆ ತಡೆಯುವ ಪ್ರಯತ್ನ

ಪದ್ಮಲತಾಳ ಈ ಪ್ರಕರಣ ಎಲ್ಲಾ ಪತ್ರಿಕೆಗಳಲ್ಲಿ ಬಂತು. ಈ ಪತ್ರಿಕೆಗಳನ್ನೇ ಆಧಾರವಾಗಿಟ್ಟುಕೊಂಡು ನಾವು ವಿಧಾನಸಭೆಯಲ್ಲಿ ಪ್ರಶ್ನೆಮಾಡಲು ಮುಂದಾದೆವು. ಅಂದು ಸಿಪಿಐ(ಎಂ)ನ ಆರ್.ವೆಂಕಟರಾಮಯ್ಯನವರು ಮುಳುಬಾಗಿಲು ಕ್ಷೇತ್ರದ ಶಾಸಕರಾಗಿದ್ದರು. ಶಾಸಕರಿಗೆ ಬಿ.ವಿಷ್ಣುಮೂರ್ತಿಯವರು ಈ ಎಲ್ಲಾ ದಾಖಲೆಗಳನ್ನು (ಪತ್ರಿಕೆಗಳಲ್ಲಿ ಬಂದ ಸುದ್ದಿಗಳು, ದೂರು ಕೊಟ್ಟಿದ್ದಕ್ಕೆ ಸ್ವೀಕೃತಿ ಪತ್ರ ಸೇರಿದಂತೆ) ಒದಗಿಸಿಕೊಟ್ಟರು.

ಈ ರೀತಿ ವಿಧಾನಸಭೆಯಲ್ಲಿ ಪ್ರಶ್ನೆ ಎತ್ತುವ ಸಿದ್ಧತೆಯಲ್ಲಿದ್ದ ವಿಷಯ ಇವರಿಗೆ ಗೊತ್ತಾಗಿದೆ. ಧರ್ಮಸ್ಥಳದ ಅನುಯಾಯಿಯಾಗಿದ್ದ ವಸಂತಬಂಗೇರ ಅವರು, ಆ ಮತ್ತೊಬ್ಬರನ್ನು ಕರೆದುಕೊಡು ಶಾಸಕರಾದ ಆರ್. ವೆಂಕಟರಾಮಯ್ಯನವರ ಬಳಿ ಹೋಗಿದ್ದಾರೆ. ಇದು ಧರ್ಮಸ್ಥಳ, ದೇವರ ಪ್ರಶ್ನೆ, ಅಲ್ಲಿ ದೇವರಿಗೆ ಅಪಮಾನ ಆಗುತ್ತದೆ, ನೀವು ವಿಧಾನಸಭೆಯಲ್ಲಿ ಪ್ರಶ್ನೆ ಮಾಡಬಾರದು ಎಂದು ಹೇಳುತ್ತಾರೆ. ಆಗ ವೆಂಕಟರಾಮಯ್ಯ ಒಂದೇ ಮಾತನ್ನು ಹೇಳಿದರು, “ನಾನು ಕಮ್ಯೂನಿಸ್ಟ್, ನನ್ನ ಕಾರ್ಯಕರ್ತರು ಅಲ್ಲಿ ಏನು ಮಾಡುತ್ತಾರೆ, ಅವರು ಏನು ಹೇಳುತ್ತಾರೆ ಅದನ್ನು ನಂಬುವವನು ನಾನು. ನೀವು ಇಲ್ಲಿಗೆ ಬಂದದ್ದು ತಪ್ಪು, ನಿಮಗೆ ನನ್ನ ಬಳಿ ಮಾತಾಡೊ ಅರ್ಹತೆ ಇಲ್ಲ. ವಿಧಾನಸಭೆಯಲ್ಲಿ ಪ್ರಶ್ನೆ ಮಾಡ್ಬೇಕೋ, ಬಿಡ್ಬೇಕೊ ಅದನ್ನು ತೀರ್ಮಾನ ಮಾಡುವವನು ನಾನು. ನೀವು ಇಲ್ಲಿಂದ ಹೋಗಿ” ಎಂದು ಇಬ್ಬರನ್ನೂ ಹೊರಗೆ ಹಾಕಿದರು. ಆರ್. ವೆಂಕಟರಾಮಯ್ಯನವರು ವಿಧಾನಸಭೆಯಲ್ಲಿ ಈ ಪ್ರಶ್ನೆ ಎತ್ತಿದರು. ಇದರ ಬಗ್ಗೆ ಸರಿಯಾದ ತನಿಖೆ ಮಾಡಬೇಕು ಎಂದು ಒತ್ತಾಯಿಸಿದರು.

ಸಿಓಡಿ ತನಿಖೆ

ಶಾಸಕರು ವಿಧಾನಸಭೆಯಲ್ಲಿ ಪ್ರಶ್ನೆಮಾಡಿದ ಮರುದಿನವೇ ಗೃಹ ಸಚಿವರಾಗಿದ್ದ ಬಿ.ರಾಚಯ್ಯನವರು ದೇವಾನಂದರ ಮನೆಗೆ ಬಂದು, ಸಂತಾಪ ಸೂಚಿಸಿ, ಕುಟುಂಬಕ್ಕೆ ಸಮಾಧಾನ ಹೇಳಿದರು. ಪ್ರಕರಣವನ್ನು ಸಿಓಡಿ ತನಿಖೆಗೆ ಒಪ್ಪಿಸುತ್ತೇನೆ ಎಂದು ಭರವಸೆ ಕೊಟ್ಟರು. ಸಚಿವರು ಅದರಂತೆ ನಡೆದುಕೊಂಡರು. ಸಿಓಡಿ ತನಿಖೆಯಾಗಿದೆ. ಆದರೆ, ಸಿಓಡಿನವರಿಗೂ, ಪೊಲೀಸರಿಗೂ ವ್ಯತ್ಯಾಸ ಇಲ್ಲ ಎಂದು ನಂತರ ನಮಗೆ ಗೊತ್ತಾಯ್ತು. ‘ಅವರನ್ನು’ ಗುರಿಯಾಗಿಸಿ, ಅವರ ಮೇಲೆ ಪ್ರಕರಣ ದಾಖಲಿಸುವ ಧೈರ್ಯ ಸಿಓಡಿನವರಿಗೂ ಇಲ್ಲ, ಪೊಲೀಸರಿಗೂ ಇಲ್ಲ.

ದೇವಾನಂದರ ಮೇಲೆಯೇ ಆರೋಪ ಹೊರಿಸುವ ಪ್ರಯತ್ನ?

ಪ್ರಕರಣ ಮುಗಿಸಲು, ದೇವಾನಂದರೇ ಕೊಲೆ ಮಾಡಿದರು ಎಂದು ಅವರನ್ನೇ ಆರೋಪಿಯನ್ನಾಗಿ ಮಾಡುವ ಉದ್ದೇಶ ಇದ್ದಂತೆ ಕಂಡಿತು. ಒಂದು ದಿನ ಯಾವುದೇ ಸೂಚನೆ ಕೊಡದೆ ಸಿಓಡಿ ಅಧಿಕಾರಿಗಳು ದೇವಾನಂದರ ಮನೆಗೆ ಬಂದರು. ಮನೆಯಲ್ಲಿದ್ದ ವಸ್ತುಗಳನ್ನೆಲ್ಲಾ ತಡಕಾಡಿದರು. ಈ ವಿಷಯ ವಿಷ್ಣುಮೂರ್ತಿಯವರಿಗೆ ತಿಳಿದು, ಬೆಳ್ತಂಗಡಿಯಿಂದ ಓಡೋಡಿ ಬಂದರು. ತನಿಖಾಧಿಕಾರಿಗಳು ಮನೆಯಿಂದ ಹೊರಡುವಾಗ ಅವರನ್ನು ತಡೆದ ದೇವಾನಂದರು ಗಟ್ಟಿಯಾಗಿ ನಿಂತು, ನೋಟಿಸ್ ಕೊಡದೆ ತನಿಖೆಗೆ ಬಂದಿದ್ದೀರಿ, ನನ್ನ ಮನೆಯಲ್ಲಿ ಏನು ಸಿಕ್ಕಿದೆ ಎಂಬುದನ್ನು ಹೇಳಿ, ಇಲ್ಲದಿದ್ದರೆ ನಿಮ್ಮನ್ನು ಇಲ್ಲಿಂದ ಬಿಡುವುದಿಲ್ಲ ಎಂದು ಕೇಳಿದರು. ಅಧಿಕಾರಿಗಳು ಅನಿವಾರ್ಯವಾಗಿ ‘ನಿಲ್ ರಿಪೋರ್ಟ್’ ಎಂದು ಬರೆದು ಸಹಿ ಹಾಕಿ ಕೊಟ್ಟಿದ್ದಾರೆ. ನನ್ನ ಪ್ರಕಾರ, ದೇವಾನಂದರನ್ನೇ ಅಪರಾಧಿಯನ್ನಾಗಿ ಮಾಡಲು ಇವರು ಬಂದಿದ್ದರು, ಆದರೆ, ಅದು ನಡೆಯಲಿಲ್ಲ.

‘ಪತ್ತೆಯಾಗದ ಪ್ರಕರಣ’ ಎಂದು ಮುಗಿಸಿದರು

ನಂತರವೂ ಪದ್ಮಲತಾ ಪ್ರಕರಣ ಏನಾಯ್ತು ಎಂದು ದೇವಾನಂದ ಅವರು ಸಿಓಡಿ ಅಧಿಕಾರಿಗಳನ್ನು ಕೇಳುತ್ತಲೇ ಇದ್ದರು, ಏನೂ ಮಾಹಿತಿ ಸಿಕ್ಕಿಲ್ಲ ಎಂದು ಆ ಅಧಿಕಾರಿಗಳು ಹೇಳುತ್ತಲೇ ಇದ್ದರು. ಕಡೆಗೊಂದು ದಿನ ‘ಇದು ಪತ್ತೆಯಾಗದ ಪ್ರಕರಣ’ ಎಂದು ಹಿಂಬರಹ ಕೊಟ್ಟು ಕಳುಹಿಸಿದರು.

ಸುದ್ದಿ ಮಾಡಿದ ಪತ್ರಿಕೆಗಳನ್ನು ಸುಟ್ಟರು

ಪದ್ಮಲತಾ ಕಿಡ್ನಾಪ್ ಆದದ್ದು, ನಂತರ ಶವ ಸಿಕ್ಕಿದ್ದು ಈ ಎಲ್ಲಾ ವಿವರಗಳಿದ್ದ ಲೇಖನಗಳು ಚಂದ್ರಶೇಖರ ತೌಡೂರು ಸಂಪಾದಕರಾಗಿದ್ದ ಕ್ರೈಮ್ ನ್ಯೂಸ್‌ನಲ್ಲಿ (ಅಂದಾಜು 1986–87ರಲ್ಲಿ) ಬಂದವು. ‘ಧರ್ಮಸ್ಥಳದಲ್ಲಿ ಎಲ್ಲವೂ ಸರಿಯಿಲ್ಲ’ ಎಂಬ ತಲೆಬರಹ ಕೊಟ್ಟು, ಗಿಡುಗವೊಂದು ಮಗುವನ್ನು ಎತ್ತಿಕೊಂಡು ಹೋಗುವ ಚಿತ್ರ ಕೊಟ್ಟಿದ್ದರು. ಇದು ಗೊತ್ತಾದ ತಕ್ಷಣ ಉಜಿರೆಯಲ್ಲಿ ಮಾರಾಟಕ್ಕಿದ್ದ ಎಲ್ಲಾ ಪತ್ರಿಕೆಗಳನ್ನು ಹಣ ಕೊಟ್ಟು ಕೊಂಡು ಸುಟ್ಟುಹಾಕಿದರು. ಮಾತ್ರವಲ್ಲ, ಬೆಂಗಳೂರಿನಲ್ಲಿ ಅವರ ಪ್ರಿಂಟಿಂಗ್ ಪ್ರೆಸ್ ಮೇಲೂ ದಾಳಿ ಮಾಡಿದರು. ಈ ಪತ್ರಿಕೆಯನ್ನು ಖರೀದಿಸಿದ ಜನರು ಗುಟ್ಟಾಗಿ ಕಿಸೆಯಿಂದ ಕಿಸೆಗೆ ಕೊಟ್ಟು ಎಲ್ಲರೂ ಓದಿದರು. ಲಂಕೇಶ್ ಪತ್ರಿಕೆಯವರೂ ಈ ವಿಷಯ ಬರೆದಿದ್ದರು. ಆದರೆ, ಕ್ರೈಮ್ ನ್ಯೂಸ್‌ನಲ್ಲಿ ವಿವರವಾಗಿ ಬರೆದಿದ್ದರು. ಇವರ ವಿರುದ್ಧ ಮಾತನಾಡುವ ಯಾವುದೇ ಪತ್ರಿಕೆ, ಯಾವುದೇ ಚಾನಲ್ ಮೇಲೆ ದಾಳಿ ಮಾಡುವಂತದ್ದು ಇವರಿಗೆ ಹೊಸತೇನಲ್ಲ.

ಅದು ತುರ್ತುಪರಿಸ್ಥಿತಿ ಸಮಯವಿರಬಹುದು, ಮಂಗಳೂರಿನಿಂದ ಹೊರಡುವ, ಶಂಕರಭಟ್ ಸಂಪಾದಕರಾಗಿದ್ದ ಅಮೃತವಾಣಿ ಎಂಬ ಪತ್ರಿಕೆ ಧರ್ಮಸ್ಥಳದ ವಿಚಾರ ಬರೆದಿದೆ ಎಂದು ಹೇಳಿ ಅವರಿಗೆ ಹೊಡೆದು, ಆ ಪತ್ರಿಕೆಯನ್ನೂ ಹುಡಿ ಮಾಡಿದರು. ಸುದ್ದಿಯಾದರೆ ತಾನೆ ಇವರು ಏನೆಂದು ಜನತೆಗೆ ತಿಳಿಯುವುದು, ಹಾಗಾಗಿ ಸುದ್ದಿಯಾಗದಂತೆ, ಮಾಧ್ಯಮದವರ ಬಾಯಿ ಮುಚ್ಚಿಸುವುದು ಇವರ ಮೊದಲ ಕೆಲಸ.

ವೇದವಲ್ಲಿ ಟೀಚರ್ ಅನ್ನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಂದರು

ಧರ್ಮಸ್ಥಳ ಗ್ರಾಮದಿಂದ, ಅಲ್ಲಿ ಕೆಲಸದಲ್ಲಿದ್ದವರು, ಅವರ ಮನೆಯವರು ಯಾರೂ ಕೂಡ ಯಾವುದೇ ಹೋರಾಟಗಳಿಗೆ ಹೋಗಬಾರದು ಎಂದು ಅವರು ಕಡ್ಡಾಯ ಮಾಡಿದರು. ಅವರಿಗೆ ವಿರುದ್ಧವಾಗಿ ನಡೆದುಕೊಂಡರೆ ನಮ್ಮನ್ನು ಬದುಕಲು ಬಿಡುತ್ತಾರೋ ಇಲ್ಲವೋ ಎಂಬ ಭಯ ಆ ಜನರಲ್ಲಿತ್ತು. ಇದಕ್ಕೆ ಅಲ್ಲಿನ ಜನರಿಗೆ ಬಹಳಷ್ಟು ಅನುಭವಗಳಿವೆ. ವೇದವಲ್ಲಿ ಟೀಚರ್ ಕಾನೂನಾತ್ಮಕವಾಗಿ, ಸೀನಿಯಾರಿಟಿ ಪ್ರಕಾರ ಮುಖ್ಯೋಪಧ್ಯಾಯರಾಗಬೇಕಿತ್ತು. ಅದಕ್ಕಾಗಿ ಕಾನೂನು ಪ್ರಕಾರವೇ ಅವರು ಹೋರಾಟ ನಡೆಸಿದರು. ಆದರೆ, ಇದನ್ನು ಸಹಿಸದೆ ಅವರನ್ನು ಅತ್ಯಾಚಾರ ಮಾಡಿ, ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಂದರು. ಇಂತಹ ಜೀವಂತ ದೃಶ್ಯಗಳು ಕಣ್ಣಮುಂದಿವೆ. ವೇದವಲ್ಲಿಯ ಪತಿ ಡಾಕ್ಟರ್ ಆಗಿದ್ದರು.

ಆ ದೃಶ್ಯ ನೋಡಿದ ಮಗುವನ್ನೂ ಕೊಂದರು

ವೇದವಲ್ಲಿಗೆ ಮನೆಯಲ್ಲಿ ಬೆಂಕಿ ಹಚ್ಚಿ ಕೊಂದ ದೃಶ್ಯವನ್ನು ನೋಡಿದ ಮಗುವನ್ನೂ ಕೊಂದಿದ್ದಾರೆ. ಸೌಜನ್ಯ ಪ್ರಕರಣದಲ್ಲಿಯೂ ರವಿಪೂಜಾರಿಯನ್ನು ಮರಕ್ಕೆ ತೂಗುಹಾಕಿ ಕೊಂದರು, ಆತ ಆತ್ಮಹತ್ಯೆ ಮಾಡಿಕೊಂಡ ಎಂದು ದಾಖಲಿಸಿದರು. ಸೌಜನ್ಯಳ ತಾಯಿ ಕುಸುಮಾವತಿ ಮತ್ತು ತಂದೆ ಚಂದಪ್ಪ ಗೌಡ ಯಾರನ್ನು ಅಪರಾಧಿ ಎಂದು ದೂರು ಕೊಟ್ಟಿದ್ದರೋ, ಆ ಅಪರಾಧಿಗಳಲ್ಲಿ ಒಬ್ಬರ ಮನೆಯಲ್ಲಿ ಯಶೋಧಾಚಾರ್ತಿ ಕೆಲಸಕ್ಕಿದ್ದಳು. ಸೌಜನ್ಯಳನ್ನು ಅಲ್ಲಿಗೆ ಕರೆದೊಯ್ದಿದ್ದುದು ಆಕೆಗೆ ಗೊತ್ತಿತ್ತಂತೆ. ಆಕೆ ನಾಳೆ ದಿನ ಯಾರಿಗಾದರೂ ಹೇಳಿದರೆ ತೊಂದರೆಯಾಗುತ್ತದೆ ಎಂದು, ಕೆಲಸ ಮುಗಿಸಿ ಮನೆಗೆ ಹೋದ ಆಕೆಯನ್ನು ಮತ್ತೆ ಕರೆಸಿ ಬಾವಿಗೆ ಹಾಕಿ ಕೊಂದರು.

ಭಾವನಾತ್ಮಕವಾಗಿ ಜನರನ್ನು ಸೆಳೆಯುತ್ತಾರೆ

ಕಮ್ಯೂನಿಸ್ಟರು ದೇವರ ವಿರೋಧಿಗಳು, ದೇವಸ್ಥಾನಕ್ಕೆ ಅಪಚಾರ ಮಾಡುವವರು ಎಂದು ಇವರು ಹೇಳುತ್ತಾರೆ. ವಿಧಾನಸಭೆಯಲ್ಲಿ ಇದರ ಬಗ್ಗೆ ಧ್ವನಿ ಎತ್ತಿದಾಗಲೂ, ಇವರು ದೇವಸ್ಥಾನಕ್ಕೆ ಅನ್ಯಾಯ ಮಾಡುತ್ತಿದ್ದಾರೆ, ಇವರು ಕಮ್ಯೂನಿಸ್ಟರು ಎಂದು ಹೇಳಿ, ಆ ಸಮಯದಲ್ಲಿಯೂ ಕೂಡ ದೇವರ ಹೆಸರನ್ನೇ ಮುಂದೆ ತೆಗೆದುಕೊಂಡು ಬಂದರು. ಸಾವಿರಾರು ವರ್ಷಗಳಿಂದ ದೇವರು, ದಿಂಡರು ಎಂದು ನಂಬಿಕೊಂಡು ಬಂದ ಜನರು ಇವರ ಇಂತಹ ಮಾತುಗಳನ್ನು ಸುಲಭದಲ್ಲಿ ಒಪ್ಪಿಕೊಳ್ಳುತ್ತಾರೆ. ಹೌದೇನೋ, ಕಮ್ಯೂನಿಸ್ಟರು ದೇವಸ್ಥಾನಕ್ಕೆ ಹೋಗುವುದು ಬಹಳ ಕಡಿಮೆ, ಆದ್ದರಿಂದ ಇವರಿಗೆ ದೇವರು ಉಂಟೋ ಇಲ್ಲವೋ, ‘ಅವರು’ ಹೇಳೋದೇ ಸತ್ಯ ಇರಬೇಕು ಎಂದು ಸುಲಭದಲ್ಲಿ ಅದನ್ನು ಒಪ್ಪಿಕೊಳ್ಳುತ್ತಾರೆ. ಬದುಕಿನ ಬವಣೆಗಳನ್ನೆಲ್ಲ ಬಿಟ್ಟು, ಭಾವನಾತ್ಮಕವಾಗಿ ಜನರನ್ನು ಸಂಘಟನೆ ಮಾಡಿ ಆಡಳಿತ ಮಾಡುತ್ತಿದ್ದಾರೆ. ಅಂದಿನಿಂದ ಇಂದಿನವರೆಗೂ ಇದೇ ನಡೆಯುತ್ತಿದೆ. ಸುಲಭವಾಗಿ ಭಾವನಾತ್ಮಕವಾಗಿ ಜನರನ್ನು ತಮ್ಮ ಕಡೆ ತಿರುಗಿಸಿಕೊಳ್ಳಬಹುದು. ಆದರೆ, ಅವರವರ ಬದುಕಿನ ಪ್ರಶ್ನೆ ಅವರಿಗೆ ಅರ್ಥವಾಗುವುದಿಲ್ಲ ಎಂಬುದು ನೋವಿನ ಸಂಗತಿ.

ಕೃಪೆ: KUDLA RAMAPGE BUZZ

ಯೂಟ್ಯೂಬ್ ಚಾನಲ್

ಅಕ್ಷರ ರೂಪ: ಸಿ.ಸಿದ್ದಯ್ಯ

ಸಾರಿಗೆ ನಿಗಮಗಳ ನೌಕರರ ಬೇಡಿಕೆಗಳನ್ನು ಬಗೆಹರಿಸಿ: ಸಿಪಿಐ(ಎಂ) ಒತ್ತಾಯ

ಕರ್ನಾಟಕ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳಲ್ಲಿನ ಕಾರ್ಮಿಕರಿಗೆ ಜನವರಿ 1, 2024 ರಿಂದ ವೇತನ ಪರಿಷ್ಕರಣೆ, ಇದರ ಹಿಂದಿನ ಅವಧಿಯ 38 ತಿಂಗಳ ಹಿಂಬಾಕಿ ಮತ್ತು ಅಕ್ರಮವಾಗಿ ವಜಾ ಆಗಿರುವ ಕಾರ್ಮಿಕರ ಮರುನೇಮಕ, ಇತ್ಯಾದಿ ಬೇಡಿಕೆಗಳಿಗೆ ಆಗ್ರಹಿಸಿ 2025 ಆಗಸ್ಟ್ 5ರಿಂದ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ತೀರ್ಮಾನಿಸಿದೆ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮತ್ತು ಸಾರಿಗೆ ಕಾರ್ಮಿಕರ ಬದುಕಿನ ದೃಷ್ಟಿಯಿಂದ, ಸಾರಿಗೆ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಸಕಾರಾತ್ಮಕವಾಗಿ ಪರಿಹರಿಸಲು ರಾಜ್ಯದ ಮಖ್ಯಮಂತ್ರಿಯವರು ತುರ್ತು ಮಧ್ಯಪ್ರವೇಶ ಮಾಡುವುದು ಅಗತ್ಯವಾಗಿದೆ. ಸರ್ಕಾರವು ಸಮಸ್ಯೆಗಳನ್ನು ಪರಿಹರಿಸಲು ವಿಫಲವಾದಲ್ಲಿ, ಈ ಮುಷ್ಕರವನ್ನು ಬೆಂಬಲಿಸಲು ತಮ್ಮ ಪಕ್ಷ ತೀರ್ಮಾನಿಸಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿದೆ.

ಹಿಂದಿನ ಬಿಜೆಪಿ ಸರ್ಕಾರ ತನ್ನ ಕೊನೆ ಕಾಲದಲ್ಲಿ ಶೇ. 15ರಷ್ಟು ವೇತನ ಹೆಚ್ಚಳ ಮಾಡಿತು. ಈ ಹೆಚ್ಚಳದ 38 ತಿಂಗಳ ಹಿಂಬಾಕಿಯನ್ನು ಸರ್ಕಾರ ನೀಡಬೇಕಾಗಿದೆ. ಜೊತೆಗೆ 20 ತಿಂಗಳಾದರೂ ಚಾಲ್ತಿ ವೇತನ ಮಾತುಕತೆ ಮಾಡದಿರುವುದು, ಹಿಂಬಾಕಿ ನೀಡಲು ಆಗುವುದಿಲ್ಲ ಎಂಬ ಸರ್ಕಾರದ ಧೋರಣೆಗಳಿಂದಾಗಿ, ಸರ್ಕಾರವು ನಿರ್ಲಕ್ಷ್ಯ ಧೋರಣೆ ತಾಳುತ್ತಿದೆ ಎಂಬ ಅತೃಪ್ತಿ ಕಾರ್ಮಿಕರಲ್ಲಿ ತೀವ್ರಗೊಳ್ಳುತ್ತಿದೆ. ಇದಲ್ಲದೆ ಇನ್ನೂ ಹಲವಾರು ಬೇಡಿಕೆಗಳಿವೆ. ಇವೆಲ್ಲವೂ ನ್ಯಾಯಬದ್ಧವಾಗಿ ಸಾರಿಗೆ ಕಾರ್ಮಿಕರಿಗೆ ಸಿಕ್ಕಬೇಕಾದ ಅಂಶಗಳಾಗಿವೆ.

ಕಾರ್ಮಿಕರಿಗೆ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಿದರೆ ಹಣ ಕೊರತೆಯಾಗುತ್ತದೆ ಎಂದು ವಾದಿಸುವ ಸರ್ಕಾರ, ಒಂದು ವಿದೇಶಿ ಫಾಕ್ಸ್ ಕಾನ್ ಕಂಪನಿಗೆ 6,000 ಕೋಟಿ ರೂ. ಸಬ್ಸಿಡಿ ನೀಡಲು ಹಣದ ಕೊರತೆಯ ಮಾತೇ ಆಡುವುದಿಲ್ಲ ಎಂಬುದನ್ನು ಸಾರಿಗೆ ಕಾರ್ಮಿಕರು ಗಮನಿಸುತ್ತಿದ್ದಾರೆ.

ರಾಜ್ಯ ಸರ್ಕಾರವು ಮಹಿಳೆಯರಿಗೆ ಉಚಿತ ಪ್ರಯಾಣ ಗ್ಯಾರಂಟಿ ಯೋಜನೆ ಪ್ರಕಟಿಸಿದ್ದು, ರಾಜ್ಯದಲ್ಲಿ ಅದರ ಯಶಸ್ಸಿಗೆ ಸಾರಿಗೆ ಕಾರ್ಮಿಕರು ಅತ್ಯಂತ ಹೆಚ್ಚಿನ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಈ ಯೋಜನೆಯಿಂದ ಸರ್ಕಾರಕ್ಕೆ ಸಿಕ್ಕಿರುವ ಗೌರವಕ್ಕೆ ತಳಹಂತದ ಸಾರಿಗೆ ಕಾರ್ಮಿಕರ ಶ್ರಮವೂ ಮುಖ್ಯ ಕಾರಣ. ಇಡೀ ದೇಶದಲ್ಲಿ ಕರ್ನಾಟಕ ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಅಪಾರ ಸಂಖ್ಯೆಯ ಪ್ರಶಸ್ತಿಗಳನ್ನು ಪಡೆದುಕೊಂಡಿವೆ. ಈ ಪ್ರಶಸ್ತಿಗಳ ಹೆಮ್ಮೆಯ ಹಿಂದಿರುವುದು ಸಾರಿಗೆ ಕಾರ್ಮಿಕರ ಪರಿಶ್ರಮ ಎಂಬುದನ್ನು ಸಿಎಂ ಗಮನಿಸಬೇಕಾಗಿದೆ.

ಈ ವಿಷಯದಲ್ಲಿ ಸಿಎಂ ಸಕಾರಾತ್ಮಕ ಮಧ್ಯಪ್ರವೇಶ ಮಾಡುವ ಮೂಲಕ, ಆಗಸ್ಟ್ 5 ರಿಂದ ನಡೆಯುವ ಸಾರಿಗೆ ಮುಷ್ಕರವನ್ನು ತಡೆಯುವ ಪ್ರಯತ್ನ ಮಾಡಬೇಕು ಮತ್ತು ರಾಜ್ಯದ ಜನತೆಗೆ ಆಗುವ ತೊಂದರೆಯನ್ನು ತಪ್ಪಿಸಬೇಕು ಎಂದು ಸಿಪಿಐ(ಎಂ) ಒತ್ತಾಯಿಸಿದೆ.

ಎಸ್‌ಐಆರ್: 'ಸಾಮೂಹಿಕ ಹೊರದಬ್ಬಿಕೆಯಲ್ಲ, ಸಾಮೂಹಿಕ ಒಳಗೊಳ್ಳುವಿಕೆ' ಆಗಬೇಕು ಚುನಾವಣಾ ಆಯೋಗಕ್ಕೆ ನೆನಪಿಸಿದ ಸುಪ್ರಿಂ ಕೋರ್ಟ್

ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸಿರುವ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್)ಯನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ಜುಲೈ 28ರಂದು ಮತ್ತೆ ಆರಂಭವಾದಾಗ, ನ್ಯಾಯಪೀಠ ಈ ಪರಿಷ್ಕರಣೆ "ಸಾಮೂಹಿಕ ಹೊರದಬ್ಬಿಕೆಯಲ್ಲ, ಸಾಮೂಹಿಕ ಒಳಗೊಳ್ಳುವಿಕೆ'ಯ ಆಧಾರದಲ್ಲಿ ನಡೆಯಬೇಕಾಗಿದೆ" ಎನ್ನುತ್ತ ತಾನು ಈ ಹಿಂದೆ ಸೂಚಿಸಿದಂತೆ ಆಧಾರ್ ಮತ್ತು ಮತದಾರ ಫೋಟೋ ಗುರುತು ಕಾರ್ಡ್ (ಎಪಿಕ್) ಅನ್ನು ಗುರುತಿನ ಪ್ರಮಾಣವಾಗಿ ಏಕೆ ಸ್ವೀಕರಿಸುವುದಿಲ್ಲ ಎಂದು ಚುನಾವಣಾ ಆಯೋಗವನ್ನು ಪ್ರಶ್ನಿಸಿತು.

ಇವುಗಳು ಖೋಟಾ ಆಗಿರುವ ಸಾಧ್ಯತೆಗಳಿವೆ ಎಂಬ ಆಯೋಗದ ತರ್ಕವನ್ನು ಒಪ್ಪದ ಪೀಠವು, ಆಯೋಗ ಸ್ವೀಕರಿಸಲು ಸಿದ್ಧವಿರುವ 11 ದಾಖಲೆಗಳಲ್ಲಿ 10 ಕೂಡ ಹೀಗೆಯೇ ಖೋಟಾ ಇರಲು ಸಾಧ್ಯವಿದೆ ಎಂದು ಹೇಳಿತು. ಆದ್ದರಿಂದ ಇಂತಹ ಪ್ರಸಂಗಗಳಲ್ಲಿ ಖೋಟಾತನ ಅಥವ ಸಾಚಾತನವನ್ನು ಪ್ರತ್ಯೇಕವಾಗಿ ನಿಭಾಯಿಸಬಹುದಾದರೆ, ಆಧಾರ್ ಮತ್ತು ಎಪಿಕ್ ಸಂದರ್ಭದಲ್ಲೂ ಏಕೆ ಸಾಧ್ಯವಿಲ್ಲ ಎಂಬುದು ಸಹಜ ಪ್ರಶ್ನೆ. ಹೆಚ್ಚಿನವರ ಬಳಿ ಇರುವ ಆಧಾರ್ ಮತ್ತು ಎಪಿಕ್‌ಗಳನ್ನು ಕೂಡ ಗುರುತಿನ ಪ್ರಮಾಣವಾಗಿ ಸ್ವೀಕರಿಸಬೇಕು ಎಂದು ಪೀಠ ಮತ್ತೊಮ್ಮೆ ಸೂಚಿಸಿತು.

ಇತ್ತೀಚೆಗೆ ನಡೆಸಿದ ಒಂದು ಸರ್ವೆಯ ಪ್ರಕಾರ, ಬಿಹಾರದಲ್ಲಿರುವ ಮತದಾರರಲ್ಲಿ ಶೇ. 99 ಮಂದಿಯ ಬಳಿ ಆಧಾರ್ ಕಾರ್ಡ್ ಮತ್ತು ಶೇ. 89 ಮಂದಿಯ ಬಳಿ ಎಪಿಕ್ ಇದ್ದರೆ, ಆಯೋಗ ಸ್ವೀಕರಿಸುವ 11 ದಾಖಲೆಗಳು ಇರುವವರ ಪ್ರಮಾಣ ಕೇವಲ ಶೇ. 35 ಮಾತ್ರ. ವಲಸೆ ಹೋದ ಬಿಹಾರಿಗಳಲ್ಲಿ ಆಧಾರ್ ಹೊಂದಿರುವವರು ಶೇ. 96 ಮತ್ತು ಎಪಿಕ್ ಹೊಂದಿರುವವರು ಶೇ. 83, ಆಯೋಗ ಕೇಳುವ ದಾಖಲೆಗಳು ಇರುವವರ ಪ್ರಮಾಣ ಶೇ. 34 ಮಾತ್ರ.

ಇದಲ್ಲದೆ, ಬಿಹಾರದಿಂದ ಉದ್ಯೋಗ ಅರಸಿ ಬೇರೆ ರಾಜ್ಯಗಳಿಗೆ ಹೋದ ಕಾರ್ಮಿಕರಲ್ಲಿ ಶೇ.90ರಷ್ಟು ಮಂದಿಗೆ ಈ ಎಸ್‌ಐಅರ್ ಬಗ್ಗೆ ತಿಳಿದಿಲ್ಲ ಎಂದು ಈ ಸರ್ವೆಯಲ್ಲಿ ಕಂಡು ಬಂದಿದೆ. ಬಿಹಾರದ ವಲಸೆ ಕಾರ್ಮಿಕರ ಸಂಖ್ಯೆ ಸುಮಾರು 75 ಲಕ್ಷ ಎನ್ನಲಾಗಿದೆ.

ಎಸ್‌ಐಆರ್ ಬಗ್ಗೆ ತೀವ್ರ ಸಂದೇಹವನ್ನು ಬಲಪಡಿಸಿದ ಮತ್ತೊಂದು ಸಂಗತಿಯೆಂದರೆ, ಆಯೋಗ ಜುಲೈ 22 ಮತ್ತು 23ರಂದು ನೀಡಿದ ಅಂಕಿ–ಅಂಶಗಳಲ್ಲಿನ ಅಗಾಧ ಏರಿಕೆ. ಜುಲೈ 22ರಂದು ಪ್ರಕಟಿಸಿದ ಪ್ರಕಾರ 'ಪತ್ತೆಯಾಗದ' ಮತದಾರರ ಸಂಖ್ಯೆ 11,484, ಆದರೆ ಜುಲೈ 23ರ ಆಯೋಗದ ಪ್ರಕಟಣೆಯಲ್ಲಿ ಇದು 1,00,000 ಏರಿತು. ಅಂದರೆ 24 ಗಂಟೆಗಳಲ್ಲಿ ಶೇ. 809ರಷ್ಟು ಏರಿಕೆ. ಆಯೋಗದ ಪ್ರಕಾರ 'ಪತ್ತೆಯಾಗದವರು' ಎಂದರೆ ಶಾಶ್ವತವಾಗಿ ಬಿಹಾರದಿಂದ ಹೊರಗೆ ಹೋದವರು ಅಥವಾ 2003 ಮತ್ತು 2025ರ ನಡುವೆ ಸಾವಿಗೀಡಾದವರು. ಅಂದರೆ ಮತದಾರರ ಪಟ್ಟಿಯಿಂದ ತೆಗೆದು ಹಾಕುವ ಹೆಸರುಗಳು. ಜುಲೈ 22ರಂದು ಶೇ. 97.3 ಮಂದಿ ಗಣತಿ ಪತ್ರಗಳನ್ನು ಸಲ್ಲಿಸಿದ್ದಾಗ ಈ ಸಂಖ್ಯೆ 52 ಲಕ್ಷವಿದ್ದರೆ, 24 ಗಂಟೆಗಳಲ್ಲಿ ಗಣತಿ ಪತ್ರ ಸಲ್ಲಿಸಿದವರ ಸಂಖ್ಯೆ ತುಸುವೇ ಏರಿ ಶೇ. 98.01 ಆದಾಗ, 'ಪತ್ತೆಯಾಗದವರ' ಸಂಖ್ಯೆ 56 ಲಕ್ಷಕ್ಕೆ ನೆಗೆಯಿತು.

65 ಲಕ್ಷ 'ಪತ್ತೆಯಾಗದ' ಹೆಸರುಗಳು

ಜುಲೈ 27ರ ಚುನಾವಣಾ ಆಯೋಗದ ಹೇಳಿಕೆಯ ಪ್ರಕಾರ ಶೇ. 91.69 ಮತದಾರರು ನಮೂನೆ ಪತ್ರಗಳನ್ನು ಸಲ್ಲಿಸಿದ್ದಾರೆ. ಅಂದರೆ 65 ಲಕ್ಷ ಮತದಾರರ ಹೆಸರುಗಳು ಹೊಸ ಮತದಾರರ ಪಟ್ಟಿಯಿಂದ ಹೊರಹೋಗುತ್ತವೆ. ಅಲ್ಲದೆ ಗಣತಿ ಪತ್ರಗಳನ್ನು ಸಲ್ಲಿಸಿದವರಲ್ಲಿಯೂ ಸ್ವೀಕಾರಾರ್ಹ ದಾಖಲೆಗಳನ್ನು ಸಲ್ಲಿಸಿಲ್ಲ ಎಂಬಿತ್ಯಾದಿ ಕಾರಣಗಳಿಂದ ಇನ್ನಷ್ಟು ಹೆಸರುಗಳು ತೆಗೆದು ಹಾಕಲ್ಪಡಬಹುದು.

ಇದನ್ನು ನ್ಯಾಯಪೀಠದ ಗಮನಕ್ಕೆ ತಂದಾಗ "65 ಲಕ್ಷದಷ್ಟು ಮತದಾರರು (ಪಟ್ಟಿಯಲ್ಲಿ) ಇರಲಿಕ್ಕಿಲ್ಲ ಎಂಬುದು ನಿಮ್ಮ ಸಂದೇಹ, ಚುನಾವಣಾ ಆಯೋಗ 2025ರ ಪಟ್ಟಿಗೆ ಸಂಬಂಧಿಸಿದಂತೆ ಸರಿಪಡಿಕೆಗಳನ್ನು ಪ್ರಯತ್ನಿಸುತ್ತಿದೆ. ನಾವು ನ್ಯಾಯಾಂಗ ಪ್ರಾಧಿಕಾರವಾಗಿ ಇದನ್ನು ಗಮನಿಸುತ್ತೇವೆ. ಸಾಮೂಹಿಕ ಹೊರಪಡಿಕೆ ಇದ್ದರೆ, ನಾವು ತಕ್ಷಣವೇ ಪ್ರವೇಶಿಸುತ್ತೇವೆ, ತಾವು ಬದುಕಿದ್ದೇವೆ, ಆದರೂ ಹೊರಪಡಿಸಲಾಗಿದೆ ಎನ್ನುವ 15 ಮಂದಿಯನ್ನು ತನ್ನಿ" ಎಂದು ನ್ಯಾಯಪೀಠದ ಒಬ್ಬ ನ್ಯಾಯಮೂರ್ತಿಗಳು ಹೇಳಿರುವುದಾಗಿಯೂ ವರದಿಯಾಗಿದೆ.

ಈ ಮೊದಲು ಜುಲೈ 10ರಂದು ನ್ಯಾಯಪೀಠ ಹೇಳಿದ್ದನ್ನು ಪುನರುಚ್ಚರಿಸುತ್ತ 'ಅರ್ಜಿದಾರರು ಈ ಹಂತದಲ್ಲಿ ಮಧ್ಯಂತರ ತಡೆಯಾಜ್ಞೆಗೆ ಒತ್ತಾಯಿಸದ್ದರಿಂದ' ಕರಡು ಮತದಾರ ಪಟ್ಟಿಯ ಪ್ರಕಟಣೆಗೆ ನ್ಯಾಯ ಪೀಠ ತಡೆಯಾಜ್ಞೆ ನೀಡಲಿಲ್ಲ. ಆದ್ದರಿಂದ ಎಸ್‌ಐಆರ್ ಪ್ರಕ್ರಿಯೆ ಮುಂದುವರೆದಿದೆ.

ಆಗಸ್ಟ್ ಒಂದರಂದು ಕರಡು ಪಟ್ಟಿ ಪ್ರಕಟವಾದ ಮೇಲೆ ಆಕ್ಷೇಪಗಳನ್ನು ಸಲ್ಲಿಸಲು 30 ದಿನಗಳ ಅವಕಾಶವಿದೆ, ಹೆಸರುಗಳನ್ನು ಸೇರಿಸಲು ಮತದಾರರು ನೆರವಾಗಬೇಕು ಎಂದು ವಿಚಾರಣೆಯ ವೇಳೆಯಲ್ಲಿ ಚುನಾವಣಾ ಆಯೋಗದ ವಕೀಲರು ಹೇಳಿದರು.



ಆಯೋಗ ವಿಧಿಸಿದ ಸಮಯ ಗಡುವು ಅವಾಸ್ತವಿಕವಾದ್ದರಿಂದ ಗಣತಿ ಪತ್ರಗಳನ್ನು ಮತದಾರರ ಒಪ್ಪಿಗೆಯಿಲ್ಲದೆಯೇ ಸಾರಾಸಗಟಾಗಿ ಅಪ್‌ಲೋಡ್ ಮಾಡಲಾಗಿದೆ ಎಂಬುದನ್ನು ಅರ್ಜಿದಾರರಲ್ಲಿ ಒಬ್ಬರಾದ ಎಡಿಆರ್ ಸಲ್ಲಿಸಿರುವ ಅಫಿಡವಿಟ್ ನ್ಯಾಯಾಲಯದ ಗಮನಕ್ಕೆ ತಂದಿದೆ.

ಆಗಸ್ಟ್ 12–13ರಂದು ಮತ್ತೆ ವಿಚಾರಣೆ ನಡೆಸುವಾಗ, ಇದನ್ನು ಮತ್ತು ಅರ್ಜಿದಾರರು ಎತ್ತಿರುವ ಇನ್ನೂ ಹಲವು ಪ್ರಶ್ನೆಗಳನ್ನು ಹೇಗೆ ಗಮನಿಸಲಾಗುತ್ತದೆ, ಆಗಸ್ಟ್ ಒಂದರಂದು ಪ್ರಕಟವಾಗುವ ಕರಡು ಪಟ್ಟಿ ಹೇಗಿರುತ್ತದೆ, ಇದು ನ್ಯಾಯಾಲಯ ಸೂಚಿಸಿದಂತೆ 'ಸಾಮೂಹಿಕ ಹೊರದಬ್ಬಿಕೆಯಾಗಿರದೆ, ಸಾಮೂಹಿಕ ಒಳಗೊಳ್ಳುವಿಕೆ'ಯನ್ನು ಆಧರಿಸಿದೆ ಎಂದು ನ್ಯಾಯಾಲಯ ಹೇಳುವಂತಿರುತ್ತದೆಯೇ? ಅಲ್ಲದೆ, ಸರ್ವೋಚ್ಚ ನ್ಯಾಯಾಲಯ ಆಯೋಗದ ವಾದವನ್ನು ಅಲ್ಲಗಳೆಯುತ್ತ ಆಧಾರ್ ಮತ್ತು ಎಪಿಕ್ ಅನ್ನು ಪರಿಗಣಿಸಬೇಕು ಎಂದು ಮತ್ತೊಮ್ಮೆ ಒತ್ತಿ ಹೇಳಿದ್ದನ್ನು ಆಯೋಗ ಸ್ವೀಕರಿಸುತ್ತದೆಯೇ?

ಬಿಹಾರದ ಸುಮಾರು 94 ಲಕ್ಷದಷ್ಟು ಜನ ಮತದಾನದ ಹಕ್ಕಿನಿಂದ ವಂಚಿತರಾಗಬಹುದು ಎಂದು ಕೆಲವರು ಲೆಕ್ಕ ಹಾಕಿದ್ದಾರೆ. ಈ ಅಂಕಣವನ್ನು ಬರೆಯುವ ವೇಳೆಗೆ ಕರಡು ಮತದಾರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಪಟ್ಟಿಯಲ್ಲಿರುವ ಮತದಾರರ ಒಟ್ಟು ಸಂಖ್ಯೆಯನ್ನು ತಿಳಿಸಿಲ್ಲ.

ಈ ನಡುವೆ 'ಇಂಡಿಯಾ' ವೇದಿಕೆಯ ಪಕ್ಷಗಳು ಬಿಹಾರದ ಎಸ್‌ಐಆರ್ ವಿರುದ್ಧ ಮತ್ತು ಇದನ್ನು ಇಡೀ ದೇಶಕ್ಕೆ ವಿಸ್ತರಿಸುವ ವಿಚಾರದ ವಿರುದ್ಧ ಪ್ರತಿಭಟನೆಯನ್ನು ತೀವ್ರಗೊಳಿಸಲು ನಿರ್ಧರಿಸಿವೆ.



'ಡಾಗ್ ಬಾಬು'ಗೆ ನಿವಾಸ ಪ್ರಮಾಣ ಪತ್ರ!

ಈ ಎಸ್‌ಐಆರ್‌ನಲ್ಲಿ ಮತದಾರರ ಗುರುತಿಗೆ ಪ್ರಮಾಣವಾಗಿ ಆಧಾರ್ ಮತ್ತು ಮತದಾರ ಗುರುತು ಕಾರ್ಡನ್ನು ಸ್ವೀಕರಿಸಲಾಗುವುದಿಲ್ಲ ಎಂಬುದು ಬಹಳ ಚರ್ಚೆಯ ವಿಷಯವಾಯಿತು. ಇದು ಪೌರತ್ವದ ಪ್ರಮಾಣವಲ್ಲ ಎಂಬುದು ಆಯೋಗ ಕೊಟ್ಟ ಒಂದು ಕಾರಣವಾದರೆ, ಇನ್ನೊಂದು ಇವು ಖೋಟಾ ಆಗಿರಲು ಸಾಧ್ಯವಿದೆ ಎಂಬುದು. ಆಯೋಗ ಸ್ವೀಕರಿಸಬಹುದೆಂದು ಪಟ್ಟಿ ಮಾಡಿದ 11 ದಾಖಲೆಗಳಲ್ಲಿ 10ರ ವಿಷಯದಲ್ಲಿಯೂ ಇದನ್ನೇ ಹೇಳಬಹುದಲ್ಲ ಎಂದು ನ್ಯಾಯಪೀಠ ಹೇಳುತ್ತಿರುವಾಗಲೇ, ಈ 11ರಲ್ಲಿ ಒಂದಾದ ನಿವಾಸ ಪ್ರಮಾಣ ಪತ್ರವನ್ನು ಒಂದು ನಾಯಿಗೆ ನೀಡಲಾಗಿದೆ ಎಂಬ ಸುದ್ದಿ ಬಂದಿದೆ.

ಈ ಪ್ರಮಾಣ ಪತ್ರದಲ್ಲಿ 'ಗೋಲ್ಡನ್ ರಿಟ್ರೀವರ್' ನಾಯಿಯ ಫೋಟೋ ಇದ್ದು, ಹೆಸರು 'ಡಾಗ್ ಬಾಬು', ತಂದೆಯ ಹೆಸರು 'ಕುತ್ತ ಬಾಬು' ಮತ್ತು ತಾಯಿಯ ಹೆಸರು 'ಕುತಿಯಾದೇವಿ' ಎಂದಿದೆಯಂತೆ! ಪಾಟ್ನ ಜಿಲ್ಲೆಯ ಮಸೌರಿ ಬ್ಲಾಕ್ ವಿಳಾಸದ ಈ ಪ್ರಮಾಣ ಪತ್ರವನ್ನು ಜೂನ್ 24ರಂದು, ಅಂದರೆ ಈ ಎಸ್‌ಐಆರ್ ಪ್ರಕ್ರಿಯೆಯ ಮೊದಲ ಹಂತ ಮುಗಿಯುವ ಹಿಂದಿನ ದಿನ ನೀಡಲಾಗಿದೆಯಂತೆ. ಆಧಾರ್ ಮತ್ತು ಎಪಿಕ್ ಅನ್ನು ಹೊರತುಪಡಿಸಿದ ಆಯೋಗದ ತರ್ಕದಲ್ಲಿ ಹುರುಳಿಲ್ಲ ಎಂಬುದನ್ನು ಸಾಬೀತು ಪಡಿಸಲಿಕ್ಕಾಗಿಯೇ ಇದಕ್ಕೆ ಅರ್ಜಿ ಹಾಕಿರಬಹುದೇನೋ!

ಎಸ್‌ಐಆರ್ ಚುನಾವಣಾ ಪ್ರಕ್ರಿಯೆಯನ್ನು ಬುಡಮೇಲು ಮಾಡುವಂತದ್ದಾಗಬಹುದು: ಉನ್ನತ ಸ್ಥಾನಗಳಲ್ಲಿದ್ದ ಹಿರಿಯರ ಎಚ್ಚರಿಕೆ

ಸರಕಾರದ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ, 'ಸಂವಿಧಾನಿಕ ನಡವಳಿಕೆ ಗುಂಪಿ'ನ (Constitutional Conduct Group -CCG) 93 ಸದಸ್ಯರು ಬಿಹಾರದಲ್ಲಿ ನಡೆಸಲಾಗುತ್ತಿರುವ ಎಸ್‌ಐಆರ್ "ನಮ್ಮ ಪ್ರಜಾಪ್ರಭುತ್ವದ ಅಡಿಪಾಯದ ಮೇಲೆ – ಸಾರ್ವತ್ರಿಕ ವಯಸ್ಕ ಮತದಾನದ ವ್ಯವಸ್ಥೆ, ಅಂದರೆ ನಾಗರಿಕರ ಮತದಾನದ ಹಕ್ಕಿನ ಮೇಲೆ ದಾಳಿಯಂತೆ ಕಾಣುತ್ತಿರುವುದರಿಂದ" ಅದನ್ನು ನಿಲ್ಲಿಸುವಂತೆ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ತಾವು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದು ಸೇರಿದಂತೆ ಚುನಾವಣೆಗಳನ್ನು ನಡೆಸುವುದು ಮತ್ತು ಮೇಲ್ವಿಚಾರಣೆ ಮಾಡುವಲ್ಲಿ ತೊಡಗಿಸಿಕೊಂಡಿದ್ದ ಮತ್ತು ನಮ್ಮಂತಹ ವಿಶಾಲ ಪ್ರಜಾಪ್ರಭುತ್ವದಲ್ಲಿ ಈ ಕೆಲಸ–ಕಾರ್ಯಗಳ ಸಂಕೀರ್ಣತೆಗಳ ಬಗ್ಗೆ ತಿಳಿದಿರುವುದರಿಂದ, "ಮತದಾರರ ಪಟ್ಟಿಯನ್ನು ಸ್ವಚ್ಛಗೊಳಿಸಲು ಮತ್ತು ಶುದ್ಧೀಕರಿಸಲು ಎಂದು ಉದ್ದೇಶಿಸಿರುವ ಈ ಪ್ರಯತ್ನವು ಅಂತಿಮವಾಗಿ ತಮ್ಮ ಪೌರತ್ವದ ಪುರಾವೆಯಾಗಿ ಅಧಿಕೃತ ದಾಖಲೆಗಳನ್ನು ಹೊಂದಿರದ ಮತದಾರರ ಜನಸಂಖ್ಯೆಯ ಒಂದು ದೊಡ್ಡ ಭಾಗವನ್ನು, ವಿಶೇಷವಾಗಿ ಬಡವರು ಮತ್ತು ಅಂಚಿನಲ್ಲಿ ಇರುವವರನ್ನು ಮತದಾನದ ಹಕ್ಕಿನಿಂದ ವಂಚಿತಗೊಳಿಸುವ ಸಾಧ್ಯತೆಯಿದೆ" ಎಂದು ಈ ಬಹಿರಂಗ ಪತ್ರದಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಈ ಎಲ್ಲಾ 73 ವರ್ಷಗಳಿಂದ, ಮೊದಲ ಸಾರ್ವತ್ರಿಕ ಚುನಾವಣೆಗಳಿಂದ ಆರಂಭಿಸಿ, ಭಾರತದ ಬಹುಪಾಲು ಬಡವರು ತಮ್ಮ ಮತದಾನದ ಹಕ್ಕನ್ನು ಭಾರತೀಯ ಪ್ರಜಾಪ್ರಭುತ್ವದಲ್ಲಿ ತಮ್ಮ ಮೂಲಭೂತ ಪಾಲಾಗಿ ಹೊಂದಿದ್ದಾರೆ. ಇದುವರೆಗೂ ಅನುಸರಿಸಿದ ತತ್ವವೆಂದರೆ, ಯಾರಾದರೂ ಅವರ ಸ್ಥಾನಮಾನವನ್ನು ಪ್ರಶ್ನಿಸಿದ ಹೊರತು, ಅವರು ಪೌರರೆಂದು ಭಾವಿಸಲಾಗುತ್ತದೆ. ➚

...ಕಾಗದದ ಬುಲ್ಲೆಟ್‌ಗಳು

ಪುಟ 2 ರಿಂದ

ಮಂಡಿಸಲು, ರೈತಾಪಿ ಜನರನ್ನು ತಲುಪಲು ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು. ಅದರಲ್ಲಿ "ಉಳುವವನ ಪ್ರಾರ್ಥನೆ" "ಬೆಳಕಿನ ಲಾಟೀನು" ಎಂಬ ಕಿರುಪುಸ್ತಿಕೆಗಳು ಪ್ರಸಿದ್ಧವಾಗಿವೆ.

ಹೀಗೆ ಕಿರುಪುಸ್ತಿಕೆಗಳು ಕೇವಲ ಇಂಗ್ಲೆಂಡ್‌ನಲ್ಲಿ ಮಾತ್ರವಲ್ಲದೆ ಯುರೋಪಿನ ವಿವಿಧ ಪ್ರದೇಶಗಳಲ್ಲಿ ಧಾರ್ಮಿಕ ಸುಧಾರಣೆಯ ವಿಚಾರಗಳನ್ನು ಹಬ್ಬಿಸಲು ಮುಖ್ಯ ಪಾತ್ರ ವಹಿಸಿದವು. ಜರ್ಮನ್ ಭಾಷೆಗೆ ಬೈಬಲ್ ಅನುವಾದ ಮಾಡಿದ ನಂತರ ಜರ್ಮನಿಯಲ್ಲಿ ಆರಂಭವಾದ ಪ್ರಾಟೆಸ್ಟೆಂಟ್ ಸುಧಾರಣೆಯಲ್ಲಿ, ಇಟಲಿ, ಹಾಲಂಡ್, ಫ್ರಾನ್ಸ್, ಸ್ವಿಟ್ಜರ್ಲೆಂಡ್, ಸ್ವೀಡನ್ ಡೆನ್ಮಾರ್ಕ್ ಮೊದಲಾದ ದೇಶಗಳಲ್ಲಿಯೂ ಪಾಂಫ್ಲೆಟ್ ವಾರ್ (ಕಿರುಪುಸ್ತಿಕೆಗಳ ಕದನ)ಗಳೇ ನಡೆದವು. ಮಾರ್ಟಿನ್ ಲೂಥರ್‌ನಂತಹ ಪ್ರಸಿದ್ಧರೂ ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು. ವಿವಿಧ ದೇಶಗಳಲ್ಲಿಯ ಸುಧಾರಕರು, ಆ ಪಂಥಗಳ ವಿವಿಧ ಹಂತಗಳ ಪ್ರಚಾರಕರು ಕಿರುಪುಸ್ತಿಕೆಗಳನ್ನು ವ್ಯಾಪಕವಾಗಿ ಬಳಸಿದರು.

ಇಂಗ್ಲೆಂಡ್‌ನಲ್ಲಿ ರಾಜರು ರೋಮನ್ ಕ್ಯಾಥೋಲಿಕ್ ಚರ್ಚ್ ವಿರುದ್ಧ ಕಾಳಗದ ಕಹಳೆ ಊದಿ ಪ್ರತ್ಯೇಕವಾದ ಆಂಗ್ಲಿಕನ್ ಚರ್ಚ್ ಸ್ಥಾಪಿಸುವಾಗ ಸ್ವತಃ ರಾಜರುಗಳೇ ತಮ್ಮನ್ನು ಸಮರ್ಥಿಸಿಕೊಳ್ಳಲು ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು. ಪೋಪ್ ಮತ್ತು ಕ್ಯಾಥೊಲಿಕ್ ಚರ್ಚ್ ವಿರುದ್ಧ ಕಿರುಪುಸ್ತಿಕೆಗಳ ಕದನವನ್ನು ಪ್ರೋತ್ಸಾಹಿಸಿದರು.

ಮುಂದೆ ಸರಳ ಆರಾಧನೆಯನ್ನು ಪ್ರತಿಪಾದಿಸುವ ಪ್ಯುರಿಟನ್ ಪಂಥ ಇಂಗ್ಲೆಂಡ್‌ನಲ್ಲಿ ಜನಪ್ರಿಯವಾಗುತ್ತಾ ನಡೆದಂತೆ, ಆಂಗ್ಲಿಕನ್ ಚರ್ಚ್ ಕೂಡಾ ಕ್ಯಾಥೊಲಿಕ್ ಚರ್ಚ್‌ನಂತೆ ವೈಭವ, ಭ್ರಷ್ಟಾಚಾರ, ಜನರ ಸುಲಿಗೆ ಮುಂದುರೆಸಿದ್ದರ ವಿರುದ್ಧ ಪ್ಯುರಿಟನ್‌ಗಳು ಬಲವಾದ ದನಿ ಎತ್ತಿದರು. ಹಲವು ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು. ಅಂದು ಆಂಗ್ಲಿಕನ್ ಚರ್ಚ್‌ಗೆ ರಾಜರುಗಳೇ ಮುಖ್ಯಸ್ಥರು. ಆಂಗ್ಲಿಕನ್ ಚರ್ಚ್ ಮತ್ತು ರಾಜಪ್ರಭುತ್ವ ಎರಡೂ ಒಂದೇ ಆಗಿ ಸೇರಿ ಹೋಗಿದ್ದವು. ಆದ್ದರಿಂದ ರಾಜಪ್ರಭುತ್ವ ಇಂತಹ ಕಿರುಪುಸ್ತಿಕೆಗಳನ್ನು ನಿಷೇಧಿಸಿತು. ಕಠಿಣವಾದ ಶಿಕ್ಷೆಗಳನ್ನು ವಿಧಿಸಿತು. ಆದರೆ ಪ್ಯುರಿಟನ್‌ಗಳು ನಿರ್ಬಂಧಗಳನ್ನು ಧಿಕ್ಕರಿಸಿ ನೆರೆಯ ನೆದರ್‌ಲ್ಯಾಂಡ್ಸ್ (ಹಾಲಂಡ್)ನಲ್ಲಿ ಮುದ್ರಿಸಿ ಇಂಗ್ಲೆಂಡ್‌ನಲ್ಲಿ ಹಂಚುತ್ತಿದ್ದರು. ಲೆವಲರ್ಸ್ ನಾಯಕ ಮೊತ್ತ ಮೊದಲು ಕಠಿಣವಾದ ದೈಹಿಕ ಹಿಂಸೆ, ಜೈಲುವಾಸ ಅನುಭವಿಸಿದ್ದು ಪ್ಯುರಿಟನ್ ಪಾಂಫ್ಲೆಟ್ ವಾರ್‌ನ ಸಂದರ್ಭದಲ್ಲಿಯೇ.

ಅದೇ ಸಮಯದಲ್ಲಿ ಈ ಧಾರ್ಮಿಕ ಸುಧಾರಣಾ ಚಳುವಳಿಗಳ ಮುಂದುವರಿಕೆ ಎಂಬಂತೆ, ತಮ್ಮ ಮೇಲಿದ್ದ ಧಾರ್ಮಿಕ ದಬ್ಬಾಳಿಕೆ ಮಾತ್ರವಲ್ಲದೆ ಪಾಳೆಯಗಾರಿ ದಬ್ಬಾಳಿಕೆಯನ್ನು ಕಿತ್ತೆಸೆಯುವ ಆಶಯ ಯುರೋಪಿನ ರೈತರು, ಜೀತಗಾರರ ನಡುವೆ ಮೊಳೆಯಿತು. ಜರ್ಮನಿಯಲ್ಲಿ ಪ್ರಾಟೆಸ್ಟೆಂಟ್ ಸುಧಾರಣೆಗಳ ಜೊತೆ ಜೊತೆಗೆ ನಡೆದ ರೈತ ಯುದ್ಧದಲ್ಲಿ ರೈತ ನಾಯಕ ಮುಂಝರ್ ಹಲವು ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು. ಲೂಥರ್‌ನ ಅವಕಾಶವಾದಿತನ, ಪಾಳೆಯಗಾರಿ ಜಹಗೀರುದಾರರ ಪರವಾದ ವಾದ, ಸಂದರ್ಭ ಸಾಧಕತನವನ್ನು ಟೀಕಿಸುವ ಕಿರುಪುಸ್ತಿಕೆಗಳೂ ಇದ್ದವು. ಅವುಗಳಿಗೆ ಲೂಥರ್ ಉತ್ತರ, ಮುಂಝರ್ ಪ್ರತ್ಯುತ್ತರ ಹೀಗೆ ಈ ಪಾಂಫ್ಲೆಟ್ ವಾರ್ ನಡೆಯಿತು. ಯುರೋಪಿನ ಹಲವು ಪ್ರದೇಶಗಳಲ್ಲಿಯೂ ರೈತ ದಂಗೆಗಳು, ಹೋರಾಟಗಳು ಮೇಲೆದ್ದವು. ಇಂತಹ ಸಂದರ್ಭಗಳಲ್ಲಿ ಕಿರುಪುಸ್ತಿಕೆಗಳ ಕದನಗಳು ನಡೆದವು

ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಪಾಂಫ್ಲೆಟ್ ವಾರ್

ಹೀಗೆ ಧಾರ್ಮಿಕ ವಾದ ವಿವಾದಗಳಲ್ಲಿ ಮುಖ್ಯ ಪಾತ್ರವಹಿಸಿದ ಕಿರುಪುಸ್ತಿಕೆಗಳ ಕದನ ಮೇಲೆ ವಿವರಿಸಿದಂತೆ ರಾಜಪ್ರಭುತ್ವ ಮತ್ತು ಚರ್ಚ್‌ಗಳ ಮೇಳವ, ಕಿರುಪುಸ್ತಿಕೆಗಳ ನಿಷೇಧವನ್ನು ವಿರೋಧಿಸುವ ಸೆಕ್ಯುಲರ್ ವಿಷಯಗಳ ಕಡೆಗೆ ಹೊರಳಿತು. ತೆರಿಗೆ, ಯುದ್ಧ, ರಾಜಪ್ರಭುತ್ವದ ದಬ್ಬಾಳಿಕೆ, ರಾಜಪ್ರಭುತ್ವವನ್ನು ಕಿತ್ತೆಸುವ ಬಗ್ಗೆ, ಪ್ರಜಾಪ್ರಭುತ್ವದ ವಿಷಯಗಳ ಬಗ್ಗೆ ಕೂಡಾ ಹಲವು ಕಿರುಪುಸ್ತಿಕೆಗಳು ಪ್ರಕಟವಾದವು. ದುಡಿಯುವ ಜನರ ನಡುವೆ ಲೆವಲರ್ಸ್‌ಗಳ ಕ್ರಾಂತಿಕಾರಿ ವಿಚಾರಗಳು ಕಿರುಪುಸ್ತಿಕೆಗಳ ಮೂಲಕ ಪಸರಿಸಿದವು. ಪ್ರಜಾಪ್ರಭುತ್ವ ಕ್ರಾಂತಿಯನ್ನು ಮುನ್ನಡೆಸುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದವು.

ಈ ಕ್ರಾಂತಿಯಲ್ಲಿ ಜನರ ವಿರುದ್ಧವಾಗಿ ಯುದ್ಧದಲ್ಲಿ ತೊಡಗಿ ಬಂಧಿತನಾದ ರಾಜ ವಧೆಗೆ ಮೊದಲು ರಾಜಪ್ರಭುತ್ವವನ್ನು ಮತ್ತು ಅದನ್ನು ರಕ್ಷಿಸುವುದಕ್ಕಾಗಿ ತಾನು ಹುತಾತ್ಮನಾಗುತ್ತಿದ್ದೇನೆ ಎಂದು ಕಿರುಪುಸ್ತಿಕೆ ಪ್ರಕಟಿಸಿದ. ಅದನ್ನು ಟೀಕಿಸಿ, ವಿಶ್ಲೇಷಿಸಿ, ಸಮರ್ಥಿಸಿ ಹಲವು ಕಿರುಪುಸ್ತಿಕೆಗಳು ಹೊರಬಂದವು. ಇದು ಒಂದು ಪ್ರಸಿದ್ಧ ಕಿರುಪುಸ್ತಿಕೆಗಳ ಕದನ.

ಈ ಕಿರುಪುಸ್ತಿಕೆಗಳು ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವಲ್ಲಿ, ಪ್ರಭುತ್ವಗಳನ್ನು ಪ್ರಭಾವಿಸುವಲ್ಲಿ ವಹಿಸಿದ ಪಾತ್ರ ಐತಿಹಾಸಿಕವಾದದ್ದು. 1580 ಧಾರ್ಮಿಕ ಚರ್ಚೆಯ ಪಾಂಫ್ಲೆಟ್‌ಗಳ ಉತ್ತುಂಗವಾದರೆ 1640 ರ ದಶಕ ಪ್ರಜಾಪ್ರಭುತ್ವ ವಿಚಾರಗಳ ಪಾಂಫ್ಲೆಟ್‌ಗಳ ಉತ್ತುಂಗದ ಶಿಖರ ಎನ್ನಬಹುದು. ಮುಂದೆಯೂ ಕಾರ್ಮಿಕರು, ಮಹಿಳೆಯರು ಮತದಾನದ ಹಕ್ಕಿಗಾಗಿ ನಡೆಸಿದ ಸಂಘರ್ಷದ ಸಮಯದಲ್ಲಿ, ಐರಿಶ್ ಕ್ರಾಂತಿ, ಫೇಬಿಯನ್ ಸಮಾಜವಾದಿ ಸಿದ್ಧಾಂತದ ಬೆಳವಣಿಗೆಯ ಸಂದರ್ಭದಲ್ಲಿ ಪಾಂಫ್ಲೆಟ್‌ಗಳು ಆಯಾ ಚಳುವಳಿಗಳಿಗೆ ಉತ್ತಮ ಕಾಣಿಕೆ ನೀಡಿವೆ.

ಫ್ರೆಂಚ್ ಮತ್ತು ಅಮೇರಿಕದ ಕ್ರಾಂತಿಗಳಲ್ಲಿ

ಫ್ರೆಂಚ್ ಕ್ರಾಂತಿಯಲ್ಲಿ ಕಿರುಪುಸ್ತಿಕೆಗಳ ಪಾತ್ರ ಮತ್ತಷ್ಟು ಎತ್ತರಕ್ಕೇರಿತು. ಬಹುಮುಖಿಯಾಯಿತು. 30,000ಕ್ಕಿಂತ ಹೆಚ್ಚು ಕಿರು ಪುಸ್ತಿಕೆಗಳು ಪ್ರಕಟವಾದವು. ಪ್ರಜಾಪ್ರಭುತ್ವ ಮತ್ತು ನವೋದಯದ ವೈಚಾರಿಕತೆಯ ಹಲವು ಆಯಾಮಗಳನ್ನು ಪ್ರತಿಪಾದಿಸಿದವು. ಫ್ರೆಂಚ್ ಕ್ರಾಂತಿಯ ವಿರುದ್ಧವಾಗಿ ಎಡ್‌ಮಂಡ್ ಬರ್ಕ್ ಪಾಂಫ್ಲೆಟ್ ಪ್ರಕಟಿಸಿದರೆ ಅದನ್ನು ಟೀಕಿಸಿ ಹಲವು ಪಾಂಫ್ಲೆಟ್‌ಗಳು ಬರೆಯಲ್ಪಟ್ಟವು.

ಅಮೆರಿಕದ ಕ್ರಾಂತಿಯ ಯುದ್ಧದ ಸಮಯದಲ್ಲಿ ಸಾವಿರಾರು ಕಿರುಪುಸ್ತಿಕೆಗಳು ಪ್ರಕಟವಾದವು. ಅಮೆರಿಕದ ಸಂವಿಧಾನದ ಚರ್ಚೆಯ ಸಮಯದಲ್ಲಿಯೂ ಕಿರುಪುಸ್ತಿಕೆಗಳ ಮೂಲಕ ಹಲವು ಅಂಶಗಳ ಬಗ್ಗೆ ಚರ್ಚೆಗಳು ನಡೆದವು. ಥಾಮಸ್ ಪೇನ್ ನಂತಹವರು ಇದರಲ್ಲಿ ಭಾಗವಹಿಸಿದರು.

ಭಾರತದಲ್ಲಿ ಅಂಗ್ಯೆಯಗಲದ ಕರಪತ್ರಗಳೇ ರಾಜಕೀಯ ವಿಚಾರಗಳ ಪ್ರಸರಣದ ಮುಖ್ಯ ವಿಧಾನವಾಗಿದೆ. ಜನರಲ್ಲಿ ವೈಚಾರಿಕ ಅರಿವನ್ನು ಮೂಡಿಸುವಂತಹ, ವಾದ ಸಂವಾದಗಳಲ್ಲಿ ಆಸಕ್ತಿ ಹುಟ್ಟಿಸುವ ಪಾಂಫ್ಲೆಟ್/ ಕಿರುಪುಸ್ತಿಕೆಗಳು ಬಹಳ ಅಪರೂಪವಾಗಿವೆ. ಕಮ್ಯುನಿಸ್ಟ್ ಪಕ್ಷಗಳಿಗೆ ಸೀಮಿತವಾಗಿವೆ.

ಪ್ರಜಾಪ್ರಭುತ್ವ ಸ್ಥಾಪನೆಯಾಗುವ ಹಲ ಕಾಲ ಮೊದಲೇ ಪ್ರಜಾಪ್ರಭುತ್ವದ ವಿಚಾರಗಳ ಬಗ್ಗೆ ವ್ಯಾಪಕ ಅರಿವು ಮೂಡಿಸಿದ ಪಾಂಫ್ಲೆಟ್/ ಕಿರುಪುಸ್ತಿಕೆಗಳ ಆಂದೋಲನ ಭಾರತದಲ್ಲಿ ಅಂತಹ ಪಾತ್ರ ವಹಿಸಲಾಗಲಿಲ್ಲ. ಇವು ಎಬ್ಬಿಸಿದ ಬಹು ಮುಖ್ಯ ಚರ್ಚೆಗಳು ಇಂದಿಗೂ, ಭಾರತಕ್ಕೂ ಪ್ರಸ್ತುತವಾಗಿವೆ. ಈ ವಿಧಾನವಂತೂ ಇಂದಿನ ಭಾರತದಲ್ಲಿ ಶಿಕ್ಷಣ ಪಡೆದಿರುವ ಜನರನ್ನು ಅವರ ಮೂಲಕ ಎಲ್ಲರಲ್ಲೂ ಎಚ್ಚರ ಮೂಡಿಸಲು ಪರಿಣಾಮಕಾರಿಯಾಗಿದೆ.

ಅದಕ್ಕೆ ಯಶಸ್ವಿ ಉದಾಹರಣೆಯಾಗಿ ಸೀತಾರಾಮ್ ಯೆಚೂರಿಯವರ "ಏನಿದು ಹಿಂದೂ ರಾಷ್ಟ್ರ", "ಪೆಟ್ರೋಲ್ ಬೆಲೆಗಳ ಬಗ್ಗೆ, ಗ್ಯಾಟ್ ಬಗ್ಗೆ ಬರೆದ ಪಾಂಫ್ಲೆಟ್/ ಕಿರುಪುಸ್ತಿಕೆಗಳನ್ನು ನೆನಪಿಸಿಕೊಳ್ಳಬಹುದು.


ಪಾಂಫ್ಲೆಟ್‌ಗಳನ್ನು ಬರೆದ ಸಿದ್ಧ ಪ್ರಸಿದ್ಧರು

ರಾಷ್ಟ್ರಕವಿ ಕುವೆಂಪುರವರ ರಾಮಾಯಣ ದರ್ಶನ ಕಾವ್ಯಕ್ಕೆ ಮಾದರಿಯಾದ ಮಹಾಕವಿ ಮಿಲ್ಟನ್ ಪ್ರಜಾಪ್ರಭುತ್ವ ಕ್ರಾಂತಿಯ ಪರವಾಗಿ ಪ್ಯುರಿಟನ್ ಪಂಥದ ಪಾಂಫ್ಲೆಟ್ ಬರೆದರೆ, ಗಲಿವರನ ಪ್ರವಾಸಗಳ ಕರ್ತೃ ಜೊನಾಥನ್ ಸ್ವಿಫ್ಟ್, ರಾಬಿನ್‌ಸನ್ ಕ್ರುಸೋ ಬರೆದ ಡೇನಿಯಲ್ ಡೆಫೊ ಮೊದಲಾದ ಸಾಹಿತಿಗಳು ಪಾಂಫ್ಲೆಟ್‌ಗಳನ್ನು ಬರೆದಿದ್ದಾರೆ. ರಾಜರಾದ ಎಡ್ವರ್ಡ್ 8, ರಾಣಿ ಹಿರಿಯ ಎಲಿಜಬೆತ್, ಮೇರಿ ಚಾರ್ಲ್ಸ್ 2 ಇವರುಗಳೂ ಕೂಡಾ. ರಾಜಕೀಯ ಚಿಂತಕರಾದ ವಾಲ್ಟೇರ್, ರುಸೋ, ಅಮೆರಿಕದ ಅಲೆಕ್ಸಾಂಡರ್ ಹ್ಯಾಮಿಲ್ಟನ್, ಜೇಮ್ಸ್ ಮ್ಯಾಡಿಸನ್, ಜಾನ್ ಗೇ, ಥಾಮಸ್ ಪೇನ್ ರವರುಗಳ ಪಾಂಫ್ಲೆಟ್‌ಗಳು ಬಹಳ ಪ್ರಸಿದ್ಧವಾದವು. ಪ್ರಸಿದ್ಧ ತತ್ವಶಾಸ್ತ್ರಜ್ಞರಾದ, ಫ್ರಾನ್ಸಿಸ್ ಬೇಕನ್, ಥಾಮಸ್ ಹಾಬ್ಸ್, ಡೆನಿಸ್ ದಿದೆರೊ, ಮಾಂಟೆಸ್ಕ್ಯೂ ಮತ್ತಿತರರು ಪಾಂಫ್ಲೆಟ್ ಬರೆಯುವ ಮೂಲಕ ಜನರ ಅರಿವನ್ನು ಹೆಚ್ಚಿಸಿದ್ದಾರೆ.

ಆದ್ದರಿಂದ, ಪ್ರತಿಯೊಬ್ಬರನ್ನು ಮತದಾರರಾಗಿ ಸೇರಿಸಿಕೊಳ್ಳಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಬೇಕು. ವಾಸ್ತವವಾಗಿ, 'ಹೊಸ' ಭಾರತೀಯ ಚುನಾವಣಾ ಆಯೋಗ ಕಾರ್ಯನಿರ್ವಹಿಸುತ್ತಿರುವ ವಿಧಾನಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ, ಹಿಂದಿನ ಪ್ರಯತ್ನವು ಯಾವುದೇ ವಯಸ್ಕ ಭಾರತೀಯರನ್ನು ಮತದಾನ ಪ್ರಕ್ರಿಯೆಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದಾಗಿತ್ತು ಮತ್ತು ಚುನಾವಣಾ ಆಯೋಗ ದೇಶದ ದೂರ–ದೂರದ ಮೂಲೆಗಳಲ್ಲಿ ವಾಸಿಸುವ ಜನರನ್ನು, ಅವರ ಬದುಕುಗಳು ಎಷ್ಟೇ ಅಂಚಿನಲ್ಲಿದ್ದರೂ, ಮತದಾರರಾಗಿ ಸೇರಿಸಿಕೊಳ್ಳುವುದನ್ನು ತನ್ನ ಗಂಭೀರ ಜವಾಬ್ದಾರಿಯಾಗಿ ತೆಗೆದುಕೊಂಡಿತು. ಪೂರ್ಣ ಗಮನ ಅವರನ್ನು ಒಳಗೊಳ್ಳುವುದರ ಮೇಲೆಯೇ ಹೊರತು, ಅನರ್ಹತೆಯ ಆರೋಪ ಹಾಕಿ ಹೊರಗಿಡುವುದಲ್ಲ ಎಂದು ಈ ಹಿರಿಯ ಅನುಭವಿಗಳು ತಮ್ಮ ಬಹಿರಂಗ ಪತ್ರದಲ್ಲಿ ಹೇಳುತ್ತಾರೆ.

ಈ ಎಸ್‌ಐಆರ್ ಸಂವಿಧಾನದ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ವಹಿಸಲಾದ ಜವಾಬ್ದಾರಿಯನ್ನು ನಿಭಾಯಿಸುವ ಒಂದು ಯತ್ನ ಎಂದು ಹೇಳಿಕೊಳ್ಳಲಾಗಿದೆ, ಆದರೆ ಅದು ವಸ್ತುತಃ ಮಾಡುತ್ತಿರುವುದು ಈ ಕುರಿತ ನೀತಿ ಮತ್ತು ಆಚರಣೆಯನ್ನು ತಿರುಗು ಮುರುಗೊಳಿಸುವುದು ಎಂದು ಖೇದ ವ್ಯಕ್ತಪಡಿಸಿರುವ ಬಹಿರಂಗ ಪತ್ರವು, ಸುಧಾರಣೆಯ ನೆಪದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಬುಡಮೇಲು ಮಾಡುವ ಸಾಮರ್ಥ್ಯವಿರುವ ಎಸ್‌ಐಆರ್ ಅನ್ನು ನಡೆಸಿರುವುದೂ ಸಾಕಾಗಿಲ್ಲವೋ ಎಂಬಂತೆ, ಅದನ್ನು ಅಗಾಧ ವೇಗದಲ್ಲಿ ಜಾರಿಗೆ ತಂದಿರುವುದು, ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಕೆಲಸ ಪೂರೈಸಲಾಗದಷ್ಟು ಕಡಿಮೆ ಸಮಯ ನೀಡಿರುವುದು, ಮಾಹಿತಿಗಳನ್ನು ಡಿಜಿಟಲೀಕರಣಗೊಳಿಸಲು ಅಗತ್ಯ ಸೌಕರ್ಯಗಳನ್ನು ಲಭ್ಯವಾಗಿಸದಿರುವುದು ಆಯೋಗ ಹಾಕಿಕೊಟ್ಟ ಅತ್ಯಂತ ವಿಸ್ತಾರವಾದ ಕಾರ್ಯವಿಧಾನಗಳನ್ನೇ ಅಣಕಿಸುವಂತೆ ಮಾಡಿವೆ ಎಂದು ತೀವ್ರವಾಗಿ ಟೀಕಿಸಿದೆ.

"ಚುನಾವಣೆಗಳಿಗೆ ಸಂಬಂಧಿಸಿದ ಹಲವಾರು ವಿಷಯಗಳಲ್ಲಿ ಆಯೋಗಕ್ಕೆ ನಾವು ಸಲ್ಲಿಸಿದ ವಿವಿಧ ಅರ್ಜಿಗಳು ಮತ್ತು ಮನವಿಗಳನ್ನು ಹಿಂದೆ ನಿರ್ಲಕ್ಷಿಸಲಾಗಿದೆ ಮತ್ತು ಬದಿಗೆ ತಳ್ಳಲಾಗಿದೆ, ಆದ್ದರಿಂದ ಸಾರ್ವಜನಿಕ ಅಭಿಪ್ರಾಯವನ್ನು ಸಜ್ಜುಗೊಳಿಸಲು ಮತ್ತು ಸರಿಪಡಿಸುವ ಕ್ರಮ ಕೈಗೊಳ್ಳಲು 'ನಾವು, ಜನತೆ' ಚುನಾವಣಾ ಆಯೋಗದ ಮೇಲೆ ಒತ್ತಡ ತರಲು ಈ ಬಹಿರಂಗ ಪತ್ರವನ್ನು ಬರೆಯುತ್ತಿದ್ದೇವೆ. ಈ ವಿಷಯವನ್ನು ಪರಿಶೀಲಿಸುತ್ತಿರುವ ಸುಪ್ರೀಂ ಕೋರ್ಟ್, ವಿಶೇಷವಾಗಿ ಸಿಸಿಜಿ ಸದಸ್ಯರಾಗಿ ನಮ್ಮಲ್ಲಿ ಹೆಚ್ಚಿನವರು ಮತದಾರ ಪಟ್ಟಿಯ ತಯಾರಿಕೆ ಸೇರಿದಂತೆ ಚುನಾವಣೆಗಳನ್ನು ನಡೆಸುವ ಮತ್ತು ಮೇಲ್ವಿಚಾರಣೆ ಮಾಡುವ ದೀರ್ಘ ಅನುಭವವನ್ನು ಹೊಂದಿರುವುದರಿಂದ ಮತ್ತು ನಮ್ಮಂತಹ ವಿಶಾಲ ಪ್ರಜಾಪ್ರಭುತ್ವದಲ್ಲಿ ಹಾಗೆ ಮಾಡುವಲ್ಲಿನ ಸಂಕೀರ್ಣತೆಗಳ ಬಗ್ಗೆ ನಮಗೆ ತಿಳಿದಿರುವುದರಿಂದ, ನಾವು ಎತ್ತಿರುವ ಪ್ರಶ್ನೆಗಳ ಬಗ್ಗೆ ಗಮನ ಹರಿಸುತ್ತದೆ ಎಂದೂ ನಾವು ಆಶಿಸುತ್ತೇವೆ" ಎಂದಿರುವ ಈ ಅನುಭವೀ ನಿವೃತ್ತ ಅಧಿಕಾರಿಗಳ ಬಹಿರಂಗ ಪತ್ರ ಮಾರ್ಮಿಕವಾಗಿ 'ಸತ್ಯಮೇವ ಜಯತೇ' ಎಂಬ ಆಶಯದೊಂದಿಗೆ ಮುಕ್ತಾಯಗೊಳ್ಳುತ್ತದೆ.



ಬಾಂಬೆ ಹೈಕೋರ್ಟ್‌ನ ಇಬ್ಬರು ನ್ಯಾಯಾಧೀಶರುಗಳ ಟಿಪ್ಪಣಿಗಳಿಂದ ಇಡೀ ದೇಶ ಬೆಚ್ಚಿಬಿದ್ದಿದೆ. ಸ್ವಯಂ-ಘೋಷಿತ ವಿವೇಕವನ್ನು ಪ್ರದರ್ಶಿಸಿದ ನ್ಯಾಯಮೂರ್ತಿಗಳಾದ ರವೀಂದ್ರ ಘುಗೆ ಮತ್ತು ಗೌತಮ್ ಅನ್ಖಡ್ ಅವರು, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಲ್ಲಿಸಿದ್ದ ಅರ್ಜಿಯೊಂದನ್ನು ವಜಾಮಾಡುವಾಗ ಆಘಾತಕಾರಿಯಾದ ಹೇಳಿಕೆಯನ್ನು ನೀಡಿದ್ದಾರೆ. ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ನರಮೇಧವನ್ನು ಪ್ರತಿಭಟಿಸಲು ಅನುಮತಿ ಕೋರಿ ಸಿಪಿಐ(ಎಂ) ಈ ಅರ್ಜಿಯನ್ನು ಸಲ್ಲಿಸಿತ್ತು.

ನ್ಯಾಯಾಂಗದಲ್ಲಿ ಅನಿಷ್ಟಕಾರಿ ಉದ್ವೇಗಗಳ ಪರಿಣಾಮ

ನೀಲೋತ್ಪಲ್ ಬಸು

‘ಮೊದಲು ನಮ್ಮ ದೇಶದ ನಾಗರಿಕರ ಬಗ್ಗೆ ದೇಶಪ್ರೇಮ ತೋರಿಸಿ’ ಎಂದು ಪೀಠದಲ್ಲಿದ್ದ ಈ ಇಬ್ಬರು ನ್ಯಾಯಾಧೀಶರುಗಳು ಹೇಳಿದ್ದಾರೆ. ತಮ್ಮ ಹೇಳಿಕೆಯನ್ನು ಸಮರ್ಥಿಸುವ ದನಿಯಲ್ಲಿ ಅವರು ಈ ರೀತಿ ಹೇಳಿದರು: ‘ನಮ್ಮ ದೇಶದಲ್ಲಿ ಬಗೆಹರಿಸಬೇಕಾದ ಸಾಕಷ್ಟು ಸಮಸ್ಯೆಗಳಿವೆ. ಈ ರೀತಿಯ ಯಾವುದೂ ನಮಗೆ ಬೇಕಿಲ್ಲ. ನೀವು ದೂರದೃಷ್ಟಿ ಇಲ್ಲದವರೆಂದು ಹೇಳಲು ನಮಗೆ ನಿಜವಾಗಿಯೂ ಖೇದವೆನಿಸುತ್ತದೆ.

ನೀವು ಇಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ನಿರ್ಲಕ್ಷಿಸಿ, ಗಾಜಾ ಮತ್ತು ಪ್ಯಾಲೆಸ್ಟೀನ್‌ನತ್ತ ನೋಡುತ್ತಿದ್ದೀರಿ. ನಿಮ್ಮ ಸ್ವಂತ ದೇಶಕ್ಕಾಗಿ ನೀವು ಏನಾದರೂ ಯಾಕೆ ಮಾಡುತ್ತಿಲ್ಲ? ನಿಮ್ಮ ಸ್ವಂತ ದೇಶವನ್ನು ನೋಡಿರಿ’ ಎಂದು ಹೇಳಿದ ನ್ಯಾಯಾಧೀಶರುಗಳು, ‘ದೇಶಪ್ರೇಮಿಗಳಾಗಿರಿ. ಇದು ದೇಶಪ್ರೇಮವಲ್ಲ’ ಎಂದೂ ನುಡಿದರು.

ತಮ್ಮದೇ ಸ್ವಯಂ ಸದಾಚಾರದಿಂದ ಪ್ರೇರಿತರಾದ ನ್ಯಾಯಾಧೀಶರುಗಳು ಮುಂದುವರಿದು ಹೀಗೂ ಹೇಳಿದರು: ‘ಯಾವ ರೀತಿಯಲ್ಲಿ ಧೂಳೆಬ್ಬಿಸುತ್ತೀರಿ ಎಂಬುದು ನಿಮಗೆ ಗೊತ್ತಿಲ್ಲ. ಪ್ಯಾಲೆಸ್ಟೀನ್ ಪರವೇ ಇರಲಿ ಇಸ್ರೇಲ್ ಪರವೇ ಇರಲಿ. ನೀವು ಇದನ್ನೆಲ್ಲ ಯಾಕೆ ಮಾಡುತ್ತೀರಿ? ನೀವು ಪ್ರತಿನಿಧಿಸುವ ಪಕ್ಷ ಯಾವುದೆಂಬುದನ್ನು ನೋಡಿದರೆ, ಇದರಿಂದ ದೇಶದ ವಿದೇಶಾಂಗ ವ್ಯವಹಾರಗಳಿಗೆ ಏನಾಗುತ್ತಿದೆ ಎನ್ನುವುದನ್ನು ನೀವು ಅರ್ಥಮಾಡಿಕೊಳ್ಳುತ್ತಿಲ್ಲ ಎನ್ನುವುದು ಸ್ಪಷ್ಟವಾಗಿದೆ’ ಎಂದರು.

‘ನಿಮ್ಮದು ಭಾರತದಲ್ಲಿ ನೊಂದಾವಣೆಯಾಗಿರುವ ಸಂಸ್ಥೆಯಾಗಿದೆ. ಕಸ ಸುರಿಯುವುದು, ಮಾಲಿನ್ಯ, ಒಳಚರಂಡಿ, ಪ್ರವಾಹ ಮುಂತಾದ ವಿಷಯಗಳನ್ನು ನೀವು ಕೈಗೆತ್ತಿಕೊಳ್ಳಬಹುದು. ನಾವು ಕೆಲವು ಉದಾಹರಣೆಗಳನ್ನು ನೀಡುತ್ತಿದ್ದೇವೆ ಅಷ್ಟೇ. ನೀವು ಈ ವಿಷಯಗಳ ಬಗ್ಗೆ ಪ್ರತಿಭಟಿಸುತ್ತಿಲ್ಲ. ಆದರೆ, ದೇಶದಿಂದ ಸಾವಿರಾರು ಮೈಲಿಗಳಾಚೆ ನಡೆಯುತ್ತಿರುವ ಯಾವುದಕ್ಕೋ ಪ್ರತಿಭಟಿಸುತ್ತಿದ್ದೀರಿ’ ಎಂದೂ ಪೀಠದಲ್ಲಿದ್ದ ನ್ಯಾಯಾಧೀಶರುಗಳು ಹೇಳಿದರು.

ಗೊತ್ತಿಲ್ಲದಿರುವುದು ಬೇಸರದ ಸಂಗತಿ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಬಗ್ಗೆಯಾಗಲೀ ಭಾರತದ ಸರಕಾರಗಳು ಸತತವಾಗಿ ಪ್ಯಾಲೆಸ್ಟೀನ್ ಗುರಿಯ ಬೆಂಬಲಾರ್ಥ ತೆಗೆದುಕೊಳ್ಳುತ್ತಿದ್ದ ಸ್ಥಿರವಾದ ವಿದೇಶಾಂಗ ನೀತಿಯ ಬಗ್ಗೆಯಾಗಲೀ ಈ ನ್ಯಾಯಾಧೀಶರುಗಳು ಗೊತ್ತಿಲ್ಲದಿರುವುದು ಬೇಸರದ ಸಂಗತಿಯಾಗಿದೆ. ತಮ್ಮ ಸ್ವಾತಂತ್ರ್ಯ ಮತ್ತು ಮಾತೃಭೂಮಿಯ ಹಕ್ಕಿಗಾಗಿ ಪ್ಯಾಲೆಸ್ಟೀನಿ ಜನರು ನಡೆಸುತ್ತಿರುವ ನ್ಯಾಯಬದ್ಧ ಹೋರಾಟಕ್ಕೆ ಭಾರತ ದೀರ್ಘಕಾಲದಿಂದ ನೀಡುತ್ತಿರುವ ಬೆಂಬಲದ ಬಗ್ಗೆ ಅವರು ಜಾಣಕುರುಡರಾಗಿದ್ದಾರೆ. ಹಲವು ದಶಕಗಳಿಂದ ಇಸ್ರೇಲ್‌ನಿಂದ ವ್ಯವಸ್ಥಿತವಾಗಿ ಹಾಗೂ ನಿರಂತರವಾಗಿ ಪ್ರತ್ಯೇಕಗೊಂಡ ಭೂಮಿಯನ್ನು ಪಡೆಯುವುದು ಅವರ ಹೋರಾಟದ ಗುರಿಯಾಗಿದೆ. ಗಾಜಾದಲ್ಲಿ ನಡೆಯುತ್ತಿರುವ ಭಯಾನಕ ನರಮೇಧಕ್ಕೆ ವ್ಯಕ್ತವಾಗುತ್ತಿರುವ ಜಾಗತಿಕ ಖಂಡನೆಗೆ ಕೂಡ ಈ ನ್ಯಾಯಾಧೀಶರುಗಳು ಅಷ್ಟೇ ಕುರುಡಾಗಿದ್ದಾರೆ. ಅಂತಾರಾಷ್ಟ್ರೀಯ ನ್ಯಾಯ ಕೋರ್ಟ್ (ಐಸಿಜೆ) ಮತ್ತು ವಿಶ್ವ ಸಂಸ್ಥೆಯ ನಾನಾ ಸಂಸ್ಥೆಗಳು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಈ ಅಂತಾರಾಷ್ಟ್ರೀಯ ಆಕ್ರೋಶ ಪ್ರತಿಫಲಿಸುತ್ತದೆ. ಫ್ರಾನ್ಸ್ ಸಹಿತ ಪಾಶ್ಚಾತ್ಯ ದೇಶಗಳ ಸರಕಾರಗಳು ಕೂಡ ಹಸಿವೆಗೊಳಗಾದ ಗಾಜಾ ಜನರು ಶರಣಾಗುವಂತೆ ಮಾಡುವ ಇಸ್ರೇಲ್‌ನ ಹೇಯ ದೌರ್ಜನ್ಯದ ವಿರುದ್ಧ ಮಾತನಾಡುವಂತೆ ಆಂತರಿಕವಾಗಿ ತೀವ್ರ ಒತ್ತಡಕ್ಕೆ ಒಳಗಾಗಿವೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸನದನ್ನು ಉಲ್ಲಂಘಿಸಿ ಇಸ್ರೇಲ್ ಈ ರೀತಿ ಮಾಡುತ್ತಿದೆ. ಈಗ, ಭಾರತ ಸರಕಾರ ಕೂಡ ನರಮೇಧದ ತೀವ್ರತೆಯನ್ನು ಒಪ್ಪಿಕೊಳ್ಳುವ ಒತ್ತಡಕ್ಕೆ ಒಳಗಾಗಿದೆ.

ಪ್ರತಿಭಟನೆಯು ವಿದೇಶಾಂಗ ನೀತಿ ವಿಚಾರದಲ್ಲಿ ‘ಧೂಳೆಬ್ಬಿಸುವುದಿಲ್ಲ’

‘ವಿಶೇಷವಾಗಿ ಆರೋಗ್ಯ ಮತ್ತು ಶಿಕ್ಷಣ ಪರಿಸ್ಥಿತಿ ಕಳವಳಕಾರಿಯಾಗಿದೆ. ಗಾಜಾದ ಶೇಕಡ 95ರಷ್ಟು ಆಸ್ಪತ್ರೆಗಳು ಹಾನಿಗೊಂಡಿವೆ ಅಥವಾ ನಾಶವಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಂದಾಜು ಮಾಡಿದೆ. ಕಳೆದ 20ಕ್ಕೂ ಹೆಚ್ಚು ತಿಂಗಳಿಂದ 6,50,000ಕ್ಕಿಂತ ಅಧಿಕ ಮಕ್ಕಳಿಗೆ ಶಾಲೆಗಳಿಗೆ ಹೋಗಲಾಗುತ್ತಿಲ್ಲ ಎಂಬುದಾಗಿ ಮಾನವ ಹಕ್ಕುಗಳ ಕುರಿತ ಹೈ ಕಮಿಷನರ್ ಕಚೇರಿ ತಿಳಿಸಿದೆ’ ಎಂಬುದಾಗಿ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಭಾರತದ ಪರ್ಮನೆಂಟ್ ಮಿಷನ್ 2025 ಜುಲೈ 23ರಂದು ಹೇಳಿದೆ. ಆದ್ದರಿಂದ, ಜಡ್ಜ್‌ಗಳಾದ ಘುಗೆ ಮತ್ತು ಅನ್ಖಡ್ ಹೇಳಿರುವಂತೆ ಪ್ರತಿಭಟನೆಯು ವಿದೇಶಾಂಗ ನೀತಿ ವಿಚಾರದಲ್ಲಿ ‘ಧೂಳೆಬ್ಬಿಸುವುದಿಲ್ಲ’. ಬದಲಿಗೆ, ನಿರಾಕರಿಸಲಾಗದ ಮಾನವೀಯ ದುರಂತದ ಎದುರಲ್ಲಿ ಸರಕಾರವೇ ಮಣ್ಣು ಮುಕ್ಕಬೇಕಾಗಿದೆ.

ಕಮ್ಯೂನಿಸ್ಟ್–ವಿರೋಧಿ ಮನಸ್ಥಿತಿಯಿಂದ

ವಿದೇಶಾಂಗ ನೀತಿ ಕುರಿತ ಕಾಳಜಿ ಮಾತ್ರದಿಂದಲೇ ನ್ಯಾಯಮೂರ್ತಿಗಳು ಈ ರೀತಿಯ ಟಿಪ್ಪಣಿಗಳನ್ನು ಮಾಡಿಲ್ಲ. ಅವರ ಕೋಪವು ಕಮ್ಯೂನಿಸ್ಟ್–ವಿರೋಧಿ ಮನಸ್ಥಿತಿಯಿಂದ ರೂಪುಗೊಂಡಿದ್ದು ಎನ್ನುವುದು ಸ್ಪಷ್ಟವಾಗಿದೆ. ಇಲ್ಲದಿದ್ದರೆ, ಅವರು ಸಲಹೆ ಮಾಡಿದಂಥ ಕಸ ನಿರ್ವಹಣೆ, ಪ್ರವಾಹ ಅಥವಾ ಮಾಲಿನ್ಯದಂಥ ಮೂಲಭೂತ ವಿಷಯಗಳನ್ನು ಕಮ್ಯೂನಿಸ್ಟರು ಕೈಗೆತ್ತಿಕೊಂಡಿದ್ದಾರೆ ಎನ್ನುವುದನ್ನು ಅವರು ಗುರುತಿಸುತ್ತಿದ್ದರು. ಸಿಪಿಐ(ಎಂ) ಕಾರ್ಯಕರ್ತರು ಪ್ರತಿನಿತ್ಯ ಇಂಥ ಹೋರಾಟಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಸ್ಥಳೀಯ ಸಮಸ್ಯೆಗಳ ಕುರಿತ ಹೋರಾಟಗಳು ಭಾರತೀಯ ಸಂವಿಧಾನದಲ್ಲಿ ಅಡಕವಾಗಿರುವ ಪ್ರತಿಭಟಿಸುವ ಮೂಲಭೂತ ಹಕ್ಕು ಮತ್ತು ಅಂತಾರಾಷ್ಟ್ರೀಯ ಅನ್ಯಾಯದ ವಿಚಾರಗಳಲ್ಲಿ ಸೌಹಾರ್ದತೆ ವ್ಯಕ್ತಪಡಿಸುವುದನ್ನು ನಿರಾಕರಿಸುವುದಿಲ್ಲ.

ನ್ಯಾಯಾಂಗವು ಸ್ವಯಂ ಸಮರ್ಥವಾಗಿರಲೂ ಬೇಕು

ವಾಸ್ತವವಾಗಿ, ನಮ್ಮ ಸಂವಿಧಾನ ರಚನೆ ಮಾಡಿದವರು ಸಂವಿಧಾನ ರಚನಾ ಸಭೆ ಮೂಲಕ ಪ್ರಭುತ್ವದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವಿನ ಅಧಿಕಾರದ ಸ್ಪಷ್ಟವಾದ ಪ್ರತ್ಯೇಕತೆಗೆ ಹೆಚ್ಚು ಮಹತ್ವ ನೀಡಿದ್ದಾರೆ. ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಚಿಂತನೆ ಕುರಿತ ಆರ್ಟಿಕಲ್ 50ರ ಬಗ್ಗೆ 1948 ಡಿಸೆಂಬರ್ 10ರಂದು ಚರ್ಚಿಸುವ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹೀಗೆ ಹೇಳಿದ್ದರು: ‘ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸುವ ಪ್ರಶ್ನೆಗೆ ಸಂಬಂಧಿಸಿ ಹೇಳುವುದಾದರೆ, ನಾನು ಹೇಳಿರುವಂತೆ, ಅಭಿಪ್ರಾಯಭೇದವಿಲ್ಲ. ಈಗ ನಿರ್ದೇಶಕ ತತ್ವಗಳ ಭಾಗವಾಗುತ್ತಿರುವ, ನಾವು ಅಂಗೀಕರಿಸಿದ ಆರ್ಟಿಕಲ್‌ಗೆ ನಾವು ಬದ್ಧರಾಗಿದ್ದೇವೆ ಎನ್ನುವುದು ನನ್ನ ನಿರ್ಧಾರವಾಗಿದೆ’. ಇದೇ ತತ್ವವನ್ನು ಇನ್ನಷ್ಟು ಬಲಪಡಿಸಿದ ಅಂಬೇಡ್ಕರ್ 1949 ಮೇ 24ರಂದು ಹೀಗೆ ಘೋಷಿಸಿದರು: ‘ನಮ್ಮ ನ್ಯಾಯಾಂಗವು ಕಾರ್ಯಾಂಗದಿಂದ ಸ್ವತಂತ್ರವಾಗಿರಲೂ ಬೇಕು ಮತ್ತು ತಾನೇ ಸ್ವಯಂ ಸಮರ್ಥವಾಗಿರಲೂ ಬೇಕು ಎನ್ನುವಲ್ಲಿ ಯಾವುದೇ ಭಿನ್ನಾಭಿಪ್ರಾಯ ಇರಲಾರದು’.

ಸದ್ಯದ ಕರಾಳ ದಿನಗಳಲ್ಲಿ, ಬಾಂಬೆ ಹೈಕೋರ್ಟ್‌ನ ಜಡ್ಜ್‌ಗಳು ಪ್ರದರ್ಶಿಸಿದ ವಿಪಥನದ ಸೂಚನೆಗಳನ್ನು ನಾವು ಕಾಣುತ್ತಿರುವುದು ಖೇದದ ಸಂಗತಿಯಾಗಿದೆ. ಬಾಂಬೆ ಹೈಕೋರ್ಟ್‌ನ ‘ಸ್ವಯಂ–ಸಾಮರ್ಥ್ಯ’ವು ಪ್ರಶ್ನೆಗೆ ಒಳಗಾಗಿದೆ, ಮಾತ್ರವಲ್ಲದೆ ಸರ್ವೋನ್ನತ ನ್ಯಾಯಾಲಯದ (ಸುಪ್ರೀಂ ಕೋರ್ಟ್) ಕೆಲವು ತೀರ್ಪುಗಳು ಕೂಡ ಪ್ರಶ್ನಾರ್ಹವಾಗಿವೆ. ಅಯೋಧ್ಯೆ ಪ್ರಶ್ನೆ ಕುರಿತ ತೀರ್ಪಾಗಲೀ ಜಮ್ಮು ಮತ್ತು ಕಾಶ್ಮೀರದ ಜನತೆಯ ರಾಜ್ಯತ್ವದ ಹಕ್ಕನ್ನು ಕಸಿಯುವ ವಿಚಾರದಲ್ಲೇ ಆಗಲಿ ಅಥವಾ ಪಿಎಂಎಲ್‌ಎ ತಿದ್ದುಪಡಿಯನ್ನು ಸಿಂಧುಗೊಳಿಸುವ ಮೂಲಕ ಅನುಷ್ಠಾನ ನಿರ್ದೇಶನಾಲಯವನ್ನು (ಇ.ಡಿ.) ಒಂದು ಆಯುಧವನ್ನಾಗಿಸಿದ ವಿಚಾರವೇ ಆಗಿರಲಿ –ಇವೆಲ್ಲವೂ ಅನಿಷ್ಟಕಾರಿ ಉದ್ವೇಗಗಳನ್ನು ಪ್ರತಿಬಿಂಬಿಸುತ್ತದೆ. ಕೆಳ ಕೋರ್ಟ್‌ಗಳಿಂದ ಹಿಡಿದು ಉನ್ನತ ಕೋರ್ಟ್‌ಗಳವರೆಗೆ ನ್ಯಾಯಾಂಗವು ಸ್ವತಃ ತಾನೇ ‘ಕಾರ್ಯಾಂಗ’ವಾಗುವ ಮತ್ತು ‘ಬದ್ಧತೆಯನ್ನೂ ಹೊಂದಿದ’ ಪರಿವರ್ತನೆಯತ್ತ ಸಾಗುವ ವಿದ್ಯಮಾನವನ್ನು ನಾವು ಎದುರಿಸುತ್ತಿದ್ದೇವೆ.

ಇತಿಹಾಸದ ಪಾಠಗಳನ್ನು ಮರೆಯಬಾರದು

ನಾವು ಇತಿಹಾಸದ →



ಕೆಲಸದ ಅವಧಿ ವಿಸ್ತರಿಸುವ ಪ್ರಸ್ತಾವನೆ ಹಿಂಪಡೆದ ರಾಜ್ಯ ಸರ್ಕಾರ:

ಐಟಿ ಉದ್ಯೋಗಿಗಳ ಹೋರಾಟಕ್ಕೆ ಜಯ

ದಕ್ಷಿಣ ರಾಜ್ಯದ ಐಟಿ ಉದ್ಯೋಗಿಗಳನ್ನು ಪ್ರತಿನಿಧಿಸುವ ಏಕೈಕ ನೋಂದಾಯಿತ ಒಕ್ಕೂಟವಾದ ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ (ಕೆಐಟಿಯು) ತಿಂಗಳುಗಳ ಕಾಲ ಪ್ರಚಾರ, ಪ್ರತಿಭಟನೆಗಳು ಮತ್ತು ಸಾರ್ವಜನಿಕ ಪ್ರತಿರೋಧದ ನಂತರ, ಕರ್ನಾಟಕ ರಾಜ್ಯ ಸರ್ಕಾರವು ಐಟಿ ಮತ್ತು ಐಟಿಇಎಸ್ ವಲಯದಲ್ಲಿ ಕೆಲಸದ ಸಮಯವನ್ನು ಹೆಚ್ಚಿಸುವ ತನ್ನ ಪ್ರಸ್ತಾಪವನ್ನು ಹಿಂತೆಗೆದುಕೊಂಡಿದೆ. ಈಗ ಹಿಂತೆಗೆದುಕೊಳ್ಳಲಾದ ಪ್ರಸ್ತಾವಿತ 'ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ 2025' ಭಾಗವಾಗಿತ್ತು. ಪ್ರಸ್ತಾವಿತ ತಿದ್ದುಪಡಿಯಲ್ಲಿ, 1961 ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಯನ್ನು ಪರಿಷ್ಕರಿಸಲು ಉದ್ದೇಶಿಸಲಾಗಿತ್ತು. ಇದು ಅನುಷ್ಠಾನಗೊಂಡಿದ್ದೇ ಆದಲ್ಲಿ, ದೈನಂದಿನ ಕೆಲಸದ ಸಮಯ ವಿಸ್ತರಣೆಯಾಗುತ್ತಿತ್ತು. ಆದರೆ ಪ್ರತಿಭಟನೆಗಳ ನಂತರ ಸರ್ಕಾರ ಅದನ್ನು ಹಿಂದಕ್ಕೆ ಪಡೆಯಬೇಕಾಯಿತು.

2025ರ ಜೂನ್ 18ರಂದು ಪಾಲುದಾರರ ಸಮಾಲೋಚನೆಯ ಸಮಯದಲ್ಲಿ ಪರಿಚಯಿಸಲಾದ ಈಗ ಸ್ಥಗಿತಗೊಳಿಸಲಾದ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ, 2025, ದೈನಂದಿನ ಕೆಲಸದ ಸಮಯವನ್ನು ಅಸ್ತಿತ್ವದಲ್ಲಿರುವ 9 ರಿಂದ 10 ಗಂಟೆಗಳಿಗೆ ವಿಸ್ತರಿಸಲು ಮತ್ತು ಹೆಚ್ಚುವರಿ ಎರಡು ಗಂಟೆಗಳ ಹೆಚ್ಚುವರಿ ಸಮಯವನ್ನು ಸೇರಿಸಲು ಪ್ರಸ್ತಾಪಿಸಿತು ಮತ್ತು ಹೆಚ್ಚುವರಿ ಸಮಯದ ತ್ರೈಮಾಸಿಕ ಮಿತಿಯನ್ನು 50 ರಿಂದ 144 ಗಂಟೆಗಳಿಗೆ ಹೆಚ್ಚಿಸಿತು. ಸಭೆಯಲ್ಲಿ ಭಾಗವಹಿಸಿದ್ದ ಕೆಐಟಿಯು ಪ್ರತಿನಿಧಿಗಳು ಈ ಪ್ರಸ್ತಾಪವನ್ನು ಸ್ಪಷ್ಟವಾಗಿ ತಿರಸ್ಕರಿಸಿದರು ಮತ್ತು "ಕೆಲಸದ ಹೊರಗೆ ವೈಯಕ್ತಿಕ ಮತ್ತು ಕುಟುಂಬ ಜೀವನವನ್ನು ಕಾಪಾಡಿಕೊಳ್ಳುವ ಕಾರ್ಮಿಕರ ಮೂಲಭೂತ ಹಕ್ಕಿನ ಮೇಲಿನ ನೇರ ದಾಳಿ" ಎಂದು ಕರೆದರು. ಮಸೂದೆಯನ್ನು ಮುಂದಕ್ಕೆ ತಳ್ಳಿದರೆ ತೀವ್ರ ಆಂದೋಲನ ಪ್ರಾರಂಭಿಸುವುದಾಗಿಯೂ ಒಕ್ಕೂಟ ಎಚ್ಚರಿಸಿತ್ತು.

ಸರಣಿ ಪ್ರತಿಭಟನೆಗಳು ಮತ್ತು ಜಾಗೃತಿ ಅಭಿಯಾನಗಳು

ನಂತರ ಆರು ವಾರಗಳ ಕಾಲ, ಕೆಐಟಿಯು ಬೆಂಗಳೂರಿನಾದ್ಯಂತ ಐಟಿ ಪಾರ್ಕ್‌ಗಳಲ್ಲಿ, ಕಾರ್ಪೊರೇಟ್ ಕಚೇರಿಗಳ ಹೊರಗೆ ಪ್ರದರ್ಶನಗಳನ್ನು ಒಳಗೊಂಡಂತೆ ಸರಣಿ ಪ್ರತಿಭಟನೆಗಳು ಮತ್ತು ಜಾಗೃತಿ ಅಭಿಯಾನಗಳನ್ನು ಆಯೋಜಿಸಿತ್ತು. ಬೀದಿ ಪ್ರತಿಭಟನೆಗಳಿಂದ ಹಿಡಿದು ಸಾಮಾಜಿಕ ಮಾಧ್ಯಮ ಅಭಿಯಾನಗಳವರೆಗೆ, ಉದ್ಯೋಗಿಗಳು ಕೆಐಟಿಯುನ ಬ್ಯಾನರ್ ಅಡಿಯಲ್ಲಿ ಒಟ್ಟುಗೂಡಿದರು. ದೀರ್ಘ ಕೆಲಸದ ಸಮಯವು ಈಗಾಗಲೇ ಬೇಡಿಕೆಯಿರುವ ವಲಯದಲ್ಲಿ ಬರ್ನ್‌ಔಟ್, ಮಾನಸಿಕ ಆರೋಗ್ಯ ಸಮಸ್ಯೆಗಳು ಮತ್ತು ಕೆಲಸದ–ಜೀವನದ ಅಸಮತೋಲನವನ್ನು ಇನ್ನಷ್ಟು ಹದಗೆಡಿಸುತ್ತದೆ ಎಂದು ಪ್ರತಿಪಾದಿಸಿದರು. ಈ ಆಂದೋಲನಕ್ಕೆ ಐಟಿ ವೃತ್ತಿಪರರಿಂದ ದೊಡ್ಡ ಬೆಂಬಲ ದೊರೆಯಿತು, ಅವರಲ್ಲಿ ಹಲವರು ನೇರವಾಗಿ ಒಕ್ಕೂಟದ ನೇತೃತ್ವದ ಕ್ರಮಗಳಲ್ಲಿ ಭಾಗವಹಿಸಿದ್ದರು.

ಈ ನಿರಂತರ ಹೋರಾಟದ ನಂತರ, ಸರ್ಕಾರವು ಈಗ ಪ್ರಸ್ತಾವಿತ ತಿದ್ದುಪಡಿಯನ್ನು ಔಪಚಾರಿಕವಾಗಿ ಹಿಂತೆಗೆದುಕೊಂಡಿದೆ. ಜುಲೈ ಕೊನೆಯ ವಾರದ ಆರಂಭದಲ್ಲಿ ಕೆಐಟಿಯು ಪದಾಧಿಕಾರಿಗಳೊಂದಿಗಿನ ಸಭೆಯಲ್ಲಿ ಹೆಚ್ಚುವರಿ ಕಾರ್ಮಿಕ ಆಯುಕ್ತರು ಈ ನಿರ್ಧಾರವನ್ನು ತಿಳಿಸಿದ್ದಾರೆ. ಇದು ಕರ್ನಾಟಕದ ಐಟಿ ಕಾರ್ಮಿಕರಿಗೆ ಒಂದು ದೊಡ್ಡ ಯಶಸ್ಸು ಎಂದು ಕೆಐಟಿಯು ಶ್ಲಾಘಿಸಿದೆ. ನೌಕರರು, ಕೇಂದ್ರ ಕಾರ್ಮಿಕ ಸಂಘಗಳು, ನಾಗರಿಕ ಸಮಾಜ ಗುಂಪುಗಳು ಮತ್ತು ಬೆಂಬಲ ನೀಡಿದ ವ್ಯಕ್ತಿಗಳಿಗೆ ಅದು ಧನ್ಯವಾದಗಳನ್ನು ಅರ್ಪಿಸಿದೆ. "ಈ ಗೆಲುವು ಕಷ್ಟಪಟ್ಟು ಗಳಿಸಿದ ತಮ್ಮ ಹಕ್ಕುಗಳು ಮತ್ತು ಕೆಲಸ–ಜೀವನ ಸಮತೋಲನವನ್ನು ರಕ್ಷಿಸಲು ಒಟ್ಟಾಗಿ ನಿಂತ ಪ್ರತಿಯೊಬ್ಬ ಐಟಿ ಮತ್ತು ಐಟಿಇಎಸ್ ಉದ್ಯೋಗಿಗೆ ಸೇರಿದೆ" ಎಂದು ಒಕ್ಕೂಟವು ಹೇಳಿಕೆಯಲ್ಲಿ ತಿಳಿಸಿದೆ.

"ಇದು ಕೇವಲ ನೀತಿ ಹಿಂತೆಗೆತವಲ್ಲ. ಇದು ಸಾಮೂಹಿಕ ಕ್ರಿಯೆಗೆ ದೊರಕಿದ ಗೆಲುವಾಗಿದೆ. ನಮ್ಮ ಸದಸ್ಯರು ಮತ್ತು ಮಿತ್ರರು ಒಗ್ಗಟ್ಟಿನಿಂದ ಏನನ್ನೂ ಸಾಧಿಸಬಹುದು ಎಂಬುದನ್ನು ತೋರಿಸಿದ್ದಾರೆ. ಈ ಮಸೂದೆಯನ್ನು ಯಾವುದೇ ಸಂದರ್ಭದಲ್ಲೂ ಅಂಗೀಕರಿಸಲು ಬಿಡುವುದಿಲ್ಲ ಎಂದು ನಾವು ಸ್ಪಷ್ಟಪಡಿಸಿದ್ದೇವೆ. ಎಂದು ಕೆಐಟಿಯು ಪ್ರಧಾನ ಕಾರ್ಯದರ್ಶಿ ಸುಭಾಸ್ ಅಡಿಗ ಹೇಳಿದರು.

"ಈ ಹೋರಾಟವು ಕೇವಲ ಮಸೂದೆಯನ್ನು ತಡೆಯುವ ಬಗ್ಗೆ ಮಾತ್ರವಲ್ಲ, ಐಟಿ ಕಾರ್ಮಿಕರು ಯಂತ್ರಗಳಲ್ಲ. ಘನತೆ, ವಿಶ್ರಾಂತಿ ಮತ್ತು ಕೆಲಸದ ಆಚೆಗಿನ ಜೀವನಕ್ಕೆ ನಾವು ಅರ್ಹರು ಎಂದು ಪ್ರತಿಪಾದಿಸುವ ಬಗ್ಗೆ" ಎಂದು ಕೆಐಟಿಯು ಕಾರ್ಯದರ್ಶಿಗಳಲ್ಲಿ ಒಬ್ಬರಾದ ಲೆನಿಲ್ ಬಾಬು ಹೇಳಿದರು.

ಈ ವಿವಾದವು ಇದ್ದಕ್ಕಿದ್ದಂತೆ ಹುಟ್ಟಿಕೊಂಡಿದ್ದಲ್ಲ

ಕೆಲಸದ ಸಮಯವನ್ನು ಹೆಚ್ಚಿಸುವ ವಿವಾದವು ಇದ್ದಕ್ಕಿದ್ದಂತೆ ಹುಟ್ಟಿಕೊಂಡಿದ್ದಲ್ಲ. ಇತ್ತೀಚೆಗೆ ಇನ್ಫೋಸಿಸ್ ಸಹ–ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು ಈ ವಿಷಯವಾಗಿ ವ್ಯಾಪಕವಾದ ಸಾರ್ವಜನಿಕ ಚರ್ಚೆಯನ್ನು ಮತ್ತೆ ಹುಟ್ಟುಹಾಕಿದರು, ಅವರು 2023ರ ಕೊನೆಯಲ್ಲಿ, ಭಾರತದ ಯುವಕರು ರಾಷ್ಟ್ರೀಯ ಉತ್ಪಾದಕತೆಯನ್ನು ಹೆಚ್ಚಿಸಲು ವಾರಕ್ಕೆ 70 ಗಂಟೆಗಳವರೆಗೆ ಕೆಲಸ ಮಾಡಬೇಕು ಎಂದು ಕರೆನೀಡಿದರು. ಅವರ ಹೇಳಿಕೆಗಳು ಬೆಂಬಲ ಮತ್ತು ಟೀಕೆ ಎರಡನ್ನೂ ಗಳಿಸಿದವು. ಇದು ಭಾರತದಲ್ಲಿ ಕೆಲಸದ ಸಂಸ್ಕೃತಿಯ ಭವಿಷ್ಯದ ಬಗ್ಗೆ ಆಳವಾದ ವಿಭಜನೆಗಳನ್ನು ಪ್ರತಿಬಿಂಬಿಸುತ್ತದೆ.

ಮೂರ್ತಿಯವರ ದೃಷ್ಟಿಕೋನವನ್ನು ಬೆಂಬಲಿಸುವವರು ಭಾರತವು ಜಾಗತಿಕ ತಂತ್ರಜ್ಞಾನ ಶಕ್ತಿಶಾಲಿಗಳೊಂದಿಗೆ ಸ್ಪರ್ಧಿಸಲು ಹೆಚ್ಚಿನ ಸಮಯ ಅಗತ್ಯವೆಂದು ವಾದಿಸಿದರು, ಅಂತಹ ನಿರೀಕ್ಷೆಗಳು ಶೋಷಣೆಯಾಗುತ್ತದೆ ಮಾತ್ರವಲ್ಲ, ಅದು ಮತ್ತು ಸಮರ್ಥನೀಯವವೂ ಅಲ್ಲ ಎಂದು ಕಾರ್ಮಿಕರು ಪ್ರತಿಪಾದಿಸಿದರು. ವಿಶೇಷವಾಗಿ ಉದ್ಯೋಗಿಗಳ ಯೋಗಕ್ಷೇಮ ಮತ್ತು ಕೆಲಸದ–ಜೀವನದ ಸಮತೋಲನವು ದೀರ್ಘಾವಧಿಯ ಉತ್ಪಾದಕತೆ ಮತ್ತು ನಾವೀನ್ಯತೆಗೆ ಅತ್ಯಗತ್ಯವೆಂದು ಹೆಚ್ಚು ಗುರುತಿಸಲ್ಪಟ್ಟಿದೆ.

KITU ಕೆಲಸದ ಅವಧಿ ಹೆಚ್ಚಳದ ಚಿಂತನೆಯ ಮಾರ್ಗವನ್ನು ದೃಢವಾಗಿ ತಿರಸ್ಕರಿಸಿತು, ಭಾರತದ ಐಟಿ ಕಾರ್ಮಿಕರು ಈಗಾಗಲೇ ವಿಸ್ತೃತ ಶಿಫ್ಟ್ ಗಳು, ತಡರಾತ್ರಿಯ ನಿಯೋಜನೆಗಳೊಂದಿಗೆ ಗಮನಾರ್ಹವಾಗಿ ಕೊಡುಗೆ ನೀಡುತ್ತಾರೆ ಮತ್ತು ಜಾಗತಿಕ ಸಮಯ ವಲಯ ವ್ಯತ್ಯಾಸಗಳಿಂದಾಗಿ 24/7 ಆನ್–ಕಾಲ್ ದುಡಿಯುತ್ತಿದ್ದಾರೆ. ಇದಕ್ಕೆ ಅನುಗುಣವಾದ ಪರಿಹಾರ, ವಿಶ್ರಾಂತಿ ಅಥವಾ ಮನ್ನಣೆ ಇಲ್ಲದೆ ಇನ್ನೂ ಹೆಚ್ಚಿನ ಕೆಲಸದ ವಾರಗಳಿಗೆ ಒತ್ತಾಯಿಸುವುದು ಕೆಲಸದ ಸ್ಥಳದಲ್ಲಿ ಅಸ್ತಿತ್ವದಲ್ಲಿರುವ ಒತ್ತಡ ಮತ್ತು ಅಸಮಾನತೆಯನ್ನು ಉಲ್ಬಣಗೊಳಿಸುತ್ತದೆ. ದೀರ್ಘಾವಧಿಯ ಸಮಯಗಳು ಉತ್ತಮ ಫಲಿತಾಂಶಗಳನ್ನು ಅರ್ಥೈಸುವುದಿಲ್ಲ ಎಂದು ಒಕ್ಕೂಟವು ಒತ್ತಿಹೇಳಿತು.

ದುಡಿಯುವ ವರ್ಗವು ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಾಧ್ಯ, ಅವರು ಶಕ್ತಿಶಾಲಿಗಳನ್ನು ಬಗ್ಗಿಸಬಹುದು ಎಂಬುದಕ್ಕೆ ಕರ್ನಾಟಕದ ಐಟಿ ವಲಯದ ಉದ್ಯೋಗಿಗಳ ಈ ಗೆಲವು ಮತ್ತೊಂದು ಉದಾಹರಣೆಯಾಗಿದೆ.

→ ಪಾಠಗಳನ್ನು ಮರೆಯಬಾರದು. ಯಾಕೆಂದರೆ ಹಾಗೆ ಮಾಡಿದರೆ ಅಪಾಯಗಳು ಪುನರಾವರ್ತನೆಯಾಗುತ್ತವೆ. ಈ ಹಿನ್ನೆಲೆಯಲ್ಲಿ ನ್ಯೂರೆಂಬರ್ಗ್ ಕಾನೂನುಗಳನ್ನು ಹೆಚ್ಚಾಗಿ ಗಮನಿಸಬೇಕಾಗುತ್ತದೆ. ನಾಜಿ ಜರ್ಮನಿಯಲ್ಲಿ 1935ರಲ್ಲಿ ರೂಪಿತವಾದ ಈ ಯೆಹೂದ್ಯ–ವಿರೋಧಿ ಕಾನೂನು, ಯೆಹೂದಿ ಪ್ರಜೆಗಳ ಹಕ್ಕುಗಳನ್ನು ನಿರಾಕರಿಸಿತು. ಅವರನ್ನು ನಾಗರಿಕ ಹಾಗೂ ಸಾರ್ವಜನಿಕ ಜೀವನದಿಂದ ಹೊರಗಿಟ್ಟಿತು. ಅವುಗಳು ನ್ಯಾಯಾಂಗದ ಡಿಕ್ರಿಗಳಲ್ಲವಾದರೂ ಅವುಗಳು ನ್ಯಾಯದ ಆಡಳಿತವನ್ನೇ ಆಮೂಲಾಗ್ರವಾಗಿ ಬದಲಾಯಿಸಿದವು.

ನಾಜಿ ಆಡಳಿತವು ಯೆಹೂದಿಗಳು ಮತ್ತು ಇತರ ಅಲ್ಪಸಂಖ್ಯಾತರನ್ನು ಶಿಕ್ಷಿಸಲು ಕಾನೂನು ವ್ಯವಸ್ಥೆಯನ್ನು ಕೋ–ಆಪ್ಟ್ ಮಾಡಿಕೊಂಡಿತು. ಕೆಲವು ದಿಟ್ಟ ದೃಷ್ಟಾಂತಗಳನ್ನು ಹೊರತುಪಡಿಸಿದರೆ, ಜರ್ಮನ್ ನ್ಯಾಯಾಂಗವು ಬಹುತೇಕವಾಗಿ ಅದನ್ನು ಶಿರಸಾ ಪಾಲಿಸಿತು. ಜಡ್ಜ್‌ಗಳು ಮತ್ತು ಪ್ರಾಸಿಕ್ಯೂಟರ್‌ಗಳು ತಾರತಮ್ಯದ ಈ ಕಾನೂನುಗಳನ್ನು ಜಾರಿ ಮಾಡಿದರು. ರಾಜಕೀಯ ಉದ್ದೇಶಗಳು ಹಾಗೂ ಪ್ರಭುತ್ವದ ಸಿದ್ಧಾಂತಕ್ಕೆ ಪರವಾಗಿ ನಿಂತು ಕಾನೂನಿನ ನಿಯಮಗಳನ್ನು ಗಾಳಿಗೆ ತೂರಿದರು.

ಇಂದು, ವಿಷಮಯ ಹಿಂದೂತ್ವ ಸಿದ್ಧಾಂತದ ಮುನ್ನಡೆಯಿಂದಾಗಿ ನಮ್ಮ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಗಣರಾಜ್ಯಕ್ಕೆ ಇದೇ ರೀತಿಯ ಅಪಾಯ ಎದುರಾಗಿದೆ. ಇಡೀ ಪ್ರಭುತ್ವವನ್ನು ಪರಿವರ್ತಿಸುವ ಉದ್ದೇಶದಿಂದ ಅದು ಬಹುಸಂಖ್ಯಾತವಾದ, ಫ್ಯಾಸಿಸ್ಟಿಕ್ ಆದೇಶಗಳನ್ನು ಹೇರುತ್ತಿದೆ. ಅದು ನ್ಯಾಯಾಂಗ ಸಹಿತ ಎಲ್ಲ ಸಂಸ್ಥೆಗಳಿಗೆ ಬೆದರಿಕೆ ಒಡ್ಡುತ್ತದೆ. ಆದ್ದರಿಂದ, ಇದನ್ನು ನಿರ್ಲಕ್ಷಿಸಿದರೆ ನಮ್ಮ ನಾಶವನ್ನು ನಾವೇ ತಂದುಕೊಂಡಂತೆ ಆಗುತ್ತದೆ.

'ಕೋರ್ಟ್‌ಗಳು ಹಿಂದೂತ್ವದ ತರ್ಕವನ್ನು ಬಳಸಲು ಆರಂಭಿಸಿದರೆ ನಿಜವಾಗಿಯೂ ಇದು ಚಿಂತೆಯ ಸಮಯವಾಗುತ್ತದೆ. ಈಗಾಗಲೇ ನೀರು ನಮ್ಮ ತಲೆ ಮೇಲಿಂದ ಹರಿದು ಹೋಗಿದೆಯೆನ್ನುವುದು ಇದರ ಅರ್ಥವಾಗಿದೆ' ಎಂದು ವೀಕ್ಷಕರೊಬ್ಬರು ಮಾಡಿರುವ ಟಿಪ್ಪಣಿಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ನಾವು ಈ ಅಪಾಯವನ್ನು ಎದುರಿಸದಿದ್ದರೆ ಮತ್ತು ಹಿಮ್ಮೆಟ್ಟಿಸದಿದ್ದರೆ ನಾವು ಉಸಿರುಗಟ್ಟಿಸಿಕೊಳ್ಳಬೇಕಾಗುತ್ತದೆ.

ಅನು: ವಿಶ್ವ

ಟ್ರಂಪ್‌ಗೆ ಬ್ರಿಕ್ಸ್ ಬಗ್ಗೆ ಭಯವೇಕೆ?

17ನೇ ಬ್ರಿಕ್ಸ್ ಶೃಂಗಸಭೆಯು 2025ರ ಜುಲೈನಲ್ಲಿ ಬ್ರೆಜಿಲ್‌ನ ರಿಯೊ ಡಿ ಜನ್ಯೆರೊದಲ್ಲಿ ನಡೆಯಿತು. ಬ್ರಿಕ್ಸ್ ದೇಶಗಳು ಡಾಲರ್ ಮತ್ತು ಕರೆನ್ಸಿ ವಿನಿಮಯ ವ್ಯವಸ್ಥೆಗಳ ಬದಲಿಗೆ, ತಮ್ಮದೇ ಆದ ಕರೆನ್ಸಿಗಳಲ್ಲಿ ವ್ಯಾಪಾರ ಮಾಡುವ ಬಗ್ಗೆ ಚರ್ಚಿಸಿವೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಗಡಿಯಾಚೆಗಿನ ಪಾವತಿಗಳನ್ನು ಸುಗಮಗೊಳಿಸಲು ಗುಂಪು ಯೋಜಿಸಿದೆ. ಇದರಿಂದ ಟ್ರಂಪ್ ಭಯಭೀತರಾಗಿದ್ದಾರೆ.

ಪ್ರಕಾಶ್ ಕಾರತ್



17ನೇ ಬ್ರಿಕ್ಸ್ ಶೃಂಗಸಭೆಯು 2025ರ ಜುಲೈ 6–7ರಂದು ಬ್ರೆಜಿಲ್‌ನ ರಿಯೊ ಡಿ ನಲ್ಲಿ ನಡೆಯಿತು. ಬ್ರಿಕ್ಸ್ ಹನ್ನೊಂದು ಹೊಸ ಸದಸ್ಯ ರಾಷ್ಟ್ರಗಳಿಗೆ ವಿಸ್ತರಿಸಿದ ನಂತರ ನಡೆದ ಮೊದಲ ಶೃಂಗಸಭೆ ಇದು. ಶೃಂಗಸಭೆಯ ನಂತರ, ಅಮೆರಿಕ ಅಧ್ಯಕ್ಷ ಟ್ರಂಪ್ ಬ್ರಿಕ್ಸ್‌ಗೆ ಸೇರುವ ದೇಶಗಳ ಮೇಲೆ ಶೇ. 10ರಷ್ಟು ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದರು. ಇದಕ್ಕೂ ಮೊದಲು, ಬ್ರಿಕ್ಸ್ ದೇಶಗಳ ಮೇಲೆ ಶೇ. 100ರಷ್ಟು ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದ್ದರು, ಬ್ರಿಕ್ಸ್ ದೇಶಗಳು ಯುಎಸ್ ಡಾಲರ್‌ನ ಪ್ರಾಬಲ್ಯವನ್ನು ನಾಶಮಾಡಲು ಮತ್ತು ಅಮೆರಿಕವನ್ನು ದುರ್ಬಲಗೊಳಿಸಲು ಬಯಸುತ್ತವೆ ಎಂದು ಹೇಳಿದ್ದರು. ಬ್ರಿಕ್ಸ್ ಬಗ್ಗೆ ಟ್ರಂಪ್ ಇಷ್ಟೊಂದು ಭಯಭೀತರಾಗಿದ್ದಾರೇಕೆ? ಕೋಪಗೊಂಡಿದ್ದಾರೇಕೆ?

2009ರಲ್ಲಿ ಬ್ರಿಕ್ಸ್ ಸ್ಥಾಪನೆ

ಬ್ರಿಕ್ಸ್ ಅನ್ನು ನಾಲ್ಕು ಸದಸ್ಯರೊಂದಿಗೆ 2009ರಲ್ಲಿ ಸ್ಥಾಪಿಸಲಾಯಿತು. ಒಂದು ವರ್ಷದ ನಂತರ, ದಕ್ಷಿಣ ಆಫ್ರಿಕಾ ಐದನೇ ಸದಸ್ಯ ರಾಷ್ಟ್ರವಾಗಿ ಸೇರಿಕೊಂಡಿತು. ಇದು ಮೂಲತಃ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾದ ಐದು ರಾಷ್ಟ್ರಗಳ ಗುಂಪಾಗಿತ್ತು. ಈ ಗುಂಪನ್ನು ಜಾಗತಿಕ ದಕ್ಷಿಣದ ಹಿತಾಸಕ್ತಿಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ವೇದಿಕೆಯನ್ನಾಗಿ ನೋಡಲಾಯಿತು. ಈ ಐದು ದೇಶಗಳು ವಿಶ್ವದ ಜನಸಂಖ್ಯೆಯ 40 ಪ್ರತಿಶತ ಮತ್ತು ವಿಶ್ವದ ಆರ್ಥಿಕತೆಯ ಕಾಲು ಭಾಗವನ್ನು ಹೊಂದಿವೆ. 2024ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ 16ನೇ ಬ್ರಿಕ್ಸ್ ಶೃಂಗಸಭೆಯಲ್ಲಿ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್ (UAE) ಮತ್ತು ಇಂಡೋನೇಷ್ಯಾ ಎಂಬ ಆರು ದೇಶಗಳನ್ನು ಗುಂಪಿನ ಸದಸ್ಯರನ್ನಾಗಿ ಸೇರಿಸಲು ನಿರ್ಧರಿಸಲಾಯಿತು. ಪ್ರಸ್ತುತ, ಹನ್ನೊಂದು ಬ್ರಿಕ್ಸ್ ದೇಶಗಳು ವಿಶ್ವದ ಜನಸಂಖ್ಯೆಯ 49.5 ಪ್ರತಿಶತ, ವಿಶ್ವದ GDPಯ 40 ಪ್ರತಿಶತ ಮತ್ತು ವಿಶ್ವ ವ್ಯಾಪಾರದ 26 ಪ್ರತಿಶತವನ್ನು ಹೊಂದಿವೆ.

ಬ್ರಿಕ್ಸ್‌ನ ಸ್ವರೂಪ ಮತ್ತು ಉದ್ದೇಶ

ಬ್ರಿಕ್ಸ್ ಒಂದು ಬಣ ಅಥವಾ ಮೈತ್ರಿಕೂಟವಲ್ಲ. ಇದು ದಕ್ಷಿಣ ದೇಶಗಳ (ರಷ್ಯಾವನ್ನು ಹೊರತುಪಡಿಸಿ) ಗುಂಪಾಗಿದ್ದು ಬಹುಪಕ್ಷೀಯ ಸಂಸ್ಥೆಗಳು, ವ್ಯಾಪಾರ, ಆರ್ಥಿಕ ಸಹಕಾರ, ಹವಾಮಾನ ಬದಲಾವಣೆ ಮತ್ತು ತಂತ್ರಜ್ಞಾನದ ಕುರಿತು ಸಾಮಾನ್ಯ ಸ್ಥಾನಗಳನ್ನು ತಲುಪಲು ಪ್ರಯತ್ನಿಸುತ್ತದೆ. ಅದೇ ಸಮಯದಲ್ಲಿ, ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಮತ್ತು ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳ ಮೇಲೆ ಹಾಗೂ ವ್ಯಾಪಾರ ಮತ್ತು ಹಣಕಾಸು ಕಾರ್ಯವಿಧಾನಗಳ ಮೇಲೆ, ಜಿ–7 ಮತ್ತು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳ ಪ್ರಾಬಲ್ಯವನ್ನು ಪ್ರಶ್ನಿಸುವ ಸಾಮರ್ಥ್ಯವನ್ನು ಈ ಗುಂಪು ಹೊಂದಿದೆ. 2008ರಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ ಬ್ರಿಕ್ಸ್ ರಚನೆಯಾಯಿತು. ಅದೇ ರೀತಿ, ಜಿ–7 (ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಯುನೈಟೆಡ್ ಕಿಂಗ್‌ಡಮ್ ಮತ್ತು ಯುನೈಟೆಡ್ ಸ್ಟೇಟ್ಸ್) ನೆರಳಿನಿಂದ ಜಿ–20 ಹೊರಬರಲು ವಿಫಲವಾಯಿತು. ಇದು ಬ್ರಿಕ್ಸ್ ನ ಪ್ರಾಮುಖ್ಯತೆಯನ್ನು ಮತ್ತಷ್ಟು ಹೆಚ್ಚಿಸಿತು.

ಬ್ರಿಕ್ಸ್ ನ ಪ್ರಸ್ತುತ ಬ್ರೆಜಿಲ್ ಶೃಂಗಸಭೆಯ ಘೋಷಣೆಯು, ಇರಾನ್ ಮತ್ತು ಗಾಜಾದಲ್ಲಿನ ಆಕ್ರಮಣ ಕ್ರಮಗಳ ಕುರಿತು ದಕ್ಷಿಣದ ದೇಶಗಳ ನಿಲುವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಇರಾನಿನ ಸಾರ್ವಭೌಮತ್ವ ಮತ್ತು ಪರಮಾಣು ತಾಣಗಳ ಮೇಲಿನ ದಾಳಿಗಳು, ಹಾಗೆಯೇ ಗಾಜಾ ಮೇಲಿನ ಇಸ್ರೇಲ್ ದಾಳಿಗಳು ಮತ್ತು ಆಹಾರ ಮತ್ತು ಮಾನವೀಯ ನೆರವಿನ ಮೇಲಿನ ನಿರ್ಬಂಧವನ್ನು ಸಮ್ಮೇಳನವು ಬಲವಾಗಿ ಖಂಡಿಸಿತು. ಏಕಪಕ್ಷೀಯ ಅಮೆರಿಕದ ಸುಂಕಗಳು ಮತ್ತು ಸುಂಕರಹಿತ ಕ್ರಮಗಳ ಹೆಚ್ಚಳದ ಬಗ್ಗೆ ಘೋಷಣೆಯು ಗಂಭೀರ ಕಳವಳವನ್ನು ವ್ಯಕ್ತಪಡಿಸಿತು, ಯುನೈಟೆಡ್ ಸ್ಟೇಟ್ಸ್ ಅನ್ನು ಹೆಸರಿಸಿ ಹೇಳಲಿಲ್ಲ. ಅದೇ ರೀತಿ, ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕಿನಲ್ಲಿ ದಕ್ಷಿಣದ ಪ್ರಮುಖ ದೇಶಗಳಿಗೆ ಹೆಚ್ಚಿನ ಮತದಾನದ ಅಧಿಕಾರ ಮತ್ತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಬ್ರೆಜಿಲ್ ಮತ್ತು ಭಾರತಕ್ಕೆ ಪ್ರಾತಿನಿಧ್ಯಕ್ಕಾಗಿ ದೀರ್ಘಕಾಲದ ಬೇಡಿಕೆಯನ್ನು ಅದು ಪುನರುಚ್ಚರಿಸಿತು.

ಡಾಲರ್ ಪ್ರಾಬಲ್ಯದ ವಿರುದ್ಧ ಕ್ರಮಗಳು

ಅಂತರರಾಷ್ಟ್ರೀಯ ವ್ಯಾಪಾರಕ್ಕಾಗಿ ಡಾಲರ್ ಮೇಲಿನ ಅವಲಂಬನೆಯನ್ನು ಕಡಿಮೆಮಾಡಲು ಮತ್ತು ಬಹುಪಕ್ಷೀಯ ಹಣಕಾಸು ಸಂಸ್ಥೆಗಳ ಮೇಲೆ ಅಮೆರಿಕ ಮತ್ತು G–7 ಪ್ರಾಬಲ್ಯವನ್ನು ದುರ್ಬಲಗೊಳಿಸಲು ಬ್ರಿಕ್ಸ್ ದೇಶಗಳು ಕೈಗೊಂಡಿರುವ ಕ್ರಮಗಳಿಂದ ಟ್ರಂಪ್ ಕೋಪಗೊಂಡಿದ್ದಾರೆ. ಕೆಲವು ದೇಶಗಳ ವಿರುದ್ಧ ಅಮೆರಿಕ ಆರ್ಥಿಕ ನಿರ್ಬಂಧಗಳನ್ನು ಹೆಚ್ಚಿಸಿ, ಅಂತರರಾಷ್ಟ್ರೀಯ ಹಣಕಾಸು ಮತ್ತು ಬ್ಯಾಂಕಿಂಗ್ ಸಂಸ್ಥೆಗಳಿಂದ ಅವುಗಳನ್ನು ಹೊರಹಾಕಿರುವುದರಿಂದ, ಹೆಚ್ಚಿನ ದೇಶಗಳು ಪರ್ಯಾಯ ಕ್ರಮಗಳ ಮೂಲಕ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿವೆ. ಬ್ರಿಕ್ಸ್ ದೇಶಗಳು ಡಾಲರ್ ಮತ್ತು ಕರೆನ್ಸಿ ವಿನಿಮಯ ವ್ಯವಸ್ಥೆಗಳ ಬದಲಿಗೆ, ತಮ್ಮದೇ ಆದ ಕರೆನ್ಸಿಗಳಲ್ಲಿ ವ್ಯಾಪಾರ ಮಾಡುವ ಬಗ್ಗೆ ಚರ್ಚಿಸಿವೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಗಡಿಯಾಚೆಗಿನ ಪಾವತಿಗಳನ್ನು ಸುಗಮಗೊಳಿಸಲು ಗುಂಪು ಯೋಜಿಸಿದೆ. ಬ್ರೆಜಿಲ್ ಶೃಂಗಸಭೆಯ ಘೋಷಣೆಯು ತಮ್ಮ ದೇಶಗಳ ಹಣಕಾಸು ಮಂತ್ರಿಗಳು ಮತ್ತು ಕೇಂದ್ರ ಬ್ಯಾಂಕ್ ಗವರ್ನರ್‌ಗಳನ್ನು "ಗಡಿಯಾಚೆಗಿನ ಪಾವತಿಗಳ ಕುರಿತು ಬ್ರಿಕ್ಸ್ ಉಪಕ್ರಮವನ್ನು ಚರ್ಚಿಸುವುದನ್ನು ಮುಂದುವರಿಸಲು ಮತ್ತು ಬ್ರಿಕ್ಸ್ ಪಾವತಿ ವ್ಯವಸ್ಥೆಗಳ ನಡುವೆ ಹೆಚ್ಚಿನ ಪರಸ್ಪರ ಕಾರ್ಯಸಾಧ್ಯತೆಯ ಸಾಧ್ಯತೆಗಳ ಕುರಿತು ಚರ್ಚೆಗಳನ್ನು ಬೆಂಬಲಿಸಲು ಸಂಭಾವ್ಯ ಮಾರ್ಗಗಳನ್ನು ಗುರುತಿಸುವಲ್ಲಿ ಬ್ರಿಕ್ಸ್ ಪಾವತಿ ಕಾರ್ಯಪಡೆ (ಬಿಪಿಟಿಎಫ್) ಮಾಡಿದ ಪ್ರಗತಿಯನ್ನು ಒಪ್ಪಿಕೊಳ್ಳಲು" ಕರೆ ನೀಡಿತು. ಡಾಲರ್ ಅನ್ನು ಬದಲಿಸಲು ಹೊಸ ಕರೆನ್ಸಿಯನ್ನು ರಚಿಸುವ ಯಾವುದೇ ಘೋಷಿತ ಗುರಿ ಇಲ್ಲದಿದ್ದರೂ, ಟ್ರಂಪ್ ಆಡಳಿತವು ಡಾಲರ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸೀಮಿತ ಕ್ರಮಗಳ ಬಗ್ಗೆ ಎಚ್ಚರಿಕೆ ನೀಡುತ್ತಿದೆ.

ಸಾಮ್ರಾಜ್ಯಶಾಹಿ ಪ್ರಾಬಲ್ಯ ಹೊಂದಿರುವ ಸಂಸ್ಥೆಗಳನ್ನು ಬದಲಾಯಿಸಲು ಬ್ರಿಕ್ಸ್ ಕೆಲವು ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಕ್ರಮೇಣ ಪ್ರಗತಿ ಸಾಧಿಸುತ್ತಿದೆ. ಇದು ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್ (ಎನ್‌ಡಿಬಿ) ಪ್ರಕರಣದಲ್ಲಿ ಸ್ಪಷ್ಟವಾಗಿದೆ. ಈ ಬ್ಯಾಂಕ್ ಅನ್ನು 2015ರಲ್ಲಿ 100 ಬಿಲಿಯನ್ ಡಾಲರ್ ಬಂಡವಾಳದೊಂದಿಗೆ ಸ್ಥಾಪಿಸಲಾಯಿತು ಮತ್ತು ಚೀನಾದ ಶಾಂಘೈನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ. ಸಾಲ ಮರುಪಾವತಿಸಲು ಸಾಲಗಳನ್ನು ಒದಗಿಸುವ ಬದಲು, ಮೂಲಸೌಕರ್ಯ ಯೋಜನೆಗಳಿಗೆ ಸಾಲಗಳನ್ನು ಒದಗಿಸಲು ಬ್ಯಾಂಕ್ ಪ್ರಯತ್ನಿಸುತ್ತದೆ. ಇದು ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಮತ್ತು ಜಾಗತಿಕ ದಕ್ಷಿಣದ ದೇಶಗಳಲ್ಲಿ 98 ಮೂಲಸೌಕರ್ಯ ಯೋಜನೆಗಳಿಗೆ ಸುಮಾರು 36 ಬಿಲಿಯನ್ ಡಾಲರ್ ಒದಗಿಸಿದೆ. ಈ ಬ್ಯಾಂಕ್‌ನ ನೇತೃತ್ವವನ್ನು ಪ್ರಸ್ತುತ ಮಾಜಿ ಬ್ರೆಜಿಲ್ ಅಧ್ಯಕ್ಷೆ ದಿಲ್ಮಾ ರೂಸೆಫ್ ವಹಿಸಿದ್ದಾರೆ. ಈ ಬ್ಯಾಂಕಿನ ಜೊತೆಗೆ, ಬ್ರಿಕ್ಸ್ ದೇಶಗಳ ಕೇಂದ್ರ ಬ್ಯಾಂಕುಗಳ ನಡುವಿನ ಸಾಮಾನ್ಯ ನಿಧಿಯಾದ ಕಾಂಟಿಜೆಂಟ್ ರಿಸರ್ವ್ ಅರೇಂಜ್‌ಮೆಂಟ್ (ಸಿಆರ್‌ಎ) ಸಹ ಇದೆ. ಇದು ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಸದಸ್ಯ ರಾಷ್ಟ್ರಗಳಿಗೆ ಬೆಂಬಲವನ್ನು ನೀಡುತ್ತದೆ.

ಬ್ರಿಕ್ಸ್ ಅನ್ನು ಅಪ್ರಸ್ತುತ ಎಂದು ಕೆಲವು ಎಡಪಂಥೀಯ ವಿಮರ್ಶಕರು ತಳ್ಳಿಹಾಕುತ್ತಾರೆ, ಏಕೆಂದರೆ ಅದು ಸ್ಥಿರವಾದ ಸಾಮ್ರಾಜ್ಯಶಾಹಿ ವಿರೋಧಿ ಕಾರ್ಯಸೂಚಿಯನ್ನು ಹೊಂದಿಲ್ಲ. ಈ ಟೀಕೆ ತಪ್ಪು. ಬ್ರಿಕ್ಸ್ ಸಾಮ್ರಾಜ್ಯಶಾಹಿ ವಿರೋಧಿ ವೇದಿಕೆಯಲ್ಲ. ದಕ್ಷಿಣದ ದೇಶಗಳ ನಿಲುವನ್ನು ಸಂಸ್ಥೆ ಸ್ಪಷ್ಟವಾಗಿ ವ್ಯಕ್ತಪಡಿಸುವ ಮಟ್ಟಿಗೆ ಮತ್ತು ಅವರ ಅಭಿವೃದ್ಧಿ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಪೂರೈಸುವ ಸಾಮಾನ್ಯ ಪ್ರಯತ್ನಗಳನ್ನು ಅನುಸರಿಸುವ ಮಟ್ಟಿಗೆ, ಅದು ಬಹು–ಧ್ರುವೀಯತೆಯನ್ನು ಬಲಪಡಿಸುವ ಉದ್ದೇಶವನ್ನು ಪೂರೈಸುತ್ತದೆ. ಬ್ರಿಕ್ಸ್ ತನ್ನ ಉದ್ದೇಶ ಮತ್ತು ಏಕತೆ ಎರಡರಲ್ಲೂ ಬೆಳೆದಂತೆ, ಅದು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ಪ್ರಾಬಲ್ಯ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ವಿರೋಧಾಭಾಸದ ಅಭಿವ್ಯಕ್ತಿಯಾಗಿರುತ್ತದೆ. ಭಾರತ ಸೇರಿದಂತೆ ಅನೇಕ ಬ್ರಿಕ್ಸ್ ಸದಸ್ಯರು ಅಮೆರಿಕದೊಂದಿಗೆ ಆಯಕಟ್ಟಿನ ಮತ್ತು ಆರ್ಥಿಕ ಸಂಬಂಧಗಳನ್ನು ಹೊಂದಿದ್ದಾರೆ. ಅದೇ ಸಮಯದಲ್ಲಿ, ದಕ್ಷಿಣದ ಈ ದೇಶಗಳು ಬಹುಧ್ರುವೀಯ ಜಗತ್ತಿನಲ್ಲಿ ವಸ್ತುನಿಷ್ಠ ಪಾತ್ರವನ್ನು ವಹಿಸುತ್ತವೆ. ಇದು ಅವರ ಸ್ವಂತ ರಾಷ್ಟ್ರೀಯ ಹಿತಾಸಕ್ತಿಗಳನ್ನು ಚೆನ್ನಾಗಿ ಪೂರೈಸುತ್ತದೆ. ಅಂತಹ ದೇಶಗಳು ಯುಎಸ್ ಸಾಮ್ರಾಜ್ಯಶಾಹಿಯೊಂದಿಗೆ ಹೊಂದಿಕೊಂಡಿದ್ದರೂ, ಬ್ರಿಕ್ಸ್ ಗುಂಪಿನಲ್ಲಿ ಸದಸ್ಯತ್ವವು ಅವರಿಗೆ ನಿರ್ದಿಷ್ಟ ಮಟ್ಟದ ಕಾರ್ಯತಂತ್ರದ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಲು ಹೆಚ್ಚಿನ ಅವಕಾಶಗಳನ್ನು ನೀಡುತ್ತದೆ.

ಟ್ರಂಪ್ ನೇತೃತ್ವದ ಆಡಳಿತವು ವ್ಯಾಪಾರ ಸೇರಿದಂತೆ ಎಲ್ಲಾ ವಲಯಗಳಲ್ಲಿ ಅನಿಯಂತ್ರಿತ ಮತ್ತು ಆಕ್ರಮಣಕಾರಿ ಕ್ರಮಗಳನ್ನು ಅನುಸರಿಸುತ್ತಿದೆ. ಇದು ಜಾಗತಿಕ ದಕ್ಷಿಣದ ದೇಶಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಅಮೆರಿಕದ ವ್ಯಾಪಾರ ಯುದ್ಧವು ಕೆನಡಾ, ಯುರೋಪಿಯನ್ ಒಕ್ಕೂಟ, ಜಪಾನ್ ಮತ್ತು ದಕ್ಷಿಣ ಕೊರಿಯಾದಂತಹ ಅದರ ಆಪ್ತ ಮಿತ್ರರಾಷ್ಟ್ರಗಳನ್ನೂ ಬಿಟ್ಟಿಲ್ಲ. ಇದು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ಮೈತ್ರಿಕೂಟವನ್ನು ದುರ್ಬಲಗೊಳಿಸುತ್ತಿದ್ದರೆ, ಮತ್ತೊಂದೆಡೆ, ಜಾಗತಿಕ ದಕ್ಷಿಣದ ದೇಶಗಳಿಗೆ ನಿಜವಾದ ವೇದಿಕೆಯಾಗಿ ಬ್ರಿಕ್ಸ್ ನ ಆಕರ್ಷಣೆ ಹೆಚ್ಚುತ್ತಿದೆ. ಈಗ ಹೆಚ್ಚು ಹೆಚ್ಚು ದೇಶಗಳು ಬ್ರಿಕ್ಸ್ ಗೆ ಸೇರಲು ಆಸಕ್ತಿ ಹೊಂದಿವೆ. ಪ್ರಸ್ತುತ ಬ್ರೆಜಿಲ್ ಶೃಂಗಸಭೆಯು 'ಪಾಲುದಾರ ರಾಷ್ಟ್ರಗಳು' ಎಂಬ ಹೊಸ ವಿಭಾಗವನ್ನು ಪರಿಚಯಿಸಿದೆ. ಈ ಶೃಂಗಸಭೆಯಲ್ಲಿ, ಬೆಲಾರುಸ್, ಬೊಲಿವಿಯಾ, ಕ್ಯೂಬಾ, ಕಝಾಕಿಸ್ತಾನ್, ಮಲೇಷ್ಯಾ, ಥೈಲ್ಯಾಂಡ್, ಉಗಾಂಡಾ ಮತ್ತು ಉಜ್ಬೇಕಿಸ್ತಾನ್ ಈ ಎಂಟು ದೇಶಗಳಿಗೆ ಈ ಪಾಲುದಾರ ಸ್ಥಾನಮಾನವನ್ನು ನೀಡಲಾಗಿದೆ. ಈ ನಾವೀನ್ಯತೆಯಿಂದ, ಜಾಗತಿಕ ದಕ್ಷಿಣದ ಅನೇಕ ದೇಶಗಳು ಬ್ರಿಕ್ಸ್ ಗೆ ಸೇರಿಕೊಂಡಿವೆ.

ಬ್ರೆಜಿಲ್ ನೇತೃತ್ವದ ಹೊಸ ಉಪಕ್ರಮಗಳು

ಬ್ರಿಕ್ಸ್ ಅಧ್ಯಕ್ಷತೆಯು ಒಂದು ವರ್ಷದ ಅವಧಿಗೆ ಇರುತ್ತದೆ. ಈ ವರ್ಷ ಬ್ರೆಜಿಲ್ ಅಧ್ಯಕ್ಷತೆ ವಹಿಸಿತ್ತು. ಅಧ್ಯಕ್ಷ ಲೂಲಾ ಅವರ ನೇತೃತ್ವದಲ್ಲಿ ಕೆಲವು ಗಮನಾರ್ಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮುಂಬರುವ UN ಹವಾಮಾನ ಬದಲಾವಣೆ ಸಮ್ಮೇಳನದಲ್ಲಿ (COP30) ಬ್ರಿಕ್ಸ್ ದೇಶಗಳು ಜಂಟಿ ಕ್ರಮಕ್ಕಾಗಿ ಹೊಸ ಚೌಕಟ್ಟನ್ನು ಪರಿಚಯಿಸಿವೆ. ಇದು ಬ್ರಿಕ್ಸ್ ಗುಂಪಿನ ಏಕತೆಯನ್ನು ಬಿಂಬಿಸುತ್ತದೆ. ತಂತ್ರಜ್ಞಾನದ ವಿಷಯದಲ್ಲಿ, ಘೋಷಣೆಯು ಕೃತಕ ಬುದ್ಧಿಮತ್ತೆಯ (AI) ಆಡಳಿತದ ಕುರಿತು ಹೆಚ್ಚು ಸಮಗ್ರ ಜಾಗತಿಕ ಚರ್ಚೆಯನ್ನು ಬೆಂಬಲಿಸಿತು. ಈ ಚರ್ಚೆಗಳು ದಕ್ಷಿಣದ ಕಡಿಮೆ ಪ್ರಾತಿನಿಧ್ಯ ಹೊಂದಿರುವ ದೇಶಗಳ ಕಳವಳಗಳನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತವೆ. ಇನ್ನೊಂದು, ಬಹುಪಕ್ಷೀಯ ಖಾತರಿಗಳ ಉಪಕ್ರಮದ ಪ್ರಸ್ತಾಪ. ಇದು ಹೂಡಿಕೆ ಖಾತರಿಗಳನ್ನು ಒದಗಿಸುವ ಮೂಲಕ ಮತ್ತು ಅಪಾಯವನ್ನು ಕಡಿಮೆ ಮಾಡುವ ಮೂಲಕ, ದಕ್ಷಿಣದಲ್ಲಿ ಮೂಲಸೌಕರ್ಯ ಮತ್ತು ಅಭಿವೃದ್ಧಿಯಲ್ಲಿ ಹೂಡಿಕೆಯನ್ನು ಸುಗಮಗೊಳಿಸುತ್ತದೆ.

2026ರ ಅಧ್ಯಕ್ಷತೆ ಭಾರತದ್ದಾಗಿದೆ. ಮೋದಿ ಅವರು ಶೃಂಗಸಭೆಯ ಥೀಮ್ ಅನ್ನು "ಸುಸ್ಥಿರತೆಗಾಗಿ ಸಹಯೋಗ, ಸ್ಥಿತಿಸ್ಥಾಪಕತ್ವ ➚

ಭೌತಿಕವಾದ ಎಂದರೇನು?

ನಿಮ್ಮ ಸುತ್ತಮುತ್ತಲಿನ ಜಗತ್ತನ್ನು ಒಮ್ಮೆ ಗಮನಿಸಿ. ನೀವು ಗಿಡಮರಗಳೂ ಜೊಲಾಡುವುದನ್ನು ನೋಡುತ್ತೀರಿ. ಗಾಳಿಯನ್ನು ಸೇವಿಸುತ್ತೀರಿ ಮತ್ತು ಹಕ್ಕಿಗಳ ಕಲರವವನ್ನು ಕೇಳುವಿರಿ.

ಈಗ ಎರಡು ಪ್ರಶ್ನೆಗಳನ್ನು ನಿಮ್ಮಲ್ಲಿ ಯೋಚಿಸಿ. ನೀವು ಕೇಳುವ, ನೋಡುವ, ಸ್ಪರ್ಶಿಸುವ ಮತ್ತು ಅನುಭವಿಸುವ ಪ್ರಜ್ಞೆ ಇರುವ ಕಾರಣ ಜಗತ್ತು ಅಸ್ತಿತ್ವದಲ್ಲಿದೆಯೇ? ಅಥವಾ ನಮ್ಮ ಪ್ರಜ್ಞೆಯ ಹೊರತಾಗಿ ಜಗತ್ತು ಅಸ್ತಿತ್ವದಲ್ಲಿದೆಯೇ?

ಈ ಪ್ರಶ್ನೆಗಳು ತತ್ವಮೀಮಾಂಸೆಯ (**Ontology**) ಮೂಲ ಪ್ರಶ್ನೆಗಳು, ತತ್ವಮೀಮಾಂಸೆಯ ಶಾಖೆಗಳು ಇದಕ್ಕೆ ಈ ರೀತಿ ಉತ್ತರಗಳನ್ನು ನೀಡುತ್ತಾರೆ.

ಆದರ್ಶವಾದದ (Idealism) ಪ್ರಕಾರ ನೀವು ಕೇಳುವ, ನೋಡುವ, ಅನುಭವಿಸುವ ಪ್ರಜ್ಞೆ ಇರುವ ಕಾರಣ ಜಗತ್ತು ಅಸ್ತಿತ್ವದಲ್ಲಿದೆ. ಅಂದರೆ ಈ ಜಗತ್ತು ನಿಮ್ಮ ಪ್ರಜ್ಞೆಯ ಪ್ರತಿರೂಪ, ನಿಮ್ಮ ಪ್ರಜ್ಞೆಯು ಊಹಿಸಲ್ಪಟ್ಟಂತೆ ಈ ಜಗತ್ತು ಸೃಷ್ಟಿಸಲ್ಪಟ್ಟಿದೆ. ನಿಮ್ಮ ಪ್ರಜ್ಞೆಯು ಈ ಸಂಪೂರ್ಣ ವಿಶ್ವವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ನಿಮ್ಮ ಪ್ರಜ್ಞೆಗೆ ಪರಿಮಿತಿಯಿದೆ.

ಇದಕ್ಕೆ ವೈರುದ್ಯವಾಗಿ ಭೌತಿಕವಾದ (matrialism) ಉತ್ತರಿಸುತ್ತದೆ. ನಮ್ಮ ಆಲೋಚನೆಗಳು ಮತ್ತು ಪ್ರಜ್ಞೆಯ ಹೊರತಾಗಿ ಜಗತ್ತು ಅಸ್ತಿತ್ವದಲ್ಲಿದೆ ಮತ್ತು ಅದು ತನ್ನದೆ ನಿಯಮಗಳನ್ನು ಹೊಂದಿದೆ.

ಉದಾಹರಣೆಗೆ ಚಿಟ್ಟೆಯೊಂದು ಹಾರುತ್ತಿದೆ. ನೀವು ಊಹಿಸಿದ್ದರಿಂದ ಚಿಟ್ಟೆ ಹಾರುತ್ತಿಲ್ಲ. ಜಗತ್ತಿನಲ್ಲಿ ಇರುವ ವಿಜ್ಞಾನದ ನಿಯಮಗಳಿಗೆ ಅನುಗುಣವಾಗಿ ಚಿಟ್ಟೆ ಹಾರುತ್ತಿದೆ. ಈ ಕಾರಣ ಭೌತಿಕವಾದದ ಪ್ರಕಾರ ಜಗತ್ತು ಭೌತಿಕ ನಿಯಮಗಳ ಮೂಲಕ ಮತ್ತು ವೈಜ್ಞಾನಿಕ ಕಾರಣಗಳಿಂದ ಸೃಷ್ಟಿಸಲ್ಪಟ್ಟಿದೆ.

ಇಡಿ ವಿಶ್ವ ಅಥವಾ ಬ್ರಹ್ಮಾಂಡಕ್ಕೆ ಅದರದೆ ಭೌತಶಾಸ್ತ್ರದ ನಿಯಮಗಳಿವೆ. ಅವುಗಳಲ್ಲಿನ ಚಲನೆ ಅಥವಾ ಬದಲಾವಣೆ ನಿಯಮಗಳು ಮನುಷ್ಯನ ಪ್ರಜ್ಞೆಯಿಂದ ರೂಪಗೊಂಡಿಲ್ಲ ಎಂದು ಭೌತಿಕವಾದ ವಿವರಿಸುತ್ತದೆ.

ಈಗ ನೀವು, ನಿಮ್ಮ ಪ್ರಜ್ಞೆಯಾಚೆಗೆ ಕೂಡ ಜಗತ್ತು ತನ್ನದೆ ಆದ ಭೌತಿಕ ನಿಯಮಗಳ ಪ್ರಕಾರ ಅಸ್ತಿತ್ವದಲ್ಲಿದೆ ಎಂದು ನೀವೀಗ ಒಪ್ಪುವುದಾದರೆ. ಹಾಗಾದರೆ ಆ ಜಗತ್ತನ್ನು ವ್ಯವಸ್ಥಿತವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವೆ? ನೀವು ಈ ಜಗತ್ತನ್ನು ಪರಿಣಾಮಕಾರಿಯಾಗಿ ಗ್ರಹಿಸಲು ಸಾಧ್ಯವೆ? ಎಂದು ನಿಮ್ಮಲ್ಲಿ ಪ್ರಶ್ನೆಗಳು ಮೂಡಬಹುದು. ಇವುಗಳು ಮುಂದುವರೆದ ಜ್ಞಾನ ಶಾಸ್ತ ಅಥವಾ ಜ್ಞಾನ ಮೀಮಾಂಸೆಯ (Epistemology) ಪ್ರಮುಖ ಪ್ರಶ್ನೆಗಳು ಕೂಡ ಹೌದು.

ಜ್ಞಾನ ಮೀಮಾಂಸೆಯು (Epistemology) ಜ್ಞಾನದ ಗ್ರಹಿಕೆ ಮತ್ತು ಸುತ್ತಮುತ್ತಲಿನ ಜಗತ್ತನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆ. ಈ ಜ್ಞಾನ ಮೀಮಾಂಸೆಯು ಎರಡು ರೀತಿಯಲ್ಲಿ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಮೊದಲನೆಯದು ಜ್ಞಾನ ಮೀಮಾಂಸೆಯ ಆದರ್ಶವಾದ (Epistemological Idealism), ಇದರ ಪ್ರಕಾರ ಜಗತ್ತಿನ ನಿಮ್ಮ ಇಂದ್ರಿಯಗಳಿಗೆ ಗೋಚರವಾಗಿದ್ದು ಮತ್ತು ಇಂದ್ರಿಯಗಳ ಮೂಲಕ ಗ್ರಹಿಸಿದ್ದನ್ನು ಮಾತ್ರ ಜಗತ್ತು ಅಥವಾ ವಸ್ತು ಎಂದು ಕರೆಯಲು ಸಾಧ್ಯ. ಇಂದ್ರಿಯಗಳನ್ನು ಮೀರಿ ಜಗತ್ತನ್ನು ಅರಿಯಲು ಮನುಷ್ಯನ ಪ್ರಜ್ಞೆಗೆ ಸಾಧ್ಯವಿಲ್ಲ. ಉದಾಹರಣೆಗೆ ನಾವು ಒಂದು ಮರವನ್ನು ನೋಡಬಹುದು. ಅದು ಬೀಸುವ ಗಾಳಿಯನ್ನು ಆನಂದಿಸಬಹುದು ಮತ್ತು ಅದರ ಎಲೆಗಳು ಮಾಡುವ ಶಬ್ದವನ್ನು ಕೇಳಬಹುದು. ಈ ರೀತಿ ಇಂದ್ರಿಯಗಳಿಗೆ ಗೋಚರವಾಗಿದ್ದರ ಮೂಲಕ ಮಾತ್ರ ಮರದ ಕಲ್ಪನೆಯನ್ನು ಮಾಡಬಹುದು ಮತ್ತು ಮರದ ಬಗೆಗಿನ ಜ್ಞಾನವನ್ನು ಪಡೆಯಬಹುದು. ಆದರೆ ಅದರಾಚೆಗೆ ಆ ಮರದ ಸಂಪೂರ್ಣ ಜ್ಞಾನವನ್ನು ಪಡೆಯಲು ಮನುಷ್ಯನ ಪ್ರಜ್ಞೆಗೆ ಸಾಧ್ಯವಿಲ್ಲ. ಅಂದರೆ ಮನುಷ್ಯನ ಇಂದ್ರಿಯ ಪ್ರಜ್ಞೆಗೆ ಅನುಗುಣವಾಗಿ ಮಾತ್ರ ವಸ್ತು ಅಥವಾ ಪ್ರಕೃತಿಯ ಜ್ಞಾನವನ್ನು ಗ್ರಹಿಸಲು ಮನುಷ್ಯನಿಗೆ ಸಾಧ್ಯ.

ಆದರೆ ಜ್ಞಾನ ಮೀಮಾಂಸೆಯ ಭೌತಿಕವಾದ (Epistemological Materialism) ಮನುಷ್ಯ ಇಂದ್ರಿಯ ಪ್ರಜ್ಞೆಯನ್ನು ಮೀರಿ ವಿಶ್ವದ ಸಂಪೂರ್ಣ ಜ್ಞಾನವನ್ನು ತಿಳಿಯಲು ಸಾಧ್ಯ ಎಂದು ಹೇಳುತ್ತದೆ. ಇದರ ಪ್ರಕಾರ ಇಂದ್ರಿಯ ಗ್ರಹಿಕೆ ಜೊತೆಗೆ ಜಗತ್ತನ್ನು ಪರಿಣಾಮಕಾರಿಯಾಗಿ ಗ್ರಹಿಸಲು ಮನುಷ್ಯನ ಪ್ರಜ್ಞೆಗೆ ಸಾಧ್ಯವಿದೆ ಮತ್ತು ಜಗತ್ತಿನ ಮೂಲ ಭೌತಿಕ ನಿಯಮಗಳನ್ನು ಕೂಡ ಮನುಷ್ಯನ ಪ್ರಜ್ಞೆ ಅರ್ಥಮಾಡಿಕೊಂಡಿದೆ, ಅಲ್ಲದೆ ವಿಶ್ವದಲ್ಲಿನ ಆಗುಹೋಗುಗಳ ಮುನ್ಸೂಚನೆಯನ್ನು ಕೂಡ ಗ್ರಹಿಸಲು ಸಾಧ್ಯವಾಗಿದೆ ಎಂದು ಶಾಖೆ ಪ್ರತಿಪಾದಿಸುತ್ತದೆ.

ಹಾಗಾದರೆ ಮನುಷ್ಯನ ಜ್ಞಾನ ಗ್ರಹಿಕೆಯ ಮಟ್ಟಗಳು ಯಾವುವು? ಅದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು?

ಮೊದಲನೆಯದಾಗಿ, ಅನುಭವವಾದ (Empiricism): ಮನುಷ್ಯನ ಇಂದ್ರಿಯಗಳಿಂದ ಆದ ಅನುಭವ ಅಥವಾ ಗ್ರಹಿಕೆಯೇ ಜ್ಞಾನದ ಮೂಲ. ಜೊತೆಗೆ ಇಂದ್ರಿಯ ದೃಷ್ಟಿಯನ್ನು ವಿಸ್ತರಿಸಿ ಗೋಚರಿಸುವ ಎಲ್ಲ ವಿದ್ಯಮಾನಗಳನ್ನು ಸಮರ್ಪಕವಾಗಿ ಮಾಪನ ಮಾಡಬಹುದಾದ ಸಾಧನಗಳಿಂದ ಜ್ಞಾನ ಗ್ರಹಿಕೆ ಸಾಧ್ಯ. ಜೊತೆಗೆ ಇಲ್ಲಿ ಪ್ರಯೋಗ ಮತ್ತು ಪರೀಕ್ಷೆಗಳು ಕೂಡ ಜ್ಞಾನ ಗ್ರಹಿಕೆಯ ಮಾನದಂಡವಾಗುತ್ತವೆ.

ಅದರ ಮೂಲ ತತ್ವಗಳು ಹೀಗಿವೆ,

1. **ಅನುಭವ ಮತ್ತು ಗೋಚರಣೆಯೇ ಮುಖ್ಯ:** ಎಲ್ಲಾ ಜ್ಞಾನವು ಇಂದ್ರಿಯ ಅನುಭವದಿಂದ ಹುಟ್ಟುತ್ತದೆ ಮತ್ತು ಅದರ ಮೂಲಕವೇ ಪ್ರಯೋಗಗಳನ್ನು ಮತ್ತು ಪರಿಕ್ಷೆಗಳನ್ನು ಮಾಡಬೇಕು. ನೀವು ಅದನ್ನು ನೋಡಲು, ಕೇಳಲು, ಸ್ಪರ್ಶಿಸಲು, ವಾಸನೆ ನೋಡಲು ಅಥವಾ ರುಚಿ ನೋಡಲು ಸಾಧ್ಯವಾಗದಿದ್ದರೆ ಅಥವಾ ವೈಜ್ಞಾನಿಕ ಸಾಧನಗಳಿಂದ ಇಂದ್ರಿಯ ಅನುಭವಕ್ಕೆ ಪರಿವರ್ತಿಸಿ ಅಳೆಯಲು ಸಾಧ್ಯವಾಗದಿದ್ದರೆ, ಆ ವಿಷಯ ವಿವರಣೆ ಮಾಡಲು ಅಸಾಧ್ಯ.
2. **ಹೇಗೆ ಎಂಬುದು ಮುಖ್ಯ, ಏಕೆ ಎಂಬುದು ಮುಖ್ಯ ವಿಷಯವಲ್ಲ:** ಉದಾಹರಣೆಗೆ, ನೀವು ನೀರಿಗೆ ಶಾಖವನ್ನು ನೀಡಿದಾಗ ಅದು ಕುದಿಯುತ್ತದೆ ಎಂದು ವಿವರಿಸಬಹುದು. ಅದು ಯಾವ ತಾಪಮಾನದಲ್ಲಿ ಕುದಿಯುತ್ತಿದೆ ಎಂದು ಥರ್ಮಾಮೀಟರ್ ಮೂಲಕ ಗಮನಿಸಬಹುದು, ಶಾಖ ಹೆಚ್ಚಾದಂತೆಲ್ಲ ನೀರುಗುಳ್ಳೆಗಳು ಏಳುವುದನ್ನು ನೋಡಬಹುದು, ಶಾಖದ ಪರಿಣಾಮ ನೀರಿನ ದ್ರವ ಕಡಿಮೆಯಾಗುತ್ತಾ, ಅನಿಲಕ್ಕೆ ತಿರುಗಿ ಆವಿಯಾಗುತ್ತಿರುವುದನ್ನು ಕೂಡ ನೀವು ಗಮನಿಸಬಹುದು. ಆ ಅವೀಕರಣದ ಪ್ರಮಾಣವನ್ನು ನಿಖರವಾಗಿ ಅತ್ಯಾಧುನಿಕ ಸಾಧನಗಳಿಂದ ಅಳೆದು ಗ್ರಹಿಸಬಹುದು. ಈ ಪರಿಣಾಮ ನೀವು ಈ ಘಟನೆಯ ಪ್ರಕ್ರಿಯೆ ಮತ್ತು ಮುನ್ಸೂಚನೆಯನ್ನು ನಿಖರವಾಗಿ ತಿಳಿಯಬಹುದು.

ಆದರೆ, ಶಾಖ ಹೆಚ್ಚಾದಂತೆಲ್ಲ ಅಣುಗಳ (Molecules) ವೇಗ ಹೆಚ್ಚಾಗುವುದು. ವೇಗ ಹೆಚ್ಚಾದಂತೆಲ್ಲ ಅಣುಗಳ ನಡುವೆ ಉಂಟಾಗುವ ಘರ್ಷಣೆ ಅಥವಾ ಅದರ ಪರಿಣಾಮ ನೀರನ್ನು ಆವಿಯಾಗಿಸುವ ಪ್ರಕ್ರಿಯೆ ಹಿಂದಿನ ಚಲನಶಕ್ತಿ ನಮ್ಮ ಅನುಭವಕ್ಕೆ ಬರುವುದಿಲ್ಲ ಅಥವಾ ಅದನ್ನು ವೀಕ್ಷಿಸಲು ಸಾಧ್ಯವಿಲ್ಲ. ಹಾಗಾದರೆ, ಅನುಭವಕ್ಕೆ ಬರದ ಈ ನಿಯಮಗಳು ಅಥವಾ ಪ್ರಕ್ರಿಯೆಗಳು ಅಸ್ತಿತ್ವದಲ್ಲಿ ಇಲ್ಲವೆಂದು ಅರ್ಥವೇನು? ಇದಕ್ಕೆ ಇನ್ನೊಂದು ಸ್ಪಷ್ಟ ಉದಾಹರಣೆ ನೀಡುವುದಾದರೆ, ಸೂರ್ಯ ಪೂರ್ವದಲ್ಲಿ ಬೆಳಿಗ್ಗೆ ಉದಯಿಸಿ ಪಶ್ಚಿಮದಲ್ಲಿ ಮುಳುಗುವುದನ್ನು ನಾವು ಪ್ರತಿದಿನ ನೋಡುವೆವು, ಈ ವಿದ್ಯಮಾನ ಯಾಕೆ ಸಂಭವಿಸುತ್ತದೆ ಎಂದು ಕೇವಲ ಈ ಅನುಭವ ಮತ್ತು ವೀಕ್ಷಣೆಯಿಂದ ಹೇಳಲು ಸಾಧ್ಯವಿಲ್ಲ. ವಾಸ್ತವವಾಗಿ ಬ್ರಹ್ಮಾಂಡ/ವಿಶ್ವದಲ್ಲಿನ ಗುರುತ್ವಾಕರ್ಷಣ ಬಲದಿಂದಾಗಿ ಭೂಮಿ ಸೂರ್ಯನ ಸುತ್ತ ಸುತ್ತುತ್ತಿದೆ ಇದರ ಭಾಗವಾಗಿ ಈ ವಿದ್ಯಮಾನ ಸಂಭವಿಸಿದೆ. ಹಾಗಾದರೆ ಅನುಭವಕ್ಕೆ ಬರದ ನಿಯಮಗಳು ಮತ್ತು ವಿದ್ಯಮಾನಗಳನ್ನು ಗ್ರಹಿಸದೆ ಈ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಈ ಕಾರಣ ಅನುಭವವಾದಕ್ಕೆ (Empiricism) ಮಿತಿಗಳಿವೆ.

ಎರಡನೆಯದಾಗಿ, ವೈಜ್ಞಾನಿಕ ವಾಸ್ತವವಾದ (Scientific Realism), ಪ್ರಕಾರ ಜ್ಞಾನದ ಗ್ರಹಿಕೆ, ಅನುಭವ ಮತ್ತು ಗೋಚರಿಸುವ ವಿಶ್ವದ ಜೊತೆ ಅಗೋಚರ ಮತ್ತು ಅನುಭವಕ್ಕೆ ಬರದ ಅಥವಾ ಅಗೋಚರವಾಗಿರುವ ವಿಶ್ವವನ್ನು ವಿಜ್ಞಾನದ ನಿಯಮಗಳಿಂದ ಗ್ರಹಿಸಲು ಸಾಧ್ಯವಿದೆ. ವೈಜ್ಞಾನಿಕ ವಾಸ್ತವವಾದದ (Scientific Realism) ಮೂಲ ತತ್ವಗಳು ಹೀಗಿವೆ.

1. **ಸ್ವತಂತ್ರ ವಿಶ್ವ ಅಸ್ತಿತ್ವದಲ್ಲಿದೆ:** ವೈಜ್ಞಾನಿಕ ವಾಸ್ತವವಾದವು (Scientific Realism) ಯಾವಾಗಲೂ ತತ್ವಮೀಮಾಂಸೆಯ ಭೌತಿಕವಾದವೇ (Ontological Materialism) ಆಗಿರುತ್ತದೆ. ಅಂದರೆ ನಮ್ಮ ಪ್ರಜ್ಞೆ ಮತ್ತು ಅನುಭವದ ಆಚೆ ಕೂಡ ವಿಶ್ವವು ಸ್ವತಂತ್ರವಾಗಿ ಅಸ್ತಿತ್ವದಲ್ಲಿದೆ ಎಂದು ಇದು ಪ್ರತಿಪಾದಿಸುತ್ತದೆ.
2. **ಅಗೋಚರ ವಿಶ್ವವೆಂದರೆ ಮಾಯಾ ವಿಶ್ವವಲ್ಲ:** ಅಗೋಚರ ಮತ್ತು ಅನುಭವಕ್ಕೆ ಬರದ ವಿಶ್ವ ಅಸ್ತಿತ್ವದಲ್ಲಿದೆ. ಆದರೆ ಯಾವುದೇ ಚಮತ್ಕಾರ ಅಥವಾ ದೈವಶಕ್ತಿಯಿಂದ ಅದು ಅಸ್ತಿತ್ವದಲ್ಲಿಲ್ಲ ಮತ್ತು ಅದರ ವಿದ್ಯಮಾನಗಳು ಯಾವುದೇ ಚಮತ್ಕಾರಿಕ ಘಟನೆಗಳಿಂದ ಸಂಭವಿಸುವುದಿಲ್ಲ. ಬದಲಾಗಿ ಗೋಚರ ಮತ್ತು ಅಗೋಚರ ವಿಶ್ವದ ವಿದ್ಯಮಾನಗಳು ಭೌತಶಾಸ್ತ್ರದ ವೈಜ್ಞಾನಿಕ ನಿಯಮಗಳಿಗೆ ಅನುಸಾರವಾಗಿಯೇ ಸಂಭವಿಸುತ್ತದೆ. ಉದಾಹರಣೆಗೆ, ನೀವು ಒಂದು ಚೆಂಡನ್ನು ಮೇಲೆ ಎಸೆದಾಗ ಏನಾಗುತ್ತದೆ? ಅದು ಯಾವಾಗಲೂ ಕೆಳಗೆ ಬೀಳುತ್ತದೆ, ಅಲ್ಲವೇ? ಚೆಂಡು ಯಾವುದೆ ಮಾಂತ್ರಿಕ ಶಕ್ತಿಯಿಂದ ಕೆಳಗೆ ಬೀಳುವುದಿಲ್ಲ. ಚೆಂಡು ಕೆಳಗೆ ಬೀಳುವುದು ಭೌತಶಾಸ್ತ್ರದ ಮೂಲಭೂತ ನಿಯಮವಾದ ಗುರುತ್ವಾಕರ್ಷಣೆಯ ನಿಯಮದಿಂದ. ಈ ನಿಯಮದ ಪ್ರಕಾರ ವಿಶ್ವ / ಬ್ರಹ್ಮಾಂಡದಲ್ಲಿರುವ ಪ್ರತಿಯೊಂದು ವಸ್ತುವೂ ಇನ್ನೊಂದು ವಸ್ತುವನ್ನು ಆಕರ್ಷಿಸುತ್ತದೆ, ಇದು ಅವುಗಳ ತೂಕ/ದ್ರವ್ಯರಾಶಿ (mass) ಮತ್ತು ಅವುಗಳ ನಡುವಿನ ಅಂತರದ ಆಧಾರದ ಮೇಲೆ ನಿರ್ಧರಿಸಲ್ಪಡುತ್ತದೆ. ಹೆಚ್ಚು ತೂಕವಿರುವ ವಸ್ತುಗಳು ಹೆಚ್ಚು ಆಕರ್ಷಿಸುತ್ತವೆ ಮತ್ತು ಹತ್ತಿರವಿರುವ ವಸ್ತುಗಳು ಹೆಚ್ಚು ಬಲವಾಗಿ ಆಕರ್ಷಿಸುತ್ತವೆ. ಭೂಮಿಯ ದ್ರವ್ಯರಾಶಿಯ ಮುಂದೆ ಚೆಂಡಿನ ದ್ರವ್ಯರಾಶಿ ನಗಣ್ಯ. ಹಾಗಾಗಿ ಭೂಮಿ ಸುಲಭವಾಗಿ ಚೆಂಡನ್ನು ಆಕರ್ಷಿಸುತ್ತದೆ. ಜಗತ್ತಿನ ಎಲ್ಲ ವಸ್ತುಗಳು ಭೂಮಿಯ ಮೇಲೆ ಗುರುತ್ವಾಕರ್ಷಣ ಬಲದಿಂದಲೇ ಬಂಧಿಸಲ್ಪಟ್ಟಿವೆ. ನಾವು ಜಿಗಿದಾಗ ಈ ಗುರುತ್ವಾಕರ್ಷಣ ಬಲದಿಂದಲೇ ನಾವು ಕೆಳಗಿಳಿಯುತ್ತೇವೆ. ಅದೇ ರೀತಿ ಭೂಮಿ ದ್ರವ್ಯರಾಶಿ (mass) ಕೂಡ ಸೂರ್ಯನ ದ್ರವ್ಯರಾಶಿ (mass) ಮುಂದೆ ಅತಿಚಿಕ್ಕದ್ದು. ಈ ಕಾರಣ ಭೂಮಿ ಸೂರ್ಯನ ಆಕರ್ಷಣೆಗೆ ಒಳಪಟ್ಟು ಅದರ ಸುತ್ತ ಸುತ್ತುತ್ತಿದೆ. ಆದರೆ ಈ ಗುರುತ್ವಾಕರ್ಷಣ ನಿಯಮ ನಮ್ಮ ಅನುಭವಕ್ಕೆ ಬರುವುದಿಲ್ಲ ಅಥವಾ ಗೋಚರವಾಗುವುದಿಲ್ಲ, ಆದರೆ ಈ ಅಗೋಚರ ನಿಯಮ ಅಸ್ತಿತ್ವದಲ್ಲಿದೆ.
3. **ವಿಜ್ಞಾನ:** ವಿಜ್ಞಾನವು ವಿಶ್ವದ ನಿಜಸ್ವರೂಪ ಮತ್ತು ನಿಖರ ಸತ್ಯವನ್ನು ತಿಳಿಯಬಯಸುತ್ತದೆ. ಈ ಮೇಲಿನ ಉದಾಹರಣೆಯಂತೆ ಭೌತಶಾಸ್ತ್ರದ ಗುರುತ್ವಾಕರ್ಷಣ ನಿಯಮದಂತೆ, ಅನುಭವದಾಚೆ ಇರುವ ವಿಶ್ವದ ಸ್ವರೂಪ, ವೈಜ್ಞಾನಿಕ ಕಾರಣ ಮತ್ತು ನಿಯಮಗಳ ವಿವರಣೆಯನ್ನು ನೀಡಲು ವಿಜ್ಞಾನಕ್ಕೆ ಸಾಧ್ಯವಿದೆ. ಮತ್ತು ಅನುಭವಕ್ಕೆ ಬರುವ ಅಥವಾ ಗೋಚರಿಸುವ ಪ್ರತಿಯೊಂದು ವಿದ್ಯಮಾನ ಮತ್ತು ಅಸ್ತಿತ್ವಕ್ಕೆ ಅನುಭವದ ಆಚೆಯಿರುವ ಅಸ್ತಿತ್ವದ ನಿಯಮಗಳು ಕೂಡ ಕಾರಣವಾಗಿರುತ್ತವೆ. ಅಂದರೆ ಗುರುತ್ವಾಕರ್ಷಣ ನಿಯಮದ ಉದಾಹರಣೆಯಂತೆ, ಕಾಣಿಸದ ಅಸ್ತಿತ್ವಗಳು ಅಥವಾ ನಿಯಮಗಳು ವೀಕ್ಷಿಸಿದ ಅಥವಾ ಅನುಭವಕ್ಕೆ ಬಂದ ವಿದ್ಯಮಾನಗಳನ್ನು ವಿವರಿಸಲು ಅನಿವಾರ್ಯವಾಗಿರುತ್ತವೆ.

ಸುಲಭದಲ್ಲಿ ಹೇಳುವುದಾದರೆ, ವೈಜ್ಞಾನಿಕ ವಾಸ್ತವವಾದ ಹೇಳುವಂತೆ ಜ್ಞಾನದ ಗ್ರಹಿಕೆ ಕೇವಲ ಅನುಭವವಾದಕ್ಕೆ ಸೀಮಿತವಾಗಿಲ್ಲ. ಇಂದ್ರಿಯ ಪ್ರಜ್ಞೆಯಾಚೆಯ ಅಸ್ತಿತ್ವವನ್ನು ಗ್ರಹಿಸಲು ವೈಜ್ಞಾನಿಕ ಕಾರಣ ಮತ್ತು ವಿಜ್ಞಾನದ ಸಿದ್ಧಾಂತಗಳಿಂದ ಸಾಧ್ಯವಿದೆ ಎಂದು ಪ್ರತಿಪಾದಿಸುತ್ತದೆ.

ಹೀಗೆ ಮಾರ್ಕ್ಸವಾದಿ ಭೌತಿಕವಾದವು ತತ್ವಮೀಮಾಂಸೆಯ ಭೌತಿಕವಾದ (Ontological Materialism), ಜ್ಞಾನ ಮೀಮಾಂಸೆಯ ಭೌತಿಕವಾದ (Epistemological Materialism) ಮತ್ತು ವೈಜ್ಞಾನಿಕ ವಾಸ್ತವವಾದದ (Scientific Realism) ಸಮ್ಮಿಶ್ರಣವಾಗಿದೆ.

–ವಸಂತ್ ಕಲಾಲ್
ಸಂಶೋಧನಾ ವಿದ್ಯಾರ್ಥಿ, ಜೆ.ಎನ್.ಯು

ಮತ್ತು ನಾವೀನ್ಯತೆ" ಎಂದು ಘೋಷಿಸಿದ್ದಾರೆ. ಜಾಗತಿಕ ದಕ್ಷಿಣದ ಧ್ವನಿಯಾಗಿ ತನ್ನನ್ನು ತಾನು ಬಿಂಬಿಸಿಕೊಳ್ಳುತ್ತಿದ್ದರೂ, ಮೋದಿ ಸರ್ಕಾರದ ವಿದೇಶಾಂಗ ಮತ್ತು ಕಾರ್ಯತಂತ್ರದ ನೀತಿಗಳು ಅಮೆರಿಕ ಮತ್ತು ಇಸ್ರೇಲ್ ಪರವಾಗಿವೆ. ಎಲ್ಲಾ ಬಹುಪಕ್ಷೀಯ ಸಂಸ್ಥೆಗಳಲ್ಲಿ ಭಯೋತ್ಪಾದನೆಯನ್ನು ಪ್ರಾಥಮಿಕ ಚರ್ಚಾ ಕೇಂದ್ರವನ್ನಾಗಿ ಮಾಡುವುದು ಇದರ ಪ್ರಸ್ತುತ ಗಮನವಾಗಿದೆ. ಈ ಪಾಕಿಸ್ತಾನ ಕೇಂದ್ರಿತ ವಿಧಾನದ ಆಧಾರವು ಇಡೀ ಜಾಗತಿಕ ದಕ್ಷಿಣದ ಕಳವಳಗಳಿಗೆ ಹೊಂದಿಕೆಯಾಗುವುದಿಲ್ಲ. ಅಮೆರಿಕ ನೇತೃತ್ವದ ಕ್ವಾಡ್ ಸಂಘಟನೆಯಲ್ಲಿ ತನ್ನ ಪಾತ್ರವನ್ನು ಬಲಪಡಿಸಲು ಮೋದಿ ಸರ್ಕಾರ ಉತ್ಸುಕವಾಗಿದೆ. ಇದರ ಹೊರತಾಗಿಯೂ, ಟ್ರಂಪ್ ಅವರ ಕ್ರಮಗಳಿಂದ ಭಾರತವೂ ಪ್ರಭಾವಿತವಾಗಿದೆ. ಟ್ರಂಪ್ ಅವರ ಆಕ್ರಮಣಕಾರಿ ಬೇಡಿಕೆಗಳೊಂದಿಗೆ ರಾಜಿ ಮಾಡಿಕೊಳ್ಳಲು ಅದು ಎಷ್ಟೇ ಪ್ರಯತ್ನಿಸಿದರೂ, ಮೋದಿ ಸರ್ಕಾರವು ಟ್ರಂಪ್ ಅವರ ದಾಳಿಗೆ ಒಳಗಾಗುತ್ತದೆ.

ಬಹುಪಕ್ಷೀಯತೆಯನ್ನು ಉತ್ತೇಜಿಸುವುದು ಭಾರತ ಸರ್ಕಾರದ ಅಧಿಕೃತ ನಿಲುವು. ಇತ್ತೀಚಿನ ದಿನಗಳಲ್ಲಿ, ಭಾರತ ಮತ್ತು ಚೀನಾ ಗಡಿ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಮತ್ತು ಆರ್ಥಿಕ ಮತ್ತು ಪ್ರಯಾಣ ಸಂಬಂಧಗಳನ್ನು ಪುನಃಸ್ಥಾಪಿಸುವ ಪ್ರಕ್ರಿಯೆಯನ್ನು ಪುನರಾರಂಭಿಸಲು ಜಂಟಿ ಕ್ರಮಗಳನ್ನು ತೆಗೆದುಕೊಂಡಿವೆ. ಇದು ಬ್ರಿಕ್ಸ್ ನೊಳಗೆ ಸಹಕಾರವನ್ನು ಸುಗಮಗೊಳಿಸಲು ಇರುವ ಅಡೆತಡೆಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ದಕ್ಷಿಣದ ಸಾಮೂಹಿಕ ಹಿತಾಸಕ್ತಿಗಳನ್ನು ಉತ್ತೇಜಿಸುವ ಕಾರ್ಯಕ್ರಮವನ್ನು ಅನುಸರಿಸಲು ಮತ್ತು ಬ್ರಿಕ್ಸ್ ಪ್ರಾರಂಭಿಸಿದ ಪರ್ಯಾಯ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ದುರ್ಬಲಗೊಳಿಸುವ ಎಲ್ಲಾ ಪ್ರಯತ್ನಗಳನ್ನು ತಡೆಯಲು ಮೋದಿ ಸರ್ಕಾರವು ಬ್ರಿಕ್ಸ್ ಅಧ್ಯಕ್ಷತೆಯನ್ನು ಬಳಸಿಕೊಳ್ಳುತ್ತದೆ ಎಂದು ಆಶಿಸಲಾಗಿದೆ.

ಕನ್ನಡಕ್ಕೆ:ಸಿಜಿ

ಶೇ. 25ರಷ್ಟು ಸುಂಕದ ಬೆದರಿಕೆ: ಅಮೆರಿಕದ ಒತ್ತಡವನ್ನು ಪ್ರತಿರೋಧಿಸಿ

ಭಾರತೀಯ ಸರಕುಗಳ ಮೇಲೆ ಶೇ. 25ರಷ್ಟು ಸುಂಕ ವಿಧಿಸುವುದಾಗಿ ಬೆದರಿಕೆ ಹಾಕುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಭಾರತವು ರಷ್ಯಾದೊಂದಿಗಿನ ತನ್ನ ಸಂಬಂಧವನ್ನು ಕೆಳಮಟ್ಟಕ್ಕಿಳಿಸಿ ಅದರಿಂದ ತೈಲ ಖರೀದಿಸುವುದನ್ನು ನಿಲ್ಲಿಸಬೇಕೆಂದು ಕೂಡ ಅವರು ಬಯಸುತ್ತಾರೆ. ಭಾರತ ಸರ್ಕಾರವು ಅಂತಹ ಕ್ರಮಗಳ ವಿರುದ್ಧ ದೃಢವಾಗಿ ನಿಲ್ಲಬೇಕು ಮತ್ತು ಭಾರತೀಯ ಜನರ ಹಿತಾಸಕ್ತಿಗಳನ್ನು ಕಾಪಾಡಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಭಾರತವು ತನ್ನ ಕೃಷಿ, ಹೈನು, ಔಷಧೀಯ ಮತ್ತು ಇತರ ಕ್ಷೇತ್ರಗಳನ್ನು ಅಮೆರಿಕದ ಕಾರ್ಪೊರೇಟ್‌ಗಳ ಶೋಷಣೆಗೆ ಮುಕ್ತಗೊಳಿಸದಿದ್ದರೆ ಸುಂಕ ಹೇರುವುದಾಗಿ ಅಮೆರಿಕದ ಅಧ್ಯಕ್ಷರು ಪದೇ ಪದೇ ಬೆದರಿಕೆ ಹಾಕಿದ್ದಾರೆ. ಅಮೆರಿಕ ಸರ್ಕಾರವನ್ನು ತುಷ್ಟೀಕರಿಸುವ ಸಲುವಾಗಿ, ಭಾರತ ಸರ್ಕಾರವು ಈಗಾಗಲೇ ಅಮೆರಿಕದೊಂದಿಗೆ ರಕ್ಷಣಾ ಮತ್ತು ತೈಲ ಒಪ್ಪಂದಗಳನ್ನು ಮಾಡಿಕೊಂಡಿದೆ, ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮತ್ತು ತೈಲವನ್ನು ಖರೀದಿಸಲು ಒಪ್ಪಿಕೊಂಡಿದೆ. ಈಗ, ಅಮೆರಿಕ ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ಆಗ್ರಹಿಸುತ್ತಿದೆ.

ಭಾರತ ಸರ್ಕಾರ ಅಮೆರಿಕದ ಒತ್ತಡಕ್ಕೆ ಮಣಿಯಬಾರದು ಅಥವಾ ಭಾರತದ ಅರ್ಥವ್ಯವಸ್ಥೆ ಮತ್ತು ಮಾರುಕಟ್ಟೆಗಳನ್ನು ಅಮೆರಿಕದ ಶೋಷಣೆಗೆ ಮುಕ್ತಗೊಳಿಸಲು ಅವಕಾಶ ನೀಡಬಾರದು ಎಂದು ಸಿಪಿಐ(ಎಂ) ಒತ್ತಾಯಿಸಿದೆ; ಇದು ಭಾರತೀಯ ಕೈಗಾರಿಕೆ ಮತ್ತು ಕೃಷಿಗೆ ಹಾನಿಕಾರಕವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಬಿಜೆಪಿ ನೇತೃತ್ವದ ಸರ್ಕಾರವು ತನ್ನ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುತ್ತದೆ ಮತ್ತು ಅಮೆರಿಕದ ಬೆದರಿಸುವ ತಂತ್ರಗಳ ವಿರುದ್ಧ ದೃಢವಾಗಿ ನಿಲ್ಲುತ್ತದೆ ಎಂದು ಭಾರತದ ಜನತೆ ನಿರೀಕ್ಷಿಸುತ್ತಾರೆ ಎಂದಿದೆ.

ಮಾಲೆಗಾಂವ್ ಸ್ಫೋಟದ ಆರೋಪಿಗಳ ಖುಲಾಸೆ ನ್ಯಾಯದ ಅಣಕ

ಮಾಲೆಗಾಂವ್ ಸ್ಫೋಟ ಪ್ರಕರಣದ ತೀರ್ಪಿನ ಬಗ್ಗೆ ಸಿಪಿಐ(ಎಂ) ಗಾಬರಿ ಮತ್ತು ತೀವ್ರ ನಿರಾಶೆಯನ್ನು ವ್ಯಕ್ತಪಡಿಸಿದೆ. ಘಟನೆ ನಡೆದು 17 ವರ್ಷಗಳ ನಂತರ ಬಂದಿರುವ ತೀರ್ಪು ಎಲ್ಲಾ ಆರೋಪಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಖುಲಾಸೆಗೊಳಿಸಿದೆ. ಈ ಸ್ಫೋಟಗಳು ಆರು ಅಮಾಯಕರನ್ನು ಬಲಿಪಡೆದಿದ್ದವು ಮತ್ತು ಸುಮಾರು ನೂರು ಜನರು ಗಾಯಗೊಂಡಿದ್ದರು. ಬಿಜೆಪಿಯ ಮಾಜಿ ಸಂಸದೆ ಪ್ರಜ್ಞಾಸಿಂಗ್ ಠಾಕೂರ್, ಆಗ ಸೇವೆಯಲ್ಲಿದ್ದ ಸೇನಾ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಮತ್ತು ಇತರರು ಸೇರಿದಂತೆ ಆರೋಪಿಗಳನ್ನು ಸಾಕ್ಷ್ಯಾಧಾರಗಳ ಕೊರತೆ ಮತ್ತು ಕಾರ್ಯವಿಧಾನದ ಲೋಪಗಳ ನೆಪದಲ್ಲಿ ಖುಲಾಸೆಗೊಳಿಸಲಾಗಿದೆ ಎಂಬುದು ನ್ಯಾಯದ ಅಣಕವಾಗಿದೆ ಎಂದು ಅದು ಹೇಳಿದೆ.

ಗಮನಿಸಬೇಕಾದ ಸಂಗತಿಯೆಂದರೆ, ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಪಿತೂರಿಗಾರರು ಮುಸ್ಲಿಂ ಸಮುದಾಯದ ಒಂದು ವಿಭಾಗವನ್ನು ಭಯಭೀತಗೊಳಿಸಲು, ಅಗತ್ಯ ಸೇವೆಗಳನ್ನು ಅಸ್ತವ್ಯಸ್ತಗೊಳಿಸಲು, ಕೋಮು ಉದ್ವಿಗ್ನತೆಯನ್ನು ಸೃಷ್ಟಿಸಲು ಮತ್ತು ರಾಜ್ಯದ ಆಂತರಿಕ ಭದ್ರತೆಗೆ ಬೆದರಿಕೆ ಹಾಕಲು ಈ ಅಪರಾಧವನ್ನು ಸಂಯೋಜಿಸಿದ್ದರು ಎನ್ನುತ್ತ, ಇದಕ್ಕೆ ಅನುಗುಣವಾದ ಶಿಕ್ಷೆಯನ್ನು ಕೋರಿತ್ತು ಎಂದು ವರದಿಯಾಗಿದೆ. ಇದು ಉಗ್ರಗಾಮಿ ಹಿಂದುತ್ವ ಗುಂಪಿನಿಂದ ನಡೆದ ಭಯೋತ್ಪಾದಕ ಕೃತ್ಯದ ಸಂತ್ರಸ್ತರಿಗೆ ಅನಗತ್ಯ ವಿಳಂಬ ಮತ್ತು ಅಂತಿಮವಾಗಿ ನ್ಯಾಯ ನಿರಾಕರಣೆಯ ಮತ್ತೊಂದು ಪ್ರಕರಣವಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಆರೋಪಿಗಳಿಗೆ ಆರ್‌ಎಸ್‌ಎಸ್ –ಬಿಜೆಪಿ ಆರಂಭದಿಂದಲೂ ಕೃಪಾಪೋಷಣೆ ಮತ್ತು ಬೆಂಬಲ ನೀಡುತ್ತ ಬಂದಿದೆ. ಬಿಜೆಪಿ ಪ್ರಜ್ಞಾ ಸಿಂಗ್‌ರನ್ನು ತಮ್ಮ ಅಭ್ಯರ್ಥಿಯನ್ನಾಗಿ ಮಾಡಿ ಸಂಸದೆಯಾಗಿ ಆಯ್ಕೆ ಮಾಡಿತು. ಗೃಹ ಸಚಿವ ಅಮಿತ್ ಷಾ ಸಂಸತ್ತಿನಲ್ಲಿ 'ಯಾವುದೇ ಹಿಂದೂ ಭಯೋತ್ಪಾದಕನಾಗಲು ಸಾಧ್ಯವಿಲ್ಲ' ಎಂದು ಹೇಳಿಕೆ ನೀಡಿದ ಒಂದು ದಿನದ ನಂತರ ಈ ತೀರ್ಪು ಬಂದಿದೆ.

ಅಪರಾಧದ ಗಂಭೀರ ಸ್ವರೂಪದ ದೃಷ್ಟಿಯಿಂದ ಸರ್ಕಾರವು ಎನ್‌ಐಎ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಬೇಕೆಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಒತ್ತಾಯಿಸಿದೆ.

ಬಂಧಿತ ಕ್ರೈಸ್ತ ಸನ್ಯಾಸಿನಿಯರನ್ನು ಭೇಟಿ ಮಾಡಲು ಎಡ ನಿಯೋಗಕ್ಕೆ ಅನುಮತಿ ನಿರಾಕರಣೆ



ಛತ್ತೀಸ್‌ಗಢ ಜಿಆರ್‌ಪಿ (ಸರಕಾರೀ ರೈಲ್ವೆ ಪೊಲೀಸ್) ಸುಳ್ಳು ಆರೋಪಗಳ ಮೇಲೆ ಬಂಧಿಸಿರುವ ಕ್ರೈಸ್ತ ಸನ್ಯಾಸಿನಿಯರನ್ನು ಭೇಟಿಮಾಡಲು ದುರ್ಗ್ ಜೈಲು ಆಡಳಿತವು ಸಿಪಿಐ(ಎಂ), ಸಿಪಿಐ ಮತ್ತು ಕೆಸಿ(ಎಂ) ನಾಯಕರ ನಿಯೋಗಕ್ಕೆ ಅನುಮತಿ ನಿರಾಕರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಪಾರದರ್ಶಕತೆ, ಹೊಣೆಗಾರಿಕೆ ಮತ್ತು ವ್ಯಕ್ತಿಗಳ ಹಕ್ಕುಗಳನ್ನು ನಿಗ್ರಹಿಸುವ ಈ ಪ್ರಯತ್ನ ಅಸಮರ್ಥನೀಯ ಎಂದು ಅದು ಹೇಳಿದೆ.

ಸಿಪಿಐ(ಎಂ) ನಾಯಕರಾದ ಬೃಂದಾ ಕಾರಟ್ ಮತ್ತು ಸಂಸದರಾದ ಕೆ.ರಾಧಾಕೃಷ್ಣನ್ ಮತ್ತು ಎ.ಎ.ರಹೀಮ್, ಸಿಪಿಐ ನಾಯಕರಾದ ಆನಿ ರಾಜಾ ಮತ್ತು ಸಂಸದ ಪಿ.ಪಿ.ಸುನೀರ್ ಮತ್ತು ಕೇರಳ ಕಾಂಗ್ರೆಸ್(ಎಂ) ನಾಯಕರು ಮತ್ತು ಸಂಸದ ಜೋಸ್ ಕೆ.ಮಣಿ ಅವರನ್ನು ಒಳಗೊಂಡ ನಿಯೋಗಕ್ಕೆ ಜುಲೈ 29ರಂದು ಬಂಧಿತ ಸನ್ಯಾಸಿನಿಯರನ್ನು ಭೇಟಿ ಮಾಡಲು, ಸಾಕಷ್ಟು ಮುಂಚಿತವಾಗಿ ಲಿಖಿತ ಅನುಮತಿಯನ್ನು ಕೋರಿದ್ದರೂ, ಕ್ಷುಲ್ಲಕ ಕಾರಣಗಳ ಮೇಲೆ ಅನುಮತಿ ನಿರಾಕರಿಸಲಾಯಿತು. ಬಲವಾದ ಪ್ರತಿಭಟನೆಯ ನಂತರವೇ ಅವರಿಗೆ ನಾಳೆ ಜುಲೈ 30ರಂದು ಭೇಟಿ ಮಾಡಲು ಅನುಮತಿ ನೀಡಲಾಯಿತು.

ರಾಜಕೀಯ ಮುಖಂಡರು ಮತ್ತು ಜನಪ್ರತಿನಿಧಿಗಳಿಗೆ ದಸ್ತಗಿರಿಯಾದವರನ್ನು ಭೇಟಿಮಾಡಲು ಮತ್ತು ಅವರ ಸ್ಥಿತಿಯನ್ನು ಅಂದಾಜಿಸಲು ಅನುಮತಿ ನೀಡಲು ಆರಂಭದಲ್ಲಿ ನಿರಾಕರಿಸಿರುವುದು ಸೂಕ್ತ ಪ್ರಕ್ರಿಯೆ ಮತ್ತು ಮಾನವ ಹಕ್ಕುಗಳ ಬಗ್ಗೆ ರಾಜ್ಯದ ಕಳವಳಕಾರೀ ನಿರ್ಲಕ್ಷ್ಯವನ್ನು ಮತ್ತಷ್ಟು ಒತ್ತಿಹೇಳುತ್ತದೆ ಎಂದಿರುವ ಪೊಲಿಟ್‌ಬ್ಯುರೊ, ಇಂತಹ ಕ್ರಮಗಳು ಪ್ರಜಾಪ್ರಭುತ್ವ ತತ್ವಗಳಿಗೆ ನೇರ ಅವಮಾನವಾಗಿದ್ದು, ತನಿಖೆಯನ್ನು ಹತ್ತಿಕ್ಕುವ ಮತ್ತು ಭಿನ್ನಾಭಿಪ್ರಾಯದ ಧ್ವನಿಗಳನ್ನು ಅಡಗಿಸುವ ಗುರಿಯನ್ನು ಹೊಂದಿವೆ, ಇದು ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರಗಳ ಸರ್ವಾಧಿಕಾರಶಾಹೀ ಸ್ವಭಾವವನ್ನು ಒತ್ತಿಹೇಳುತ್ತದೆ ಎಂದು ಹೇಳಿದೆ.

ಈ ಕ್ರೈಸ್ತ ಸನ್ಯಾಸಿನಿಯರ ವಿರುದ್ಧ ಹೊರಿಸಲಾದ ಆರೋಪಗಳು ಆಧಾರ ರಹಿತವಾಗಿವೆ ಮತ್ತು ಅವರ ಮೂಲಭೂತ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗಿದೆ. ಸನ್ಯಾಸಿನಿಯರ ಬಂಧನವು ಒಂದು ಆಕಸ್ಮಿಕ ಘಟನೆಯಲ್ಲ, ಬದಲಾಗಿ ಧಾರ್ಮಿಕ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಕಿರುಕುಳ ನೀಡುವ ಒಂದು ವ್ಯಾಪಕ ಮಾದರಿಯ ಭಾಗವಾಗಿದೆ. ಈ ಬಂಧನದಲ್ಲಿ ಭಜರಂಗದಳದ ಆಣತಿಯಂತೆ ಅನುಸರಿಸುವ ಒಂದು ಮಾದರಿಯಿದೆ ಎಂದಿರುವ ಪೊಲಿಟ್‌ಬ್ಯುರೊ, ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವಂತೆ ಒಬ್ಬರ ನಂಬಿಕೆಯನ್ನು ಮುಕ್ತವಾಗಿ ಮತ್ತು ಶಾಂತಿಯುತವಾಗಿ ಆಚರಿಸುವ ಹಕ್ಕನ್ನು ಯಾವುದೇ ಬೆಲೆ ತೆತ್ತಾದರೂ ರಕ್ಷಿಸಬೇಕು ಎಂದು ಹೇಳಿದೆ.

....ಆರ್ಥಿಕ ಅರಾಜಕತೆಗೆ ಆಹ್ವಾನ

ಪುಟ 16 ರಿಂದ

ವಹಿವಾಟುಗಳಲ್ಲೂ ಗಡಿಗಳ ಮೇರೆ ಮೀರಬಲ್ಲವು.

ಮಸ್ಕ್ ಕಾಸು, ಜೆಫ್ ನಾಣ್ಯ

ಸದ್ಯದಲ್ಲೇ ಮಸ್ಕ್ ಕಾಸು ಅಥವಾ ಜೆಫ್ ನಾಣ್ಯ ಇತ್ಯಾದಿ ನಿಮಗೆ ಪಾವತಿಯಾಗಿ ಸಿಗಬಹುದು. ತಯಾರಾಗಿರಿ. ಈ ದೈತ್ಯ ಕಂಪನಿಗಳು ತಮ್ಮ ಗ್ರಾಹಕರನ್ನು ತಮ್ಮ ವ್ಯವಸ್ಥೆಯ ಭಾಗವಾಗಿಸಿ ಸೆರೆಯಾಗಿಸಬಹುದು!! ಓಲಾ, ಅಮೆಜೋನ, ಪೆಟಿಎಂ ಇತ್ಯಾದಿಗಳ ವ್ಯಾಲೆಟ್‌ಗಳಲ್ಲಿ ಸೇರಿದ ನಿಮ್ಮ ಹಣ ಬ್ಯಾಂಕ್ ಠೇವಣಿಯಲ್ಲ. ನಿಮ್ಮ ಈ ಹಣಕ್ಕೆ ಬಡ್ಡಿಯಿಲ್ಲ. ಇಲ್ಲಿನ ಖಾತೆಗಳಿಗೆ ಹಣ ಹರಿಯುತ್ತದೆ. ಅಲ್ಲಿಂದ ಹೊರಗೆ ಸುಲಭದಲ್ಲಿ ಬರಲಾರದು. ಮಿಂತ್ರಕ್ಕೆ ಪಾವತಿಸಿದ ಹಣ ಅಲ್ಲಿ ಮಾತ್ರ ಬಳಕೆಯಾಗುತ್ತದೆ. ಒಂದು ವಸ್ತು ಬೇಡವೆನಿಸಿದರೆ ಇನ್ನೊಂದು ವಸ್ತು ಕೊಳ್ಳಿ. ಓಲಾ ಕ್ಕೆ ಪಾವತಿಸಿದ ಹಣವೂ ಹೀಗೆ. ಇಂದಿನ ಪಯಣಕ್ಕೆ ಆಗದಿದ್ದರೆ ಮುಂದಿನ ಪಯಣಕ್ಕೆ!! ಅವರ ಲಾಭ, ಅವರ ಅನುಕೂಲ, ಅವರ ಶರತ್ತುಗಳು. ನೀವು ಬಲಿಪಶು.


ಉದಾಹರಣೆಗೆ: ಬ್ಲೂ ಸ್ಮಾರ್ಟ್ ಎಂಬ ಎಲೆಕ್ಟ್ರಿಕ್ ವಾಹನ ಸಾರಿಗೆ ಕಂಪನಿ ತನ್ನ ಕಾರ್ಯಾಚರಣೆ ಅಮಾನತು ಮಾಡಿತು. ಸಾವಿರಾರು ಗ್ರಾಹಕರ ದುಡ್ಡು ಅದರ ಕೈಯಲ್ಲಿ ಸಿಕ್ಕಿಕೊಂಡಿತು. ಲಕ್ಷಾಂತರ ಜನರ ಹಣ ಹೀಗೆ ಸಿಕ್ಕಿಕೊಂಡರೆ ಒಟ್ಟು ಹಣ ಸಣ್ಣ ಮೊತ್ತವೆ? ಸಾರ್ವಜನಿಕರ ಹಣ. ಕೇಳುವವರಾರು? ಯಾರಿಗೆ ಯಾವ ಹಿಡಿತ ಇವುಗಳ ಮೇಲಿದೆ?

ಮೆಟ, ಗೂಗಲ್ ನಂತಹ ಕಂಪನಿಗಳು ದೊಡ್ಡ ದೊಡ್ಡ ಖಾಸಗಿ ಬ್ಯಾಂಕುಗಳಾಗುತ್ತವೆ ನಿಜ. ಆದರೆ ಅವುಗಳಿಗೆ ಯಾವುದೇ ಬಾಧ್ಯತೆ ಅಥವಾ ನಿಯಂತ್ರಣ ಇಲ್ಲ. ಅವರು ಆಡಿದ್ದೇ ಆಟ. ಅವರು ಹೂಡಿದ್ದೇ ಹೂಟ. ಕೇಳುವವರಿಲ್ಲ, ತಡೆಯುವವರಿಲ್ಲ. ನಿಯಂತ್ರಣಗಳ ಗೋಜೇ ಇಲ್ಲ.

ತಜ್ಞರ ಪ್ರಕಾರ ಇದು ಅನಿಯಂತ್ರಿತ, ಸೂಕ್ಷ್ಮ ಬ್ಯಾಂಕಿಂಗ್ ವ್ಯವಸ್ಥೆಗೆ ಎಡೆ ಮಾಡಿಕೊಡಬಹುದು. ಇವು ವಿಫಲವಾಗಲಾರದ ದೊಡ್ಡ ಕಾಯಗಳಾಗಿ ಸರ್ಕಾರಗಳು ಇವುಗಳನ್ನು ಸಾರ್ವಜನಿಕ ಹಣ ಬಳಸಿ ಗಂಡಾಂತರಗಳಿಂದ ರಕ್ಷಿಸಬೇಕಾದ ಸಮಯಗಳು ಬರಬಹುದು. ಮತ್ತೆ ಸಾರ್ವಜನಿಕರ ದುಡ್ಡೇ ಇಲ್ಲಿ ಬಳಕೆ ಆಗುವುದು. ಈಗಿರುವ ಬ್ಯಾಂಕಿಂಗ್ ವ್ಯವಸ್ಥೆಗೆ ಸಮಾನಾಂತರವಾಗಿ ಇನ್ನೊಂದು ನಿಯಂತ್ರಣವಿಲ್ಲದ ವ್ಯವಸ್ಥೆ ಹೊರಹೊಮ್ಮಬಹುದು. ಹಾಗಾದಾಗ ಜನಸಾಮಾನ್ಯರ ಹಣಕ್ಕೆ/ ಅವರ ಕ್ಷೇಮಕ್ಕೆ ಯಾರು ಹೊಣೆ? ಎಷ್ಟರ ಮಟ್ಟಿಗೆ? ಇಂತಹ ನೂರಾರು ಪ್ರಶ್ನೆಗಳು ಏಳುತ್ತವೆ. ಟ್ರಂಪ್ ಆಡಳಿತದ ಅಮೆರಿಕದಲ್ಲಿ ಜನಸಾಮಾನ್ಯರ ರಕ್ಷಣೆಗೆ ಇರುವ ನಿಯಂತ್ರಣಗಳನ್ನು ಸಡಿಲಿಸುವುದರಲ್ಲಿ ಸರಕಾರವೇ ತೊಡಗಿದೆ. ಜಗತ್ತಿನ ಬೇರೆ ಭಾಗಗಳಿಗೆ ಇದರ ಪರಿಣಾಮ ತಟ್ಟದೆ ಇರದು. ವ್ಯಾವಹಾರಿಕ ರೀತಿ ನೀತಿಗಳನ್ನು ಅಮೆರಿಕದಿಂದಲೇ ಕಲಿಯುವ ಅಭ್ಯಾಸವೇ ನಮಗಿರುವಾಗ, ಸಹಜವೆಂಬಂತೆ ಇದು ನಮ್ಮಲ್ಲಿಗೆ ಬರುತ್ತದೆ. ಜಾಗತಿಕ ಬಂಡವಾಳಶಾಹಿ ಇಂತಹ ವ್ಯವಸ್ಥೆಯನ್ನು ರೂಪಿಸಿ ಬೆಳೆಸುತ್ತವೆ. ದೈತ್ಯ ಕಂಪನಿಗಳು ಕನಿಷ್ಟ ನಿಯಂತ್ರಣಗಳಡಿ ಆರ್ಥಿಕವನ್ನು ತಮ್ಮ ಲಾಭಕ್ಕೆ ತಕ್ಕಂತೆ ನಡೆಸುತ್ತವೆ. ನಮ್ಮ ಹಣಕಾಸು ವ್ಯವಸ್ಥೆ ಮತ್ತು ನಮ್ಮ ಸಾರ್ವಜನಿಕ ಹಣ ನರಳುತ್ತವೆ.

ಇಂತಹ ವ್ಯವಸ್ಥೆಗಳ ಬಗೆಗೆ ಜನರ ಪ್ರಜ್ಞೆ ಜಾಗೃತವಾಗುವಂತೆ ಮಾಡಿದರೆ, ಆ ಮೂಲಕ ಪ್ರತಿಭಟನೆಗಳು ಹೊಮ್ಮುವಂತಾದರೆ, ಇಂತಹ ಜನಪೀಡಕ ಕಂಪನಿಗಳು ಹೊಮ್ಮುವ ಕಾಲದಲ್ಲೇ ಅವುಗಳ ನಿಯಂತ್ರಣದ ಬೇಡಿಕೆ ಬರುವಂತಾಗಿ ಅದು ಸಾಕಷ್ಟು ಪ್ರಬಲವಾದರೆ, ಬಿಕ್ಕಟ್ಟುಗಳು ಬರುವ ಮೊದಲೇ ಅವುಗಳನ್ನು ತಡೆಯುವ ಪ್ರಯತ್ನಗಳು ಆಗಬಹುದು. ಇಲ್ಲವಾದರೆ ಜನಸಾಮಾನ್ಯರ ನಷ್ಟ ಭರಿಸಲಾರದ ನಷ್ಟವಾಗಬಹುದು.

ಖನಿಜಗಳು ಮತ್ತು ಸಾಮ್ರಾಜ್ಯಶಾಹಿ



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಬೂರ್ಜ್ವಾ ಅರ್ಥಶಾಸ್ತ್ರವು ಸಾಮ್ರಾಜ್ಯಶಾಹಿ ಎಂಬುದು ಇಲ್ಲ ಎಂದು ವಾದಿಸುತ್ತಿದ್ದರೂ, ಹಿಂದಿನ ವಸಾಹತುಗಳಿಂದ ಈಗಲೂ ಕಚ್ಚಾ ವಸ್ತುಗಳ, ಮುಖ್ಯವಾಗಿ ನೈಸರ್ಗಿಕ ಸಂಪನ್ಮೂಲಗಳ ಪೂರೈಕೆಯನ್ನು ನಿರಂತರವಾಗಿ ಮತ್ತು ಖಚಿತವಾಗಿ ಪಡೆಯಲು ಬಂಡವಾಳಶಾಹಿಯು ಸಾಮ್ರಾಜ್ಯಶಾಹೀ ಪ್ರಾಬಲ್ಯ ಹೇರಲು ಮುಂದಾಗುತ್ತಿದೆ. ಜಾಗತಿಕ ದಕ್ಷಿಣದ ದೇಶಗಳ ಮೇಲೆ ಹೇರಿದ ನವ ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ಹಲವೆಡೆಗಳಲ್ಲಿ ಅವುಗಳ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣವು ಮತ್ತೆ ಮೆಟ್ರೊಪಾಲಿಟನ್ ಬಂಡವಾಳಕ್ಕೆ ದಕ್ಕಿದೆ. ಆದರೆ, ನವ ಉದಾರವಾದಿ ವ್ಯವಸ್ಥೆಯು ಬಿಕ್ಕಟ್ಟಿಗೆ ಸಿಲುಕಿರುವ ಪ್ರಸಕ್ತ ಸನ್ನಿವೇಶದಲ್ಲಿ ಖನಿಜಗಳೂ ಸೇರಿದಂತೆ ತಮ್ಮ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣವನ್ನು ಮರು ಸ್ವಾಧೀನಪಡಿಸಿಕೊಳ್ಳುವ ಈ ದೇಶಗಳ ಹೋರಾಟವು ಮುಂಬರುವ ದಿನಗಳಲ್ಲಿ ಹೆಚ್ಚು ಬಲಗೊಳ್ಳುತ್ತದೆ. ಹೀಗಾಗಿ ಬಂಡವಾಳಶಾಹಿಯ ಬಿಕ್ಕಟ್ಟು ಸಾಮ್ರಾಜ್ಯಶಾಹಿಯನ್ನು ಇನ್ನೂ ಕಷ್ಟಕ್ಕೆ ಈಡು ಮಾಡುತ್ತದೆ, ಮತ್ತು ಅದರಿಂದಾಗಿ ಅದು ಇನ್ನಷ್ಟು ದುಷ್ಟತನಕ್ಕೂ ಇಳಿಯಬಹುದು.

ಜಗತ್ತಿನಲ್ಲಿ ಕೈಗಾರಿಕಾ ಬಂಡವಾಳಶಾಹಿಯನ್ನು ಹುಟ್ಟುಹಾಕಿದ ಕೈಗಾರಿಕಾ ಕ್ರಾಂತಿಯು ಮೊಟ್ಟ ಮೊದಲಿಗೆ ಬ್ರಿಟನ್‌ನಲ್ಲಿ ಹತ್ತಿ ಜವಳಿ ಯಂತ್ರಗಳ ಆವಿಷ್ಕಾರದೊಂದಿಗೆ ಆರಂಭಗೊಂಡಿತು. ಆದರೆ, ಬ್ರಿಟನ್ ಅಥವಾ ಉತ್ತರ ಯುರೋಪಿನ ಯಾವುದೇ ದೇಶವು ಕಚ್ಚಾ ಹತ್ತಿಯನ್ನು ಬೆಳೆಯುವುದು ಸಾಧ್ಯವಾಗಲಿಲ್ಲ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಕೈಗಾರಿಕಾ ಬಂಡವಾಳಶಾಹಿಯು ಅಸ್ತಿತ್ವಕ್ಕೆ ಬರುವುದೇ ಈ ಮೆಟ್ರೊಪಾಲಿಟನ್ ದೇಶಗಳು ಕಚ್ಚಾ ವಸ್ತುಗಳು ಎಲ್ಲೆಲ್ಲಿ ಉತ್ಪಾದನೆಯಾಗುತ್ತವೋ ಅಲ್ಲಿಂದ ನಿರಂತರವಾಗಿ ಪೂರೈಕೆಯಾಗುವುದರ ಮೇಲೆ ಅವಲಂಬಿತವಾಗಿತ್ತು. ಅಂದಿನಿಂದ ಇಂದಿನವರೆಗೆ ಈ ಪರಿಸ್ಥಿತಿ ಎಳ್ಳಷ್ಟೂ ಸಹ ಬದಲಾಗಿಲ್ಲ. ಮೆಟ್ರೊಪಾಲಿಟನ್ ಬಂಡವಾಳಶಾಹಿಯ ಉತ್ಪನ್ನಗಳ ವೈವಿಧ್ಯವು ಕಾಲ ಕ್ರಮೇಣ ಬದಲಾಗಿದೆ. ಹಳೆಯ ಉತ್ಪನ್ನಗಳನ್ನು ಸ್ಥಾನದಲ್ಲಿ ನವ ನವೀನ ಉತ್ಪನ್ನಗಳು ಬಂದಿವೆ ಮತ್ತು ಅದರೊಂದಿಗೇ ಅವಕ್ಕೆ ಬೇಕಾದ ಕಚ್ಚಾ ವಸ್ತುಗಳ ಪಟ್ಟಿಯೂ ಬದಲಾಗಿದೆ. ಆದರೆ, ಕಚ್ಚಾ ವಸ್ತುಗಳ ಗಣನೀಯ ಪ್ರಮಾಣವು ಮೆಟ್ರೊಪಾಲಿಟನ್ ಬಂಡವಾಳಶಾಹಿಯ ವ್ಯಾಪ್ತಿಯ ಹೊರಗಿದೆ. ಹಾಗಾಗಿ, ಈ ಕಚ್ಚಾ ವಸ್ತುಗಳ ಪೂರೈಕೆಯನ್ನು ಅದು ನಿರಂತರವಾಗಿ ಮತ್ತು ಖಚಿತವಾಗಿ ಪಡೆಯುವುದು ಅಗತ್ಯವಾಗುತ್ತದೆ. ಈ ಅಗತ್ಯವೇ ಮೆಟ್ರೊಪಾಲಿಟನ್ ಬಂಡವಾಳಶಾಹಿಗೆ ತನ್ನ ವ್ಯಾಪಿಯಲ್ಲಿರದ "ಹೊರಗಿನ" ಜಗತ್ತಿನ ಮೇಲೆ ಸಾಮ್ರಾಜ್ಯಶಾಹಿ ನಿಯಂತ್ರಣವನ್ನು ಹೊಂದಲು ಒಂದು ಪ್ರೇರಣೆಯನ್ನು ಒದಗಿಸುತ್ತದೆ.

ಸಾಂಪ್ರದಾಯಿಕ ಬೂರ್ಜ್ವಾ ಅರ್ಥಶಾಸ್ತ್ರವು ಕಚ್ಚಾ ವಸ್ತುಗಳು ರೂಢಿಯಲ್ಲಿರುವ ಸರಕು ವಿನಿಮಯ ವ್ಯವಹಾರದ ಮೂಲಕ ಮೆಟ್ರೊಪಾಲಿಟನ್ ದೇಶಗಳಿಗೆ ಸರಬರಾಜಾಗುತ್ತವೆ ಎಂಬಂತೆ ಬಿಂಬಿಸುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಬೂರ್ಜ್ವಾ ಅರ್ಥಶಾಸ್ತ್ರವು ಈ ಕಚ್ಚಾ ವಸ್ತುಗಳನ್ನು ಅವು ಈಗಾಗಲೇ ಉತ್ಪಾದಿಸಿದ ಸರಕುಗಳು ಮತ್ತು ಬೆಲೆ ವ್ಯತ್ಯಾಸಗಳ ಮೂಲಕ ಅವುಗಳಿಗೆ ಇರುವ ಬೇಡಿಕೆಯನ್ನು ಪೂರೈಸಲು ಸಾಕಷ್ಟು ಪ್ರಮಾಣದಲ್ಲಿ ಅವುಗಳ ಉತ್ಪಾದನೆಯನ್ನು ಖಚಿತಪಡಿಸಿಕೊಳ್ಳಲಾಗುತ್ತದೆ ಎಂದು ಭಾವಿಸುತ್ತದೆ. ಹಾಗಾಗಿ, ಅದರ ಪ್ರಕಾರ, ಕಚ್ಚಾ ವಸ್ತುಗಳ ಮೇಲೆ ಸಾಮ್ರಾಜ್ಯಶಾಹಿ ನಿಯಂತ್ರಣ ಅಗತ್ಯವಾಗುವುದಿಲ್ಲ. ಆದರೆ ಈ ತರ್ಕವು ಎಲ್ಲ ಕಚ್ಚಾ ವಸ್ತುಗಳ ಇಡೀ ಉತ್ಪಾದನೆಯನ್ನು ಈಗಾಗಲೇ ಬಂಡವಾಳಶಾಹಿ ಪರಿಸ್ಥಿತಿಗಳಲ್ಲಿ ಮಾಡಲಾಗುತ್ತಿದೆ, ಬಹುಶಃ ಕಚ್ಚಾ ವಸ್ತುಗಳನ್ನು ಸಂಸ್ಕರಿಸುವ ಮೆಟ್ರೊಪಾಲಿಟನ್ ಕಂಪನಿಗಳ ಮೂಲಕ ಎಂದು ಊಹಿಸಿಕೊಳ್ಳುತ್ತದೆ. ಹೀಗೆ, ಸಾಮ್ರಾಜ್ಯಶಾಹಿಯ ಅಗತ್ಯವನ್ನು ಈ ತರ್ಕವು, ಸಾಮ್ರಾಜ್ಯಶಾಹಿಯು ಈಗಾಗಲೇ ಜಗತ್ತಿನಲ್ಲಿ ಹರಡಿದೆ ಎಂದು ಊಹಿಸಿಕೊಳ್ಳುವ ಮೂಲಕ ನಿರಾಕರಿಸುತ್ತದೆ. ಅಥವಾ, ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಮೆಟ್ರೊಪಾಲಿಟನ್ ಅಥವ ಮುಂದುವರೆದ ಬಂಡವಾಳಶಾಹಿ ದೇಶಗಳಿಗೂ ಮತ್ತು "ಹೊರಗಿನ" ಜಗತ್ತಿಗೂ ಯಾವುದೇ ವ್ಯತ್ಯಾಸವಿಲ್ಲ ಎಂದು ಅದು ಪ್ರತಿಪಾದಿಸುತ್ತದೆ. ಏಕೆಂದರೆ, ಈ "ಹೊರಗಿನ" ಜಗತ್ತಿನ ಬಹುಭಾಗವನ್ನು ಅದಾಗಲೇ ಮುಂದುವರೆದ ದೇಶಗಳು ಸ್ವಾಧೀನಪಡಿಸಿಕೊಂಡು ಜೀರ್ಣಿಸಿಕೊಂಡಾಗಿದೆ ಎಂದು ಭಾವಿಸಲಾಗಿದೆ. ವಿಪರ್ಯಾಸದ ಸಂಗತಿಯೆಂದರೆ, ಬೂರ್ಜ್ವಾ ಅರ್ಥಶಾಸ್ತ್ರವು ಸಾಮ್ರಾಜ್ಯಶಾಹಿ ಎಂಬುದು ಅಸ್ತಿತ್ವದಲ್ಲಿಲ್ಲ ಎಂದು ವಾದಿಸಲು ಸಾಮ್ರಾಜ್ಯಶಾಹಿಯು ಈಗಾಗಲೇ ವ್ಯಾಪಕವಾಗಿ ಹರಡಿಹೋಗಿದೆ ಎಂದೇ ಸೂಚ್ಯವಾಗಿ ಊಹಿಸಿಕೊಳ್ಳುತ್ತದೆ.



ಬೂರ್ಜ್ವಾ ಅರ್ಥಶಾಸ್ತ್ರದ ಪೇಚಾಟ

ಬಂಡವಾಳಶಾಹಿಯು ತಾನು ಸಾಮ್ರಾಜ್ಯಶಾಹಿ ಆಗುವತ್ತ ಸಾಗುತ್ತಿಲ್ಲ ಎಂಬುದಕ್ಕೆ ಆಗಾಗ ಇನ್ನೊಂದು ತರ್ಕವನ್ನೂ ಮಂಡಿಸುತ್ತದೆ. ಮುಂದುವರೆದ ದೇಶಗಳ ಒಟ್ಟು ಉತ್ಪಾದನೆಯ ಮೌಲ್ಯಕ್ಕೆ ಹೋಲಿಸಿದರೆ "ಹೊರಗಿನ" ಜಗತ್ತಿನ ಕಚ್ಚಾ ವಸ್ತುಗಳ ಪಾಲು ಅತಿ ಸಣ್ಣದು ಎಂದು ಅನೇಕ ಬರಹಗಾರರು ಹೇಳುತ್ತಾರೆ. ಮೆಟ್ರೊಪಾಲಿಟನ್ ಬಂಡವಾಳಶಾಹಿಯು ತನ್ನ ಒಟ್ಟು ಉತ್ಪಾದನಾ ಮೌಲ್ಯದಲ್ಲಿ ಇಷ್ಟು ಸಣ್ಣ ಭಾಗವನ್ನು ಹೊಂದಿರುವ ಕಚ್ಚಾ ವಸ್ತುಗಳನ್ನು ಪಡೆಯುವುದಕ್ಕಾಗಿ ವಿಶ್ವದ ಮೇಲೆ ಪ್ರಾಬಲ್ಯ ಹೇರುವ ಸಾಮ್ರಾಜ್ಯಶಾಹಿ ಉದ್ದೇಶದಲ್ಲಿ ತೊಡಗಿಸಿಕೊಳ್ಳುವ ಅಸಾಧಾರಣ ಪ್ರಯತ್ನ ಮಾಡುತ್ತದೆ ಎಂದು ಸೂಚಿಸುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ ಎಂದು ಈ ಬರಹಗಾರರು ವಾದಿಸುತ್ತಾರೆ.

ಇದಕ್ಕೆ ಉತ್ತರವನ್ನು ತಮ್ಮ 'ದಿ ಏಜ್ ಆಫ್ ಇಂಪೀರಿಯಲಿಸಂ' ಪುಸ್ತಕದಲ್ಲಿ ಹ್ಯಾರಿ ಮ್ಯಾಗ್ಡಾಫ್ ಎಂಬುವರು ಒದಗಿಸಿದ್ದಾರೆ. ಕಚ್ಚಾ ವಸ್ತುಗಳ ವಿನಿಮಯ ಮೌಲ್ಯವು ಉತ್ಪನ್ನದ ಒಟ್ಟು ವಿನಿಮಯ ಮೌಲ್ಯಕ್ಕೆ ಹೋಲಿಸಿದರೆ ಎಷ್ಟೇ ಸಣ್ಣದಿದ್ದರೂ ಸಹ, ಈ ಕಚ್ಚಾ ವಸ್ತುಗಳನ್ನು ಬಳಕೆ–ಮೌಲ್ಯಗಳಾಗಿ ಬಳಸದ ಹೊರತು ಯಾವ ತಯಾರಿಕೆಯೂ ಸಾಧ್ಯವಾಗುವುದಿಲ್ಲ ಎಂಬ ನಿರ್ಣಾಯಕ ಅಂಶವನ್ನು ಈ ಪುಸ್ತಕದಲ್ಲಿ ಅವರು ಮಂಡಿಸಿದ್ದಾರೆ. ಈ ಸಂಗತಿಯು ನಿಜವೂ ಹೌದು. ಮೆಟ್ರೋಪಾಲಿಟನ್ ಬಂಡವಾಳವು ಹೊಂದಿರುವ ಶಕ್ತಿಯ ಮೂಲಕ ಅದು ಕಚ್ಚಾ ವಸ್ತುಗಳ ವಿನಿಮಯ ಮೌಲ್ಯವನ್ನು ಶೂನ್ಯದ ಮಟ್ಟಕ್ಕೂ ತಳ್ಳಬಹುದು. ಆದರೆ, ಉತ್ಪಾದನೆಗಾಗಿ ಕಚ್ಚಾ ವಸ್ತುಗಳ ಭೌತಿಕ ಬಳಕೆಯನ್ನು ನೈಸರ್ಗಿಕವಾಗಿ ನಿರ್ಧರಿಸಲಾಗುತ್ತದೆ ಮತ್ತು ಅದನ್ನು ಸುಮ್ಮ ಸುಮ್ಮನೆ ತಪ್ಪಿಸಲಾಗದು. ಆದ್ದರಿಂದ, ಈ ಭೌತಿಕ ಕಚ್ಚಾ ವಸ್ತುಗಳನ್ನು "ಹೊರಗಿನಿಂದ" ಪಡೆಯುವುದು ಮೆಟ್ರೊಪಾಲಿಟನ್ ಬಂಡವಾಳಶಾಹಿಗೆ ಒಂದು ಪರಮ ಅಗತ್ಯವಾಗುತ್ತದೆ. ಕಚ್ಚಾ ವಸ್ತುಗಳು ಒಳಗೊಂಡಿರುವ ವಿನಿಮಯ ಮೌಲ್ಯವು ತುಲನಾತ್ಮಕವಾಗಿ ಅತಿ ಸಣ್ಣದು ಎಂಬ ಅಂಶದಿಂದಾಗಿ ಉತ್ಪಾದನೆಯಲ್ಲಿ ಅವುಗಳು ಹೊಂದಿರುವ ಮಹತ್ವವು ಅತ್ಯಲ್ಪ ಎಂದಾಗಲಿ ಅಥವಾ ಅವುಗಳ ಪೂರೈಕೆಯ ಮೂಲಗಳ ಮೇಲೆ ನಿಯಂತ್ರಣ ಪಡೆದುಕೊಳ್ಳುವುದು ಅಮುಖ್ಯ ಎಂದು ವಾದಿಸುವುದಾಗಲಿ ಒಂದು ದೊಡ್ಡ ತಪ್ಪಾಗುತ್ತದೆ.

ಕೃಷಿ–ಮೂಲ ಉತ್ಪನ್ನಗಳು ಮೆಟ್ರೊಪಾಲಿಟನ್ ಬಂಡವಾಳಶಾಹಿ ಕೈಗಾರಿಕೆಗಳಿಗೆ ಪ್ರಮುಖ ಅವಶ್ಯಕತೆಗಳಾಗಿವೆ ಮತ್ತು ಆಹಾರ ಬೆಳೆಗಳು ಮೆಟ್ರೊಪಾಲಿಟನ್ ಬಂಡವಾಳಶಾಹಿಯ ವ್ಯಾಪ್ತಿಯಲ್ಲಿ ವಾಸಿಸುವ ಜನರಿಗೆ ಪ್ರಮುಖ ಅವಶ್ಯಕತೆಗಳಾಗಿವೆ. ಅದಕ್ಕಾಗಿ ಬಂಡವಾಳಶಾಹಿಯು ವಿಶ್ವಾದ್ಯಂತ ಭೂ ಬಳಕೆಯ ಮಾದರಿಯನ್ನು ನಿಯಂತ್ರಿಸಲು ಬಯಸುತ್ತದೆ. ಆದಾಗ್ಯೂ, ನಾವೀಗ ಖನಿಜಗಳ ವಿಷಯದ ಬಗ್ಗೆ ಮಾತ್ರ ಗಮನಹರಿಸೋಣ. ವಾಸ್ತವವಾಗಿ, "ಹೊರಗಿನಿಂದ" ಮಾಡಿಕೊಳ್ಳುವ ಖನಿಜ ಆಮದಿನ ಮೇಲಿನ ಮೆಟ್ರೊಪಾಲಿಟನ್ ಬಂಡವಾಳಶಾಹಿ ಅವಲಂಬನೆಯ ನಿರ್ಣಾಯಕ ಸ್ವರೂಪವನ್ನು ಇತ್ತೀಚೆಗೆ ಅಮೆರಿಕವು ಅಪರೂಪದ ಭೂನಿಕ್ಷೇಪಗಳಿಗೆ ಸಂಬಂಧಿಸಿದಂತೆ ಹೊಂದಿದ ಅನುಭವವೇ ತೋರಿಸುತ್ತದೆ.

ಟ್ರಂಪ್‌ಗೆ ಚೀನಾದ ಎದುರೇಟು

ಚೀನಾದಿಂದ ಮಾಡಿಕೊಳ್ಳುವ ಆಮದುಗಳ ಮೇಲೆ ಸುಂಕವನ್ನು ಏರಿಕೆ ಮಾಡುವ ಟ್ರಂಪ್ ಅವರ ಬೆದರಿಕೆಗೆ ಎದುರಾಗಿ, ಚೀನಾ ಸರ್ಕಾರವು ಅಮೆರಿಕಕ್ಕೆ ರಫ್ತು ಮಾಡುವ ಕೆಲವು ಅಪರೂಪದ ಭೂ–ಖನಿಜಗಳ ಮೇಲೆ ಒಂದು ತಾತ್ಕಾಲಿಕ ನಿಷೇಧವನ್ನು ಘೋಷಿಸಿತು. ಚೀನಾವು ವಿಶ್ವದ ಅಪರೂಪದ ಭೂ–ಖನಿಜಗಳ ಅತಿದೊಡ್ಡ ಉತ್ಪಾದಕ ರಾಷ್ಟ್ರವಾಗಿದ್ದು, ಒಟ್ಟು ವಿಶ್ವ ಉತ್ಪಾದನೆಯ ಸುಮಾರು ಶೇ. 70ರಷ್ಟು ಪಾಲನ್ನು ಹೊಂದಿದೆ ಮತ್ತು ವಿಶ್ವದ ಅಪರೂಪದ ಭೂ–ಖನಿಜಗಳ ಸಂಸ್ಕರಣಾ ಸಾಮರ್ಥ್ಯದ ಸುಮಾರು ಶೇ. 90ರಷ್ಟು ಪಾಲನ್ನು ಹೊಂದಿದೆ. ಟ್ರಂಪ್ ಸುಂಕ ಬೆದರಿಕೆಗೆ ಉತ್ತರವಾಗಿ ಸಂಸ್ಕರಿಸಿದ ಅಪರೂಪದ ಭೂ–ಖನಿಜಗಳ ರಫ್ತುಗಳನ್ನು ಚೀನಾ ಸ್ಥಗಿತಗೊಳಿಸಿತು. ಇದು ಅಮೆರಿಕವನ್ನು ನಿಜಕ್ಕೂ ಒಂದು ಇಕ್ಕಟ್ಟಿಗೆ ಸಿಕ್ಕಿಸಿತು. ಚೀನಾದಿಂದ ಅವುಗಳನ್ನು ಪಡೆಯುವುದು ಸಾಧ್ಯವಾಗಲಿಲ್ಲ ಮಾತ್ರವಲ್ಲ, ಚೀನಾದ ಸರಬರಾಜುಗಳನ್ನು ಬದಲಾಯಿಸಲು ಬೇರೆ ಯಾವುದೇ ದೇಶದಿಂದ ಸಾಕಷ್ಟು ಪ್ರಮಾಣದಲ್ಲಿ ಅವುಗಳನ್ನು ಪಡೆಯುವುದೂ ಸಹ ಸಾಧ್ಯವಾಗಲಿಲ್ಲ. ಏಕೆಂದರೆ, ಚೀನಾದ ಉತ್ಪಾದನೆಯ ಮಟ್ಟದ ಹತ್ತಿರ ಯಾವ ದೇಶವೂ ಸುಳಿಯಲಾಗದು. ಹಾಗಾಗಿ, ಚೀನಾದಿಂದ ಅಪರೂಪದ ಭೂ–ಖನಿಜಗಳ ಪೂರೈಕೆಯ ಪುನರಾರಂಭಕ್ಕೆ ಪ್ರತಿಯಾಗಿ ಅದರೊಂದಿಗೆ ಮಾತುಕತೆ ನಡೆಸುವ ಒತ್ತಾಯಕ್ಕೆ ಅಮೆರಿಕ ಒಳಗಾಯಿತು.

ನಾವಿಲ್ಲಿ ಗಮನಿಸಬೇಕಾದ ಅಂಶವೆಂದರೆ: 2024ರಲ್ಲಿ ಯುಎಸ್ ಮಾಡಿಕೊಂಡ ಅಪರೂಪದ ಭೂ ಖನಿಜಗಳ ಆಮದಿನ ಒಟ್ಟು ಮೌಲ್ಯವು ಕೇವಲ $170 ಮಿಲಿಯನ್ ಆಗಿತ್ತು ಎಂಬುದು. 2024ರಲ್ಲಿ ಅಮೆರಿಕದ ಎಲ್ಲ ಸರಕು ಮತ್ತು ಸೇವೆಗಳ ಆಮದಿನ ಒಟ್ಟು ಮೌಲ್ಯವು 4.11 ಟ್ರಿಲಿಯನ್ ಡಾಲರ್ ಆಗಿದ್ದು, ಅಪರೂಪದ ಭೂ–ಖನಿಜಗಳ ಆಮದು ಮಾತ್ರ ಅಮೆರಿಕದ ಒಟ್ಟು ಆಮದಿನ ಸುಮಾರು ಶೇ. 0.004ರಷ್ಟಿತ್ತು. ಬಳಕೆ ಮೌಲ್ಯ ಮತ್ತು ವಿನಿಮಯ ಮೌಲ್ಯಗಳು ಬೇರೆ ಬೇರೆ ದಿಕ್ಕಿನಲ್ಲಿ ಹೋಗುತ್ತವೆ ಎಂಬುದು ಈ ಪ್ರಕರಣದಲ್ಲಿ ಇರುವುದಕ್ಕಿಂತಲೂ ಹೆಚ್ಚು ತೀಕ್ಷ್ಣವಾಗಿ ಕಾಣಿಸಿಕೊಳ್ಳುವುದು ಸಾಧ್ಯವಿಲ್ಲ: ಅಮೆರಿಕದ ಸಂದರ್ಭದಲ್ಲಿ ಆಮದುಗಳ ಕೇವಲ ಶೇ. 0.004ರಷ್ಟು ಪಾಲನ್ನು ಹೊಂದಿರುವ ಕೆಲವು ಅಪರೂಪದ ಭೂ–ಖನಿಜಗಳು ಎಲೆಟ್ರಾನಿಕ್ಸ್ ಉಪಕರಣಗಳಿಂದ ಹಿಡಿದು ಸ್ವಯಂಚಾಲಿಕ ವಾಹನಗಳವರೆಗೆ, ಗಾಳಿ ಟರ್ಬೈನ್‌ಗಳು ಮತ್ತು ಹೆಚ್ಚು ಕಾರ್ಯಕ್ಷಮತೆಯ ಮ್ಯಾಗ್ನೆಟ್‌ಗಳಿಂದ ಹಿಡಿದು ವೈದ್ಯಕೀಯ ಉಪಕರಣಗಳವರೆಗಿನ ಎಲ್ಲ ಕೈಗಾರಿಕೆಗಳಲ್ಲೂ ಒಂದು ನಿರ್ಣಾಯಕವಾದ ಪ್ರಾಮುಖ್ಯತೆಯನ್ನು ಹೊಂದಿವೆ. ಹಾಗಾಗಿ, ಅವುಗಳ ಪೂರೈಕೆಯಲ್ಲಿ ಉಂಟಾಗುವ ತಾತ್ಕಾಲಿಕ ಅಡಚಣೆ ಕೂಡ ಹೆಚ್ಚು ಕಳವಳದ ವಿಷಯವಾಗುತ್ತದೆ.

ಈ ಅಂಶವು ಸಾಮ್ರಾಜ್ಯಶಾಹಿ ವಿಸ್ತರಣೆಗೆ ಒದಗಿಸುವ ಪ್ರೇರಣೆಯೂ ಸಹ ಈ ನಿದರ್ಶನದಿಂದ ಸ್ಪಷ್ಟವಾಗುತ್ತದೆ.

ಪುಟ 15ಕ್ಕೆ

ಉಪರಾಷ್ಟ್ರಪತಿ ಸ್ಥಾನಕ್ಕೆ ದನಕರ್ ದಿಢೀರ್ ರಾಜಿನಾಮೆ: ಮುಂದಿನ ಉಪರಾಷ್ಟ್ರಪತಿ ಯಾರು?


ಉಪರಾಷ್ಟ್ರಪತಿ ಸ್ಥಾನಕ್ಕೆ ಧಂಕರ್ ರಾಜಿನಾಮೆ ನೀಡಿದ್ದಾರೆ. ಮುಂದೆ ಆ ಹುದ್ದೆಯನ್ನು ಯಾರು ಅಲಂಕರಿಸುತ್ತಾರೆ ಎಂಬುದರ ಕುರಿತು ಊಹಾಪೋಹಗಳು ಹೊರಹೊಮ್ಮುತ್ತಿವೆ. ಬಿಹಾರ ಚುನಾವಣೆಯಿಂದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ತಪ್ಪಿಸಲು ಅವರನ್ನು ಇಲ್ಲಿಗೆ ಕರೆತರಬಹುದು, ಆಂಧ್ರಪ್ರದೇಶದ ಮುಖ್ಯಮಂತ್ರಿ ಪದವಿಗೆ ನಾರಾ ಲೋಕೇಶ್ ಅವರನ್ನು ತರಬೇಕಿರುವುದರಿಂದ, ಚಂದ್ರಬಾಬು ನಾಯ್ಡು ಅವರನ್ನು ತರಬಹುದು, ಜೆ.ಪಿ. ನಡ್ಡಾ ಅವರನ್ನು ಕೂರಿಸಬಹುದು ಹೀಗೆ ನಾನಾ ರೀತಿಯ ಕಥೆಗಳು ಹರಿದಾಡುತ್ತಿವೆ. ಎಷ್ಟೇ ಕಥೆಗಳಿದ್ದರೂ ಅಂತಿಮ ನಿರ್ಧಾರವು ಮೋದಿ ಮತ್ತು ಅಮಿತ್ ಶಾ ಅವರ ತಂತ್ರಗಳು ಮತ್ತು ಆರೆಸ್ಸೆಸ್ ನಿರ್ದೇಶನದ ಮೇಲೆ ಅವಲಂಬಿತವಾಗಿರುತ್ತದೆ. ಇದು ಏನಾಗುತ್ತದೋ ಕಾದು ನೋಡೋಣ. ಆದರೆ, ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಸರ್ವಾಧಿಕಾರಿ ಮತ್ತು ಅವಕಾಶವಾದಿಯಾಗಿ ವರ್ತಿಸುವ ನಾಯಕರಿಗೆ ವಿಫಲತೆಯು ಅನಿವಾರ್ಯ ಎನ್ನುವುದನ್ನು ಜಗದೀಪ್ ಧಂಕರ್ ಮತ್ತೊಮ್ಮೆ ಸಾಬೀತು ಮಾಡಿದ್ದಾರೆ.



2025ರ ಜುಲೈ 21ರ ರಾತ್ರಿ ಅನಿರೀಕ್ಷಿತವಾಗಿ ರಾಷ್ಟ್ರಪತಿ ಭವನಕ್ಕೆ ಹೋಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಉಪರಾಷ್ಟ್ರಪತಿ ಜಗದೀಪ್ ಧಂಕರ್, ಅಷ್ಟೇ ಬೇಗನೆ ನಿರ್ಗಮಿಸಿದರು. ತಮ್ಮ ರಾಜೀನಾಮೆ ಕುರಿತು ಯಾರಾದರೂ ತಮ್ಮನ್ನು ಸಂಪರ್ಕಿಸುತ್ತಾರೆ ಎಂಬ ಅವರ ನಿರೀಕ್ಷೆಗಳು ಕೂಡ ಫಲಿಸಲಿಲ್ಲ ಎಂದು ಹೇಳಲಾಗುತ್ತದೆ. 'ನೀವು ಆರೋಗ್ಯದಿಂದ ಇರಬೇಕು ಎಂದು ಬಯಸುತ್ತೇನೆ' ಎಂದು ಪ್ರಧಾನಿ ಮೋದಿ ಟ್ವಿಟ್ ಮಾಡಿದರೇ ವಿನಃ, ರಾಜಿನಾಮೆ ವಿಚಾರವಾಗಿ ಪಶ್ಚಾತ್ತಾಪಪಡುವ ಲಕ್ಷಣ ಕಾಣುತ್ತಿಲ್ಲ. ರಾಜ್ಯಸಭೆಯಲ್ಲಿ ಯಾವುದೇ ಔಪಚಾರಿಕವಾಗಿ ಬೀಳ್ಕೊಡುಗೆಯೂ ನಡೆಯಲಿಲ್ಲ. ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಬೀಳ್ಕೊಡುಗೆ ವಿಷಯ ಪ್ರಸ್ತಾಪಿಸಿ, ಭೋಜನ ಕೂಟ ಆಯೋಜಿಸುವ ಹೇಳಿಕೆಗೆ ಕೇಂದ್ರ ಕಿವಿಗೊಡಲಿಲ್ಲ. ಕಾಂಗ್ರೆಸ್ಸಿನ ಈ ಪ್ರಸ್ತಾಪಕ್ಕೆ ಸಹಜವಾಗಿಯೇ ಧಂಕರ್ ಪ್ರತಿಕ್ರಿಯಿಸಲಿಲ್ಲ.

ಇದೆಲ್ಲದರಿಂದ ಅವರು ಕಷ್ಟದ ಪರಿಸ್ಥಿತಿಯಲ್ಲಿ ಮತ್ತು ಭಿನ್ನಾಭಿಪ್ರಾಯಗಳೊಂದಿಗೆ ಏಕಾಏಕಿ ನಿರ್ಗಮಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಆದರೂ, ಆಡಳಿತ ಪಕ್ಷಕ್ಕೆ ತೊಂದರೆ ಉಂಟುಮಾಡುವ ಯಾವುದನ್ನೂ ಮಾಡಲು ಅವರು ಬಯಸಲಿಲ್ಲ. ತಮ್ಮ ರಾಜೀನಾಮೆಗೆ ಕಾರಣವಾದ ಪರಿಸ್ಥಿತಿಗಳ ಕುರಿತಂತೆ ವಾಸ್ತವವನ್ನು ಹೇಳಲು ಅವರು ಸಿದ್ಧರಿರಲಿಲ್ಲ. ಈ ಹಿಂದೆ ಜನತಾ ದಳದ ಪರವಾಗಿ ರಾಜಸ್ಥಾನ ವಿಧಾನಸಭೆಗೆ ಆಯ್ಕೆಯಾಗಿದ್ದ ಧಂಕರ್ ಅವರು, ಕಾಂಗ್ರೆಸ್‌ನಲ್ಲಿಯೂ ಕೆಲಸ ಮಾಡಿ, ನಂತರ ಬಿಜೆಪಿ ಸೇರಿದರು. ನಂತರ ಬಂಗಾಳದ ರಾಜ್ಯಪಾಲರಾಗಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಮುಖಾಮುಖಿಯಾಗಿದ್ದಲ್ಲದೆ, ಅವರ ವಿರುದ್ಧ ನೇರ ದಾಳಿಗೆ ಕೂಡಾ ಇಳಿದರು. 2022ರಲ್ಲಿ ಉಪರಾಷ್ಟ್ರಪತಿ ಆದಾಗ, ರಾಜ್ಯಸಭೆಯ ಅಧ್ಯಕ್ಷರಾಗಿ ಪ್ರತಿ ಪ್ರಮುಖ ಸಂದರ್ಭದಲ್ಲೂ ಬಿಜೆಪಿ ಸರ್ಕಾರವನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡರು. ಕೇಂದ್ರ ಸಚಿವರನ್ನೂ ಮೀರಿ ಪ್ರತಿಪಕ್ಷಗಳ ಮೇಲೆ ವಾಗ್ದಾಳಿ ನಡೆಸಿದ ಅವರು, ಮಣಿಪುರ ಬಿಕ್ಕಟ್ಟು ಮತ್ತು ಸಂಸತ್ತಿನ ಭದ್ರತೆಯ ಉಲ್ಲಂಘನೆಯ ಬಗ್ಗೆ ಚರ್ಚೆ ನಡೆಸಬೇಕೆಂದು ವಿರೋಧ ಪಕ್ಷಗಳು ಎಷ್ಟೇ ಒತ್ತಾಯಿಸಿದರೂ, ಅದನ್ನು ಒಪ್ಪಿಕೊಳ್ಳಲು ಮೊಂಡುತನದಿಂದ ನಿರಾಕರಿಸಿದರು. ಕುಸ್ತಿಪಟು ವಿನೇಶ್ ಫೋಗಟ್ ಮೇಲೆ ದೌರ್ಜನ್ಯ ನಡೆದಾಗಲೂ, ಅದನ್ನು ಚರ್ಚಿಸಲು ನಿರಾಕರಿಸಿದ್ದಲ್ಲದೆ, "ನೀವು ಮಾತ್ರವೇ ಮಹಿಳಾ ಪರವಾದ ಪಕ್ಷವಲ್ಲ" ಎಂದು ವಿರೋಧ ಪಕ್ಷಗಳ ಮೇಲೆ ದಾಳಿ ಮಾಡಿದರು. ಅವರು ಮೋದಿಯನ್ನು ಹೊಗಳಿದ್ದಲ್ಲದೆ, ತಮ್ಮನ್ನು ತಾವು ಆರ್‌ಎಸ್‌ಎಸ್ ಶಿಷ್ಯರೆಂದು ಘೋಷಿಸಿಕೊಂಡರು.

ಧಂಕರ್ ಮತ್ತಷ್ಟು ಸುದ್ದಿ ಮಾಡಿದ್ದು ನ್ಯಾಯವ್ಯವಸ್ಥೆಯ ಮೇಲೆ ದಾಳಿ ಮಾಡುವುದರಲ್ಲಿ. ಸಂವಿಧಾನದ ಮೂಲಭೂತ ಸ್ವರೂಪದ ಬಗ್ಗೆ ಸುಪ್ರೀಂ ಕೋರ್ಟ್‌ನ ಐತಿಹಾಸಿಕ ತೀರ್ಪನ್ನು ಅವರು ಟೀಕಿಸಿದರು. ರಾಜ್ಯಪಾಲರ ನಡವಳಿಕೆಯ ಬಗ್ಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಸಹ ಅವರು ಟೀಕಿಸಿದರು. ಬಿಜೆಪಿಯ ಮೇಲೆ ಅಷ್ಟೊಂದು ಪ್ರಭಾವ ಹೊಂದಿದ್ದ ವ್ಯಕ್ತಿಯ ನಿರ್ಗಮನ ಆಳುವವವರ ಇಂತಹ ನಿರ್ಲಕ್ಷ್ಯದೊಂದಿಗೆ ಏಕೆ ಸಂಭವಿಸಿತು?



ಹಿಂದಿನ ಅನುಭವಗಳು

ಇಂತಹ ಪ್ರಶ್ನೆಗಳಿಗೆ ಉತ್ತರ ಬೇಕೆಂದರೆ, ನಾವು ಸಾಂವಿಧಾನಿಕ ನಿಬಂಧನೆಗಳು, ರಾಜಕೀಯ ವಾಸ್ತವಗಳು ಅವುಗಳ ಚೈತನ್ಯವನ್ನು ಅರ್ಥಮಾಡಿಕೊಳ್ಳಬೇಕು. ಉಪರಾಷ್ಟ್ರಪತಿ ಸ್ಥಾನವು ಅಲಂಕಾರಿಕವಾಗಿದ್ದರೂ, ಅಧ್ಯಕ್ಷರಾಗಿ ರಾಜ್ಯಸಭೆಯನ್ನು ನಡೆಸುವುದು ಒಂದು ಬಹುಮುಖ್ಯ ಅಂಶವಾಗಿದೆ. ರಾಷ್ಟ್ರಪತಿಯವರ ಮರಣವೇನಾದರೂ ಸಂಭವಿಸಿದರೆ, ತಾತ್ಕಾಲಿಕವಾಗಿ ರಾಷ್ಟ್ರಪತಿಯವರ ಜವಾಬ್ದಾರಿಗಳನ್ನು ಸಹ ಆ ಪದವಿಯಲ್ಲಿ ಇರುವವರು ನಿರ್ವಹಿಸಬೇಕಾಗುತ್ತದೆ. ಹಿಂದೆ ವಿ.ವಿ.ಗಿರಿ, ಬಿ.ಡಿ.ಜತ್ತಿ ಈ ರೀತಿಯಲ್ಲಿ ರಾಷ್ಟ್ರಪತಿಗಳ ಜವಾಬ್ದಾರಿಗಳನ್ನು ನಿರ್ವಹಿಸಿದರು. ಫಕ್ರುದ್ದೀನ್ ಅಲಿ ಅಹ್ಮದ್ ಅವರ ಹಠಾತ್ ಮರಣದ ಕಾರಣ ತುರ್ತು ಪರಿಸ್ಥಿತಿಯ ನಂತರ ಜನತಾ ಸರ್ಕಾರ ರಚನೆಯಾದಾಗ, ಬಿ.ಡಿ.ಜತ್ತಿ ಆ ಜವಾಬ್ದಾರಿಗಳನ್ನು ನಿರ್ವಹಿಸಿದರು. ಅನೇಕ ಸಂದರ್ಭಗಳಲ್ಲಿ, ಉಪರಾಷ್ಟ್ರಪತಿ ಆಗಿದ್ದವರನ್ನು ಮುಂದಿನ ರಾಷ್ಟ್ರಪತಿಗಳಾಗಿ ಸರ್ವಾನುಮತದಿಂದ ಆಯ್ಕೆ ಮಾಡುವುದನ್ನು ನಾವು ನೋಡಿದ್ದೇವೆ.

ಸರ್ವಪಲ್ಲಿ ರಾಧಾಕೃಷ್ಣನ್, ಜಾಕಿರ್ ಹುಸೇನ್, ವಿ.ವಿ.ಗಿರಿ, ಆರ್.ವೆಂಕಟರಾಮನ್, ಶಂಕರ್ ದಯಾಳ್ ಶರ್ಮಾ ಅವರಂತಹ ಜನರು ಈ ರೀತಿಯಾಗಿ ಅತ್ಯುನ್ನತ ಹುದ್ದೆಗೆ ಬಂದಿದ್ದಾರೆ. ಉಪರಾಷ್ಟ್ರಪತಿ ಸ್ಥಾನವನ್ನು ಹೊಂದಿರುವವರು ಪ್ರಬುದ್ಧತೆ ಮತ್ತು ಗೌರವದಿಂದ ವರ್ತಿಸುವುದು ವಾಡಿಕೆ. ಕೆಲವೊಮ್ಮೆ ಹಿನ್ನಡೆಗಳು ಎದುರಾದಾಗಲೂ, ಆಳುವ ಸರ್ಕಾರದ ನಾಯಕರು ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತಿದ್ದರು. ನೆಹರೂ ಅವರ ಅವಧಿಯಲ್ಲಿ ರಾಧಾಕೃಷ್ಣನ್ ಉಪರಾಷ್ಟ್ರಪತಿ ಆಗಿದ್ದಾಗ, ಅವರ ವಿರುದ್ಧ ಕಾಂಗ್ರೆಸ್ಸಿನ ಕೆಲವು ನಾಯಕರು ಟೀಕೆ ಮಾಡಿದರು. ಅವರನ್ನು ನೆಹರೂ ಖಂಡಿಸದೇ ಇದ್ದುದಕ್ಕೆ ರಾಧಾಕೃಷ್ಣನ್ ಸ್ವಲ್ಪ ಅಸಮಾಧಾನಗೊಂಡಿದ್ದರು ಎಂಬ ವರದಿಗಳಿದ್ದವು. ಆದರೆ ನೆಹರೂ ಸಾಮಾನ್ಯ ಸಂಬಂಧಗಳನ್ನು ಉಳಿಸಿಕೊಂಡಿದ್ದಲ್ಲದೆ, ತಮ್ಮ ಸಮ್ಮುಖದಲ್ಲಿ ಯಾರೂ ಆ ರೀತಿ ಹೇಳಿಲ್ಲ ಎಂದು ಹೇಳುವ ಮೂಲಕ ತಪ್ಪುಗ್ರಹಿಕೆಯನ್ನು ನಿವಾರಿಸಿದರು.

ಶಂಕರ್ ದಯಾಳ್ ಶರ್ಮಾ ರಾಜ್ಯಸಭೆಯ ಅಧ್ಯಕ್ಷತೆ ವಹಿಸಿದ್ದಾಗ, ಆಗಿನ ಪ್ರಧಾನಿ ರಾಜೀವ್ ಗಾಂಧಿಯವರ ಸಮ್ಮುಖದಲ್ಲಿಯೇ ಕಾಂಗ್ರೆಸ್ ನಾಯಕರ ಪ್ರತಿಭಟನೆಯನ್ನು ನೋಡಿ ಅವರು ಅಸಮಾಧಾನಗೊಂಡು ಕಣ್ಣೀರು ಹಾಕಿದರು. ಆಗಲೂ, ಕೇಂದ್ರ ನಾಯಕರು ಹೊಂದಾಣಿಕೆಗಳನ್ನು ಮಾಡಿಕೊಂಡರು ಮಾತ್ರವಲ್ಲದೆ, ನಂತರ, ಎಡಪಕ್ಷಗಳ ಬೆಂಬಲದೊಂದಿಗೆ ಅವರನ್ನು ರಾಷ್ಟ್ರಪತಿಯನ್ನಾಗಿಯೂ ಮಾಡಿದರು.

ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ಅವಧಿಯಲ್ಲಿ ಸಂಘಪರಿವಾರದ ನಾಯಕರು ಬಾಬರಿ ಮಸೀದಿ ಧ್ವಂಸದಲ್ಲಿ ಭಾಗಿಯಾಗಿದ್ದಾಗ, ಪ್ರಧಾನ ಮಂತ್ರಿಯವರಿಗಿಂತ ಮೊದಲೇ ಪ್ರತಿಕ್ರಿಯಿಸುವ ಮೂಲಕ ಶರ್ಮಾ ತಮ್ಮ ಸ್ಥಾನದ ಘನತೆಯನ್ನು ಕಾಪಾಡಿಕೊಂಡರು. ವಾಜಪೇಯಿ ಆಡಳಿತಾವಧಿಯಲ್ಲಿ, ಉಪರಾಷ್ಟ್ರಪತಿಯಾಗಿದ್ದ ಕೃಷ್ಣಕಾಂತ್ ಅವರನ್ನು ರಾಷ್ಟ್ರಪತಿಯನ್ನಾಗಿ ಮಾಡಲು ಅವರೇ ಪ್ರಸ್ತಾಪಿಸಿದ ನಂತರ, ಹಠಾತ್ ಬದಲಾವಣೆಯಿಂದ ಅವರು ಅಸಮಾಧಾನಗೊಂಡು ಅನಾರೋಗ್ಯಕ್ಕೆ ಒಳಗಾದರು. (ಕೃಷ್ಣಕಾಂತ್ ಕೂಡ ಜುಲೈ 27, 2002 ರಂದು ಇದ್ದಕ್ಕಿದ್ದಂತೆ ನಿಧನರಾದರು).

ಹಮೀದ್ ಅನ್ಸಾರಿ ಉಪರಾಷ್ಟ್ರಪತಿ ಆಗಿದ್ದಾಗ, ಸಂಘಪರಿವಾರದ ಜನ ಅವರ ವಿರುದ್ಧ ಕೋಮುವಾದಿ ವಿಷ ಪ್ರಚಾರವನ್ನು ಮಾಡಿ ತೀವ್ರವಾಗಿ ಟೀಕಿಸಿದರು.



ನಮಸ್ಕಾರ! ವೈದ್ಯಕೀಯಕಾರಣಕ್ಕೆ
ವ್ಯಂಗ್ಯಚಿತ್ರಕೃಪೆ: ಮಂಜುಲ್ @ಫೇಸ್ಬುಕ್

ವೆಂಕಯ್ಯ ನಾಯ್ಡು ಒಂದು ಹಂತದಲ್ಲಿ ಮೋದಿಗಿಂತ ಹಿರಿಯರಾಗಿದ್ದರೂ, ಆ ಸ್ಥಾನವನ್ನು ಮಾತ್ರ ಅವರು ಆನಂದಿಸಿರಲಿಲ್ಲ ಎಂದು ಹೇಳಲಾಗುತ್ತಿದೆ. ಅಭಿಮಾನಿಗಳು ಎಷ್ಟೇ ಕಥೆಗಳನ್ನು ಬಿಟ್ಟರೂ, ಅವರಿಗೆ ಮುಂದಿನ ಅತ್ಯುನ್ನತ ಸ್ಥಾನ ಸಿಗಲಿಲ್ಲ. ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ರಾಮನಾಥ್ ಕೋವಿಂದ್ ಅವರಿಗೆ 'ಏಕಕಾಲದಲ್ಲಿ ಚುನಾವಣೆ' ವರದಿ ಮಾಡುವ ಕೆಲಸವನ್ನು ವಹಿಸುವ ಮೂಲಕ, ಮೋದಿ ತಮ್ಮ ಮಾತೇ ಕಾನೂನು ಎಂದು ಸ್ಪಷ್ಟಪಡಿಸಿದರು. ➚

ಸಂಸತ್ತಿನ ನೂತನ ಕಟ್ಟಡಗಳ ಉದ್ಘಾಟನೆಯ ಸಮಯದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕರೆಯದೇ ನಿರ್ಲಕ್ಷ್ಯ ಮಾಡಿದರು. ಧಂಕರ್ ಅವರ ಕಥೆ ಅದಕ್ಕೆ ವಿಭಿನ್ನವಾಗಿದೆ. ಮೋದಿಯವರ ಆಡಳಿತದಲ್ಲಿ ಎಲ್ಲ ವ್ಯವಸ್ಥೆಗಳಂತೆ ಎರಡು ಅತ್ಯುನ್ನತ ವ್ಯವಸ್ಥೆಗಳು ಕೂಡ ಅವರ ಇಚ್ಛೆಯಂತೆಯೇ ನಡೆಯಬೇಕಾಗಿದೆ ಎಂಬುದನ್ನು ಅನುಭವಗಳು ತೋರಿಸುತ್ತವೆ. ಈಗ ಉಪರಾಷ್ಟ್ರಪತಿ ಸ್ಥಾನದಿಂದ ಕೆಳಗಿಳಿದ ಧನಕರ್ ತನಗೆ ಬೇಕಾದಂತೆ ಹಾಡಿದಷ್ಟೂ ಕಾಲ ಮುಂದೆ ತಳ್ಳಿ, ಸ್ವಲ್ಪ ವ್ಯತ್ಯಾಸ ಕಂಡ ತಕ್ಷಣವೇ ಊಟದಲ್ಲಿನ ಕರಿಬೇವಿನ ಎಲೆಗಳನ್ನು ತೆಗೆದು ಎಸೆದಂತೆ ಎಸೆದರು. ಇಷ್ಟಕ್ಕೂ ಅವರ ನಡುವೆ ಯಾವ ವ್ಯತ್ಯಾಸವಿದೆ?

ಅವಕಾಶವಾದಿ ನಾಯಕರಿಗೆ ವಿಫಲತೆಯು ಅನಿವಾರ್ಯ

ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಸರ್ವಾಧಿಕಾರಿ ಮತ್ತು ಅವಕಾಶವಾದಿಯಾಗಿ ವರ್ತಿಸುವ ನಾಯಕರಿಗೆ ವಿಫಲತೆಯು ಅನಿವಾರ್ಯ ಎನ್ನುವುದನ್ನು ಜಗದೀಪ್ ಧಂಕರ್ ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಸ್ವತಃ ಆರ್‌ಎಸ್‌ಎಸ್ ಹಿನ್ನೆಲೆಯಿಲ್ಲದ ಅವರು ಆರೆಸ್ಸೆಸ್ ಅನ್ನು ಮೆಚ್ಚಿಸಲು ತಮ್ಮ ಶಕ್ತಿಮೀರಿ ನಡೆದುಕೊಂಡರು. ಅಲಂಕಾರಿಕವಾದ ಉಪರಾಷ್ಟ್ರಪತಿ ಸ್ಥಾನವನ್ನು ಬಹಳ ಶಕ್ತಿಶಾಲಿಯಾದುದು ಎಂದು ಭ್ರಮಿಸಿ ಹದ್ದುಮೀರಿ ವರ್ತಿಸಿದರು. ಲೋಕಸಭೆಗಿಂತ ಸ್ವಲ್ಪ ಭಿನ್ನವಾಗಿ ರಾಜ್ಯಸಭೆಯಲ್ಲಿನ ಕಾರ್ಯವಿಧಾನವು ಮಾದರಿಯಾಗಿರುತ್ತದೆ. ಆದರೆ ಹಲವು ಬಾರಿ ಅವರು ರಾಜ್ಯಸಭೆಯಲ್ಲಿ ಉದ್ವಿಗ್ನತೆಗೆ ಕಾರಣರಾಗಿದ್ದಾರೆ. ನ್ಯಾಯಾಂಗ ಮತ್ತು ಸಾಂವಿಧಾನಿಕ ಪರಿಶೀಲನಾ ಅಧಿಕಾರವನ್ನು ಸಹ ಪ್ರಶ್ನೆ ಮಾಡಿದರು. ಇದಕ್ಕೆ ಆಡಳಿತ ಪಕ್ಷದಿಂದ ಬೆಂಬಲ ಸಿಗದಿದ್ದಾಗ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ವ್ಯಂಗ್ಯಚಿತ್ರಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ವೈದ್ಯಕೀಯವಾಗಿ ಅರ್ಹರಾಗಿರಬೇಕು ಮತ್ತು ಬೆನ್ನೆಲುಬು ಬಾಗುವಂತಿರಬೇಕು

ನ್ಯಾಯಮೂರ್ತಿಗಳ ನೇಮಕಾತಿ, ಸುಪ್ರೀಂ ಕೋರ್ಟ್ ತೀರ್ಪುಗಳಂತಹ ವಿಷಯಗಳ ಮೇಲೆ ರಾಜಕೀಯ ತಂತ್ರಗಳನ್ನು ಮಾಡಬಹುದಾದರೂ, ನಿರಂತರ ನೇರದಾಳಿ ಮಾಡುವುದು ಸೂಕ್ಷ್ಮ ವಿಷಯವಾಗಿ ಮಾರ್ಪಟ್ಟಿವೆ. ಭ್ರಷ್ಟಾಚಾರಕ್ಕಾಗಿ ನ್ಯಾಯಮೂರ್ತಿ ವರ್ಮಾ ಅವರನ್ನು ದೋಷಾರೋಪಣೆ ಮಾಡಲು ಒಮ್ಮತವಿದ್ದರೂ, ವಿಶೇಷ ಕ್ರಮವನ್ನು ತೆಗೆದುಕೊಳ್ಳಲು ಅವರು ಇಷ್ಟಪಡಲಿಲ್ಲ. ಅವರು ತಮ್ಮ ಶ್ರೇಷ್ಠತೆಯನ್ನು ಪ್ರದರ್ಶಿಸಲು ಬಯಸಿದರೆ, ತಮ್ಮ ಸಮ್ಮುಖದಲ್ಲಿಯೇ ತಮ್ಮ ದೋಷಾರೋಪಣೆ ನಡೆಯಬೇಕೆಂದು ಧಂಕರ್ ಬಯಸಿದ್ದರು. ಲೋಕಸಭೆಯಲ್ಲಿ ಸರ್ಕಾರವೇ ಈ ನಿರ್ಣಯವನ್ನು ತರಬೇಕು. ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಭಾಷಣದೊಂದಿಗೆ ಮೊದಲ ಹೆಜ್ಜೆ ಇಡುವುದು ಮೋದಿ ಸರ್ಕಾರಕ್ಕೆ ಅರಗಿಸಿಕೊಳ್ಳಲು ಸಾಧ್ಯವಾಗದ ಸಂಗತಿಯಾಗಿ ಪರಿಣಮಿಸಿದೆ. ಅದನ್ನು ತಪ್ಪಿಸುವ ಮೂಲಕ, ಆ ನಿರ್ಣಯವನ್ನು ಈಗ ನಿಷ್ಪ್ರಯೋಜಕವೆಂದು ಲೋಕಸಭೆಯಲ್ಲಿಯೇ ಮಂಡಿಸುತ್ತಿದ್ದಾರೆ. ಇದೇ ಸಮಯದಲ್ಲಿ, ಬಿಜೆಪಿ ಅಧ್ಯಕ್ಷೀಯ ಚುನಾವಣೆಯ ವಿಳಂಬ, ಅಲ್ಲೊಂದು ಇಲ್ಲೊಂದು ಪ್ರಮುಖ ನಾಯಕರ ಬದಲಾವಣೆಯಿಂದ ಉಪರಾಷ್ಟ್ರಪತಿ ಹುದ್ದೆ ಖಾಲಿಯಾದರೆ ಒಳಿತೆಂದು ಅವರು ತಂತ್ರ ಹೆಣೆದಿದ್ದಾರೆ.

ಧಂಕರ್ ಅವರ ಕಾರ್ಯವೈಖರಿಯನ್ನು ದೋಷಾರೋಪಣೆಗೆ ಒಳಪಡಿಸುವ ಪ್ರಯತ್ನ ನಡೆದಿತ್ತು ಎನ್ನಲಾಗಿದೆ. ಹೇಗಾದರೂ ಮಾಡಿ ಕೆಳಗಿಳಿಸುತ್ತಾರೆ, ತಾನಾಗಿಯೇ ರಾಜಿನಾಮೆ ನೀಡಿ ಗೌರವ ಕಾಪಾಡಿಕೊಳ್ಳುವುದು ಸರಿ ಎಂದು ಅವರು ಭಾವಿಸಿದ್ದಾರೆಂದು ತೋರುತ್ತದೆ. ದೇಶದ ಎರಡನೇ ಅತ್ಯುನ್ನತ ಸಾಂವಿಧಾನಿಕ ಹುದ್ದೆಗೂ ಏಕಪಕ್ಷೀಯ ವಿಧಾನ ಅನುಸರಿಸುತ್ತಿರುವುದು ಇಲ್ಲಿ ಕಳವಳಕಾರಿಯಾಗಿದೆ.

ಮುಂದೇನು?

ಜಗದೀಪ್ ಧಂಕರ್ ಅವರ ರಾಜೀನಾಮೆಯಿಂದ ತೆರವಾದ ಉಪರಾಷ್ಟ್ರಪತಿ ಸ್ಥಾನಕ್ಕೆ ತ್ವರಿತವಾಗಿ ಚುನಾವಣೆ ನಡೆಸುವುದಕ್ಕೆ ಚುನಾವಣಾ ಆಯೋಗವು ರಾಜ್ಯಸಭೆಯ ಕಾರ್ಯದರ್ಶಿಯನ್ನು ಉಸ್ತುವಾರಿಯಾಗಿ ನೇಮಿಸಿದೆ. ಸಂವಿಧಾನದ 63ನೇ ವಿಧಿಯು ಉಪರಾಷ್ಟ್ರಪತಿ ಕುರಿತಂತೆ, 68ನೇ ವಿಧಿಯು ಆ ಹುದ್ದೆಗೆ ಚುನಾವಣೆಯ ಕರಿತಂತೆ ಹೇಳುತ್ತದೆ. ಆದರೆ, ರಾಷ್ಟ್ರಪತಿಗಳ ವಿಷಯದಲ್ಲಿ ಆರು ತಿಂಗಳೊಳಗೆ ಚುನಾವಣೆಗಳನ್ನು ಪೂರ್ಣಗೊಳಿಸಬೇಕು ಎಂದು ಹೇಳುವ ಸಂವಿಧಾನವು, ಉಪರಾಷ್ಟ್ರಪತಿಗಳ ವಿಷಯದಲ್ಲಿ "ಸಾಧ್ಯವಾದಷ್ಟು ತ್ವರಿತವಾಗಿ (ASAP)" ಎಂದು ಮಾತ್ರ ಹೇಳುತ್ತದೆ.

ಮುಂದೆ ಯಾರು

ಮುಂದೆ ಯಾರು ಆ ಹುದ್ದೆಯನ್ನು ಅಲಂಕರಿಸುತ್ತಾರೆ ಎಂಬುದರ ಕುರಿತು ಊಹಾಪೋಹಗಳು ಮತ್ತು ವಿಭಿನ್ನ ದೃಷ್ಟಿಕೋನಗಳು ಹೊರಹೊಮ್ಮುತ್ತಿವೆ. ಬಿಹಾರ ಚುನಾವಣೆಯಿಂದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ತಪ್ಪಿಸಲು ಅವರನ್ನು ಇಲ್ಲಿಗೆ ಕರೆತರಬಹುದು ಎಂದು, ಆಂಧ್ರಪ್ರದೇಶದ ಮುಖ್ಯಮಂತ್ರಿ ಪದವಿಗೆ ನಾರಾ ಲೋಕೇಶ್ ಅವರನ್ನು ತರಬೇಕಿರುವುದರಿಂದ, ಚಂದ್ರಬಾಬು ನಾಯ್ಡು ಅವರನ್ನು ತರಬಹುದು ಎಂದು ನಾನಾ ರೀತಿಯ ಕಥೆಗಳು ಹರಿದಾಡುತ್ತಿವೆ. ಬಿಜೆಪಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುತ್ತಿರುವ ಜೆ.ಪಿ.ನಡ್ಡಾ ಅವರನ್ನು ಕೂರಿಸಬಹುದು ಎಂದು, ಅಸಲಿಗೆ ಅದಕ್ಕಾಗಿಯೇ ಈ ಬಿಕ್ಕಟ್ಟು ಸೃಷ್ಟಿಯಾಯಿತು ಎಂಬುದು ಮತ್ತೊಂದು ಕಥನ. ಎಷ್ಟೇ ಕಥೆಗಳಿದ್ದರೂ ಅಂತಿಮ ನಿರ್ಧಾರವು ಮೋದಿ ಮತ್ತು ಅಮಿತ್ ಶಾ ಅವರ ತಂತ್ರಗಳು ಮತ್ತು ಆರೆಸ್ಸೆಸ್ ನಿರ್ದೇಶನದ ಮೇಲೆ ಅವಲಂಬಿತವಾಗಿರುತ್ತದೆ. ಎನ್‌ಡಿಎ ಪಾಲುದಾರರಿಗೆ ಯಾರಿಗೂ ಈ ಪದವಿ ನೀಡುವ ಉದ್ದೇಶ ಇಲ್ಲ ಎಂದೂ ಬಿಜೆಪಿ ಮೂಲಗಳು ಸ್ಪಷ್ಟವಾಗಿ ಘೋಷಿಸಿವೆ.

ಈ ಹಿಂದೆ ಮೋದಿ ಜತೆ ಭಿನ್ನಾಭಿಪ್ರಾಯ ಹೊಂದಿ ಹೊರಹೋಗಿದ್ದ ಗೋವಿಂದಾಚಾರ್ಯ, ಕಲ್ಯಾಣ್ ಸಿಂಗ್, ಸತ್ಯಪಾಲ್ ಮಲಿಕ್, ಯಶವಂತ್ ಸಿನ್ಹಾ ಮತ್ತು ವೆಂಕಯ್ಯ ನಾಯ್ಡು ಅವರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿಲ್ಲ. ಮತ್ತೊಂದೆಡೆ, ಹೊರಗಿನಿಂದ ಬಂದ ವಲಸೆ ನಾಯಕರಿಗೆ ದೊಡ್ಡ ಜವಾಬ್ದಾರಿಗಳನ್ನು ನೀಡುವುದರ ಬಗ್ಗೆ ಅಸಮಾಧಾನದ ಭಾವನೆ ಇದೆ.

ಇಲ್ಲದಿದ್ದರೆ, ಆರಿಫ್ ಮೊಹಮ್ಮದ್ ಖಾನ್, ಜ್ಯೋತಿರಾದಿತ್ಯ ಸಿಂಧಿಯಾ, ಹೇಮಂತ್ ಬಿಸ್ವ ಶರ್ಮಾ ಅವರಂತಹ ಜನರು ಸಹ ಚೆನ್ನಾಗಿ ಹೊಂದಿಕೊಂಡಾರು. ಈ ಲೆಕ್ಕಾಚಾರಗಳ ಆಧಾರದ ಮೇಲೆ, ಬಿಜೆಪಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳು ಸಂಘ ಪರಿವಾರಕ್ಕೆ ನಿಷ್ಠೆ ತೋರಿಸಿದವರಿಗೆ ಹೋಗುತ್ತವೆ ಎಂದು ದೃಢವಾಗಿ ಹೇಳಬಹುದು. ಉಪರಾಷ್ಟ್ರಪತಿಯವರನ್ನು ಆಯ್ಕೆಮಾಡುವುದು ಉಭಯ ಸದನಗಳ ಸದಸ್ಯರು ಮಾತ್ರ. ಎನ್‌ಡಿಎ–ಬಿಜೆಪಿಗೆ ಸ್ಪಷ್ಟವಾದ ಮೇಲುಗೈ ಇದೆ. ಅದಕ್ಕಾಗಿಯೇ ಇದು ದೊಡ್ಡ ರಾಜಕೀಯ ಸಂಚಲನವಾಗದೇ ಇರಬಹುದು. ವಿರೋಧ ಪಕ್ಷಗಳು, ವಿಶೇಷವಾಗಿ 'ಇಂಡಿಯಾ' ವೇದಿಕೆ ಏನು ಮಾಡುತ್ತದೆ? ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ. 75 ವರ್ಷಗಳ ನಿವೃತ್ತಿ ಕಥೆಗಳ ನಂತರವೂ, ಬಿಜೆಪಿಯಲ್ಲಿ ನಮೋ ಸೂತ್ರ ಇನ್ನೂ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಧಂಕರ್ ಪ್ರಸಂಗ ಸಾಬೀತುಪಡಿಸಿದೆ.

ಆಧಾರ: ನವತೆಲಂಗಾಣ

ಖನಿಜಗಳು ಮತ್ತು ಸಾಮ್ರಾಜ್ಯಶಾಹಿ...

ಪುಟ 13 ರಿಂದ...

ಅಪರೂಪದ ಭೂ–ಖನಿಜಗಳ ಪೂರೈಕೆಗಾಗಿ ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ಅಮೆರಿಕವು ಗ್ರೀನ್‌ಲ್ಯಾಂಡ್‌ನಂತಹ ಇತರ ಸಂಭಾವ್ಯ ಪೂರೈಕೆ ಮೂಲಗಳನ್ನು ಅನ್ವೇಷಿಸುತ್ತಿದೆ. ಗ್ರೀನ್‌ಲ್ಯಾಂಡ್‌ನ ಮೇಲೆ ಅಮೆರಿಕ ಹೊಂದಿರುವ ಆಸಕ್ತಿಯು ಅಪರೂಪದ ಭೂ–ಖನಿಜಗಳಿಗೆ ಮಾತ್ರವಲ್ಲದೆ, ಇತರ ಖನಿಜ ಉತ್ಪನ್ನಗಳ ಇಡೀ ಶ್ರೇಣಿಯ ಮೇಲೆ ಇದೆ. ಆದರೆ, ಗ್ರೀನ್‌ಲ್ಯಾಂಡ್ ಮೇಲಿನ ಈ ಸಾಮ್ರಾಜ್ಯಶಾಹಿ ಅನ್ವೇಷಣೆಗೆ ಚೀನಾದ ಅಪರೂಪದ ಭೂ–ಖನಿಜಗಳ ಪೂರೈಕೆಯ ತಾತ್ಕಾಲಿಕ ಅಡಚಣೆಯು ಒಂದು ಮೊನಚನ್ನು ನೀಡಿದೆ. ಯಾವ ಪರ್ಯಾಯ ಪೂರೈಕೆ ಮೂಲಗಳೂ ಸಹ ಚೀನಾವನ್ನು ಸಂಪೂರ್ಣವಾಗಿ ಹಿಂದಿಕ್ಕುವುದು ಸಾಧ್ಯವಿಲ್ಲ. ಏಕೆಂದರೆ, ಚೀನಾವು ವಿಶ್ವದ ಅಪರೂಪದ ಭೂ–ಖನಿಜಗಳ ಅರ್ಧದಷ್ಟು ನಿಕ್ಷೇಪಗಳನ್ನು ಹೊಂದಿದೆ. ಆದರೆ, ಈ ಉದಾಹರಣೆಯು ಬಂಡವಾಳಶಾಹಿ ಸಾಮ್ರಾಜ್ಯಶಾಹಿ ವಿಸ್ತರಣೆಗೆ ಒಂದು ನಿರ್ಣಾಯಕ ಪ್ರೇರಣೆ ಇದೆ ಎಂಬುದನ್ನು ವಿಷದಪಡಿಸುತ್ತದೆ.

ಕಚ್ಚಾ ವಸ್ತುಗಳ ಅನ್ವೇಷಣೆಯಲ್ಲಿ

ಖಚಿತವಾಗಿ ಹೇಳಬೇಕೆಂದರೆ, ಇದೊಂದು ಮಾತ್ರವೇ ಪ್ರೇರಣೆಯಲ್ಲ. ಸಾಮ್ರಾಜ್ಯಶಾಹಿಯ ಮಾರುಕಟ್ಟೆ ಉದ್ದೇಶವನ್ನು ರೋಸಾ ಲಕ್ಸೆಂಬರ್ಗ್ ಒತ್ತಿ ಹೇಳಿದ್ದುದು ಸರಿಯಾಗಿಯೇ ಇದೆ. ಮೆಟ್ರೊಪಾಲಿಟನ್ ಬಂಡವಾಳಶಾಹಿ ದೇಶಗಳ ನಿರಂತರ ಬಂಡವಾಳ ಸಂಗ್ರಹಣೆಯು ಅದರ ವ್ಯಾಪ್ತಿಯ ಹೊರಗಡೆ ಇರುವ ಬಂಡವಾಳಶಾಹಿ–ಪೂರ್ವ ಮಾರುಕಟ್ಟೆಗಳಿಗೆ ಪ್ರವೇಶಿಸದ ಹೊರತು ಅಸಾಧ್ಯ ಎಂಬುದು ಒಂದು ವಾಸ್ತವಾಂಶ. ಅದಕ್ಕಾಗಿ ಈ ಹೊರಗಿನ ಪ್ರದೇಶಗಳ ಮೇಲೆ ಸಾಮ್ರಾಜ್ಯಶಾಹಿ ಆಕ್ರಮಣಗಳು ಅಗತ್ಯವಾಗುತ್ತವೆ. ನಿಜ, ಬಂಡವಾಳಶಾಹಿ–ಪೂರ್ವ ಮಾರುಕಟ್ಟೆಗಳನ್ನು ಹೊರತುಪಡಿಸಿದರೆ, ಬಂಡವಾಳಶಾಹಿ ವಲಯವು ಬಯಸುವ ಬಾಹ್ಯ ಉತ್ತೇಜಕಗಳು ಇರುವುದು ಸಾಧ್ಯವಿದೆ. ಉದಾಹರಣೆಗೆ, ಬಂಡವಾಳಶಾಹಿ ಉತ್ಪಾದನಾ ವಿಧಾನದೊಳಗಿರುವ ಬಂಡವಾಳಶಾಹಿ ಪ್ರಭುತ್ವದಿಂದ ಉಂಟಾಗುವ ಬೇಡಿಕೆ. ಜಾಗತೀಕರಣದ ಯುಗದಲ್ಲಿ ಈ ಪರ್ಯಾಯ ಉತ್ತೇಜಕದ ಪ್ರಾಮುಖ್ಯತೆ ಕೂಡ ಕ್ಷೀಣಿಸುತ್ತಿದೆ. ಆದರೂ, ಮೆಟ್ರೊಪಾಲಿಟನ್ ದೇಶಗಳೊಳಗೆ ಬಂಡವಾಳಶಾಹಿಗೆ ಅಗತ್ಯವಿರುವ ಎಲ್ಲ ಕಚ್ಚಾ ವಸ್ತುಗಳ ಪರ್ಯಾಯ ಮೂಲಗಳು ಇರುವುದು ಸಾಧ್ಯವಿಲ್ಲ. ಖನಿಜಗಳೂ ಸೇರಿದಂತೆ ಕಚ್ಚಾ ವಸ್ತುಗಳ ಅನ್ವೇಷಣೆಯು ಬಂಡವಾಳಶಾಹಿ ಸಾಮ್ರಾಜ್ಯಶಾಹಿಗೆ ಒಂದು ಶಾಶ್ವತವಾದ ಉದ್ದೇಶವನ್ನು ಒದಗಿಸುತ್ತದೆ.

ಜಾಗತಿಕ ದಕ್ಷಿಣದ ದೇಶಗಳ ವಿರುದ್ಧ ಮುಂದುವರಿದ ಬಂಡವಾಳಶಾಹಿ ದೇಶಗಳು ನಿಜಕ್ಕೂ ಒಂದು ತೀವ್ರ ಸ್ವರೂಪದ ಹೋರಾಟವನ್ನು ಆರಂಭಿಸಿರುವುದು ಆಶ್ಚರ್ಯವೇನಲ್ಲ. ಏಕೆಂದರೆ, ರಾಜಕೀಯ ಅಪ–ವಸಾಹತೀಕರಣದ ತರುವಾಯ, ತಮ್ಮ ಖನಿಜ ಸಂಪತ್ತೂ ಸೇರಿದಂತೆ ತಮ್ಮ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವ ಮೂಲಕ ಆರ್ಥಿಕವಾಗಿಯೂ ಸಹ ವಸಾಹತೀಕರಣವನ್ನು ನಿವಾರಿಸಲು ಜಾಗತಿಕ ದಕ್ಷಿಣದ ದೇಶಗಳು ಪ್ರಯತ್ನಿಸಿದವು. ಇರಾನ್‌ನಲ್ಲಿ ಮೊಸಾಡೆಗ್, ಗ್ವಾಟೆಮಾಲಾದಲ್ಲಿ ಅರ್ಬೆನ್ಜ್, ಚಿಲಿಯಲ್ಲಿ ಅಲೆಂದೆ ಮತ್ತು ಕಾಂಗೋದಲ್ಲಿ ಲುಮುಂಬಾ ಇವರುಗಳ ವಿರುದ್ಧ ಸಾಮ್ರಾಜ್ಯಶಾಹಿಯು ನಡೆಸಿದ ದಂಗೆಗಳು, ಹೆಚ್ಚಿನ ಸಂದರ್ಭಗಳಲ್ಲಿ, ಖನಿಜ ಸಂಪತ್ತೂ ಸೇರಿದಂತೆ ತಮ್ಮ ದೇಶಗಳ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವ ಉದ್ದೇಶ ಹೊಂದಿದ್ದ ಈ ನಾಯಕರ ಯೋಜನೆಗಳೊಂದಿಗೆ ಸಂಬಂಧ ಹೊಂದಿವೆ.

ಜಾಗತಿಕ ದಕ್ಷಿಣದ ದೇಶಗಳ ಮೇಲೆ ಹೇರಿದ ನವ ಉದಾರವಾದಿ ಆಳ್ವಿಕೆಯಡಿಯಲ್ಲಿ ಜಾಗತಿಕ ದಕ್ಷಿಣದ ದೇಶಗಳ ಅನೇಕ ಪ್ರಕರಣಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣವು ಮತ್ತೆ ಮೆಟ್ರೊಪಾಲಿಟನ್ ಬಂಡವಾಳಕ್ಕೆ ದಕ್ಕಿದೆ. ಇದು ಸಾಮ್ರಾಜ್ಯಶಾಹಿ ಏರ್ಪಾಟಿಗೆ ಹೆಚ್ಚಿನ ಸ್ಥಿರತೆಯನ್ನು ಮತ್ತು ವಿಶ್ವಾಸಾರ್ಹತೆಯನ್ನು ಒದಗಿಸಿದೆ. ಈ ವಿದ್ಯಮಾನವು ಕ್ಷಿಪ್ರಕ್ರಾಂತಿಗಳ ಅಗತ್ಯವನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿದೆ. ಈ ದೇಶಗಳ ಮೇಲೆ ಹೇರಲಾದ ಸಂರಚನಾ ನಿರ್ಬಂಧಗಳು ಈಗ, ಆ ಪಾತ್ರವನ್ನು ನಿರ್ವಹಿಸಲು ಆರಂಭಿಸಿವೆ. ಆದರೆ, ನವ ಉದಾರವಾದಿ ವ್ಯವಸ್ಥೆಯು ಒಂದು ಬಿಕ್ಕಟ್ಟಿಗೆ ಸಿಲುಕಿರುವುದರಿಂದ ಮತ್ತು ಇತರ ದೇಶಗಳ ಮೇಲೆ, ಅದರಲ್ಲೂ ವಿಶೇಷವಾಗಿ ಜಾಗತಿಕ ದಕ್ಷಿಣದ ದೇಶಗಳ ಮೇಲೆ, "ನನ್ನ–ನೆರೆಯವನು–ಹಾಳಾಗಲಿ" ಎಂಬ ಏಕಮುಖ ನೀತಿಯನ್ನು ಹೇರುವ ಮೂಲಕ ಈ ಬಿಕ್ಕಟ್ಟನ್ನು ನಿಭಾಯಿಸಲು ಅಮೆರಿಕ ಸಾಮ್ರಾಜ್ಯಶಾಹಿಯು ಪ್ರಯತ್ನಿಸುತ್ತಿರುವುದರಿಂದ, ಪರಿಸ್ಥಿತಿ ಬದಲಾಗಲಾರಂಭಿಸಿದೆ. ಈ ಹೊಸ ಪರಿಸ್ಥಿತಿಯಲ್ಲಿ ಈ ದೇಶಗಳ ಸಾಮ್ರಾಜ್ಯಶಾಹಿ–ವಿರೋಧಿ ಪ್ರತಿರೋಧವು ಬಲಗೊಳ್ಳುತ್ತಿದೆ. ಖನಿಜಗಳೂ ಸೇರಿದಂತೆ ತಮ್ಮ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣವನ್ನು ಮರು ಸ್ವಾಧೀನಪಡಿಸಿಕೊಳ್ಳುವ ಈ ದೇಶಗಳ ಹೋರಾಟವು ಮುಂಬರುವ ದಿನಗಳಲ್ಲಿ ಹೆಚ್ಚು ಬಲಗೊಳ್ಳುತ್ತದೆ. ಹೀಗಾಗಿ ಬಂಡವಾಳಶಾಹಿಯ ಬಿಕ್ಕಟ್ಟು ಸಾಮ್ರಾಜ್ಯಶಾಹಿಯನ್ನು ಇನ್ನೂ ಕಷ್ಟಕ್ಕೆ ಈಡು ಮಾಡುತ್ತದೆ, ಮತ್ತು ಅದರಿಂದಾಗಿ ಅದು ಇನ್ನಷ್ಟು ದುಷ್ಟತನಕ್ಕೂ ಇಳಿಯಬಹುದು.

NEW No. MAG(3)/NPP/205/2021-2022
JANASHAKTHI KANNADA VARA PATRIKE August 04- 10, 2025 Price: Rs. 10/- Date of Publication: 01 August 2025 RNI No. KARKAN/2006/17926 Posted on 04-08-2025
Posted at BG PSO, BG - 560026 **Posted at Periodical Rate -** Rs. 2

ಸ್ಥಿರನಾಣ್ಯಗಳಿಗೆ ಮಾನ್ಯತೆ ನೀಡುವ ಜೇನಿಯಸ್ ಆಕ್ಟ್: ಆರ್ಥಿಕ ಅರಾಜಕತೆಗೆ ಆಹ್ವಾನ

–ಪ್ರೊ. ಐಚೆನ್ ಗ್ರೀನ್

ಅಮೇರಿಕದ ಸರ್ಕಾರ ಸ್ಥಿರ ನಾಣ್ಯಗಳನ್ನು ಗುರುತಿಸಿ ಅವುಗಳಿಗೆ ಮಾನ್ಯತೆ ನೀಡುವುದಕ್ಕೆ, ಬೆಂಬಲ ಕೊಡುವುದಕ್ಕೆ ಚೌಕಟ್ಟು ಒದಗಿಸುವ ಕಾಯಿದೆ ಹೊರತಂದಿದೆ. ಸ್ಥಿರನಾಣ್ಯ ಒಂದು ಸಹ ಒಂದು ರೀತಿಯ ಕ್ರಿಪ್ಟೋಕರೆನ್ಸಿಯಾಗಿದ್ದು, ಅಲ್ಲಿ ಡಿಜಿಟಲ್ ಆಸ್ತಿಯ ಮೌಲ್ಯವನ್ನು ಉಲ್ಲೇಖ ಆಸ್ತಿಗೆ ಜೋಡಿಕೆ ಮಾಡಲಾಗುತ್ತದೆ. ದೈತ್ಯ ಟೆಕ್ ಕಂಪನಿಗಳು ಇಂತಹ ನಡೆಯನ್ನು ಅತ್ಯುತ್ಸಾಹದಿಂದ ಸ್ವಾಗತಿಸಿವೆ. ಸದ್ಯದಲ್ಲೇ ಮಸ್ಕ್ ಕಾಸು ಅಥವಾ ಜೆಫ್ ನಾಣ್ಯ ಇತ್ಯಾದಿ ನಿಮಗೆ ಪಾವತಿಯಾಗಿ ಸಿಗಬಹುದು. ತಯಾರಾಗಿರಿ. ಈ ದೈತ್ಯ ಕಂಪನಿಗಳು ತಮ್ಮ ಗ್ರಾಹಕರನ್ನು ತಮ್ಮ ವ್ಯವಸ್ಥೆಯ ಭಾಗವಾಗಿಸಿ ಸೆರೆಯಾಗಿಸಬಹುದು!! ಓಲಾ, ಅಮೆಜೋನ, ಪೆಟಿಎಂ ಇತ್ಯಾದಿಗಳ ವ್ಯಾಲೆಟ್‌ಗಳಲ್ಲಿ ಸೇರಿದ ನಿಮ್ಮ ಹಣ ಬ್ಯಾಂಕ್ ಠೇವಣಿಯಲ್ಲ. ನಿಮ್ಮ ಈ ಹಣಕ್ಕೆ ಬಡ್ಡಿಯಿಲ್ಲ. ಇಲ್ಲಿನ ಖಾತೆಗಳಿಗೆ ಹಣ ಹರಿಯುತ್ತದೆ. ಅಲ್ಲಿಂದ ಹೊರಗೆ ಸುಲಭದಲ್ಲಿ ಬರಲಾರದು. ಮಿಂತ್ರಕ್ಕೆ ಪಾವತಿಸಿದ ಹಣ ಅಲ್ಲಿ ಮಾತ್ರ ಬಳಕೆಯಾಗುತ್ತದೆ. ಒಂದು ವಸ್ತು ಬೇಡವೆನಿಸಿದರೆ ಇನ್ನೊಂದು ವಸ್ತು ಕೊಳ್ಳಿ. ಓಲಾ ಕ್ಕೆ ಪಾವತಿಸಿದ ಹಣವೂ ಹೀಗೆ. ಇಂದಿನ ಪಯಣಕ್ಕೆ ಆಗದಿದ್ದರೆ ಮುಂದಿನ ಪಯಣಕ್ಕೆ!! ಅವರ ಲಾಭ, ಅವರ ಅನುಕೂಲ, ಅವರ ಶರತ್ತುಗಳು. ನೀವು ಬಲಿಪಶು.

ಜಿ.ಎಸ್.ಮಣಿ

ಇತ್ತೀಚೆಗೆ ಮಂಜೂರಾದ ಟ್ರಂಪ್ ಅವರ 'ಬಿಗ್ ಅಂಡ್ ಬ್ಯೂಟಿಫುಲ್' ಕಾನೂನಿನಲ್ಲಿ ಶ್ರೀಮಂತರಿಗೆ ಭಾರಿ ಆದಾಯತೆರಿಗೆ ರಿಯಾಯಿತಿ ಕೊಟ್ಟದ್ದು ಮತ್ತು ಬಡವರಿಗೆ ಸ್ವಲ್ಪವಾದರೂ ರಕ್ಷಣೆ ಕೊಡುತ್ತಿದ್ದ ಮೆಡಿಕೇರ್, ವಿವಿಧ ಕಲ್ಯಾಣ ಯೋಜನೆಗಳಿಗೆ ಭಾರೀ ಕಡಿತ ಮಾತ್ರ ಮಾಡಿಲ್ಲ, ಇನ್ನಷ್ಟು ಪ್ರತಿಗಾಮಿ ಮತ್ತು ಅಪಾಯಕಾರಿ ಕ್ರಮಗಳನ್ನು ಕೈಗೊಂಡಿದೆ. ಇಂತಹ ಒಂದು ಕ್ರಮದ ಪ್ರಕಾರ ಮುಂದಿನ ಹತ್ತು ವರ್ಷಗಳ ಕಾಲ ಕೃತ್ರಿಮ ಬುದ್ಧಿಮತ್ತೆ(ಎಐ)ಯನ್ನು ನಿಯಂತ್ರಿಸುವ ಅಧಿಕಾರ ಯಾರಿಗೂ ಇರುವುದಿಲ್ಲ. ಕೃತ್ರಿಮ ಬುದ್ಧಿಮತ್ತೆ ತಂತ್ರಜ್ಞಾನ ಬೆಳೆಯುತ್ತಿದೆ ಮತ್ತು ಅದರ ಬೆಳವಣಿಗೆಯ ದಿಕ್ಕನ್ನು ಯಾರೂ ಊಹಿಸಲಾರರು. ಅಡೆತಡೆ ಅಥವಾ ನಿಯಂತ್ರಣ ಎರಡೂ ಇಲ್ಲ. ಇದಕ್ಕೆ ನಿಯಂತ್ರಣ ಬೇಕು ಎಂಬ ಕೂಗು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ತಂತ್ರಜ್ಞಾನಿಗಳೂ ಸೇರಿದಂತೆ ಎಲ್ಲೆಡೆಯಿಂದ ಕೇಳಿ ಬರುತ್ತಿರುವಾಗ, ಈ ಕಾನೂನು ಒಡೆದು ಹೇಳದೇ ಕೃತ್ರಿಮ ಬುದ್ಧಿಮತ್ತೆ ಬಳಸಿ ನಡೆಸುವ ಕಣ್ಗಾವಲಿಗೆ ಅನಿರ್ಬಂಧಿತ ಅವಕಾಶ ನೀಡುತ್ತದೆ. ತಂತ್ರಜ್ಞಾನ ಕೋಟ್ಯಾಧಿಪತಿಗಳು ಈ ಕಾನೂನಿಗೆ ಒಲುಮೆ ತೋರಿದ್ದಾರೆ. ಆದರೆ ಮೇಲಿನ ಕಾನೂನಿನಿಂದ ಅವರು ತೃಪ್ತರು ಎಂದು ಹೇಳಲಾಗದು. ಅವರಿಗೆ ಬೇಕಾಗಿರುವುದು GENIUS (Guiding and Establishing National Innovation for US Stablecoins Act) Bill –ಸಂಕ್ಷಿಪ್ತವಾಗಿ ಹೇಳುವುದಾದರೆ, ಅಮೇರಿಕದ ಸ್ಥಿರನಾಣ್ಯ ಸ್ಥಾಪಿಸಿ ನಿರ್ದೇಶಿಸಲು ರಾಷ್ಟ್ರೀಯ ನಾವೀನ್ಯತೆ ಕಾನೂನು. ಈ ಕಾನೂನಿಗೆ ಸಾಕಷ್ಟು ವಿರೋಧವಿದ್ದರೂ, ಅದೂ ಯುಎಸ್ ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಮಂಜೂರಾಗಿದೆ. ಅಧ್ಯಕ್ಷ ಟ್ರಂಪ್ ಜುಲೈ 18ರಂದು ಈ ಕಾನೂನನ್ನು ಜಾರಿಮಾಡಿ ಆಜ್ಞೆ ಹೊರಡಿಸಿದ್ದಾರೆ. ಇದನ್ನು "20ನೇ ಶತಮಾನದ ಆದಿಭಾಗದ ರೀತಿಯ ಆರ್ಥಿಕ ಅರಾಜಕತೆಗೆ ಆಹ್ವಾನ" ಎಂದು ಕ್ಯಾಲಿಫೋರ್ನಿಯದ ಬರ್ಕ ಲೀ ವಿ.ವಿ.ಯ ಅರ್ಥಶಾಸ್ತ್ರದ ಪ್ರೊ. ಬ್ಯಾರಿ ಐಚೆನ್ ಗ್ರೀನ್ ಕರೆದಿದ್ದಾರೆ.

ಸ್ಥಿರನಾಣ್ಯ (Stable Coin)

ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ನಮಗೆ ಸ್ಥಿರ ನಾಣ್ಯದ ಪರಿಕಲ್ಪನೆ ಇರಬೇಕು. ಸ್ಥಿರನಾಣ್ಯ ಎಂಬುದು ಒಂದು ತರಹದ ವಾಸ್ತವ ನಾಣ್ಯ ವ್ಯವಸ್ಥೆ. ಒಂದು ಸ್ಥಿರನಾಣ್ಯದ ಬೆಲೆ ಒಂದು ಡಾಲರ್ ಎಂದುಕೊಳ್ಳೋಣ. ಇದು ಕ್ರಿಪ್ಟೊ ಕರೆನ್ಸಿಯಂತೆ ಬೆಲೆಯಲ್ಲಿ ಏರಿಳಿತ ಕಾಣದು. ಬಿಟ್ ಕೊಯಿನ್ ಎಂಬ ಕ್ರಿಪ್ಟೊ ಕರೆನ್ಸಿ ಮಾರುಕಟ್ಟೆ ಬೆಲೆಗಳಿಗೆ ತಳುಕು ಹಾಕಿಕೊಂಡಿದೆ. ಸ್ಥಿರ ನಾಣ್ಯ ಮಾರುಕಟ್ಟೆ ಬೆಲೆಗೆ ಇಂತಹ ಸಂಬಂಧ ಹೊಂದಿಲ್ಲ. ಕ್ರಿಪ್ಟೊ ಕರೆನ್ಸಿ ಎಂಬುದು ಖಾಸಗಿ ಕಂಪನಿಗಳು ನಡೆಸುವ ನೆಟ್‌ನಲ್ಲಿ ಮಾತ್ರ ವ್ಯವಹರಿಸುವ ಡಿಜಿಟಲ್ ಹಣ. ಈ ಕಂಪನಿಗಳು ಕ್ರಿಪ್ಟೊ ಕರೆನ್ಸಿ ಬದಲಿಗೆ ಮಾನ್ಯ ಕರೆನ್ಸಿ (ಡಾಲರ್, ರೂಪಾಯಿ) ಕೊಡಬಲ್ಲವು. ಆದರೆ, ಕ್ರಿಪ್ಟೊ ಕರೆನ್ಸಿಯ ಮಾರುಕಟ್ಟೆ ಬೆಲೆ ಹೆಚ್ಚು ಕಡಿಮೆ ಆಗುತ್ತಿರುತ್ತದೆ. ಆದರೆ ಇವು



ಬ್ಯಾಂಕಿಂಗ್ ವ್ಯವಸ್ಥೆಯಿಂದ ಹೊರಗಿರುವುದರಿಂದ ಕೆಲವು ವರ್ಗದ ವ್ಯಕ್ತಿಗಳು, ಸಂಸ್ಥೆಗಳು ಮಾತ್ರ ಇವನ್ನು ಬಳಸುತ್ತಾರೆ. ಹಲವು ದೇಶಗಳಲ್ಲಿ ಕ್ರಿಪ್ಟೊ ಕರೆನ್ಸಿಯ ಬಳಕೆ ಮತ್ತು ಹೊಂದುವುದರ ಮೇಲೆ ನಿಷೇಧವಿದೆ. ಕೆಲವು ದೇಶಗಳಲ್ಲಿ ಅದನ್ನು ಇತರ ಕರೆನ್ಸಿ ರೀತಿ ಬಳಸುವುದಕ್ಕೂ ಅವಕಾಶ ಕೊಡಲಾಗಿದೆ. ಆದರೆ ಬಹುಪಾಲು ದೇಶಗಳಲ್ಲಿ ನಿಷೇಧವಿಲ್ಲದಿದ್ದರೂ ಬಳಕೆ, ವಿನಿಮಯಗಳಲ್ಲಿ ಹಲವು ನಿರ್ಬಂಧಗಳಿವೆ ಮತ್ತು ವಿನಿಮಯಕ್ಕೆ ತೆರಿಗೆ ವಿಧಿಸಲಾಗುತ್ತದೆ. ಹಾಗಾಗಿಯೇ ಸಾಮಾನ್ಯ ಕರೆನ್ಸಿಯ ನಡುವೆ ಸ್ಥಿರನಾಣ್ಯದ ಅವಶ್ಯಕತೆ ಮೂಡಿದೆ.

ಸ್ಥಿರನಾಣ್ಯ ಒಂದು ಸಹ ಒಂದು ರೀತಿಯ ಕ್ರಿಪ್ಟೋ ಕರೆನ್ಸಿಯಾಗಿದ್ದು, ಅಲ್ಲಿ ಡಿಜಿಟಲ್ ಆಸ್ತಿಯ ಮೌಲ್ಯವನ್ನು ಉಲ್ಲೇಖ ಆಸ್ತಿಗೆ ಜೋಡಿಕೆ ಮಾಡಲಾಗುತ್ತದೆ. ಈ ಆಸ್ತಿ ಫಿಯೆಟ್ ಹಣವಾಗಿರಬಹುದು ಅಥವಾ ವಿನಿಮಯ-ವಹಿವಾಟು ಸರಕುಗಳು (ಅಮೂಲ್ಯ ಲೋಹಗಳು ಅಥವಾ ಕೈಗಾರಿಕಾ ಲೋಹಗಳಂತಹವು) ಅಥವಾ ಇನ್ನೊಂದು ಕ್ರಿಪ್ಟೋಕರೆನ್ಸಿ ಆಗಿರಬಹುದು.

ಸ್ಥಿರನಾಣ್ಯಗಳ ಉದಾಹರಣೆ ಏನು?

ಮಾರುಕಟ್ಟೆ ಬಂಡವಾಳೀಕರಣದ ಪ್ರಕಾರ ಅತ್ಯಂತ ಜನಪ್ರಿಯ ಮತ್ತು ದೊಡ್ಡ ಸ್ಟೇಬಲ್ ಕಾಯಿನ್ ಅಮೆರಿಕದ ಡಾಲರ್ ಸಂಬಂಧಿತ ಟೆಥರ್ (USDT). ಇದನ್ನು 1:1 ಅನುಪಾತದಲ್ಲಿ US ಡಾಲರ್‌ಗೆ ಜೋಡಿಸಲಾಗಿದೆ ಮತ್ತು ಇದು ಮೀಸಲುಗಳಿಂದ ಬೆಂಬಲಿತವಾಗಿದೆ. ಇದು ಮಾರುಕಟ್ಟೆ ಕ್ಯಾಪ್ ಮೂಲಕ ಅಗ್ರ ಐದು ಕ್ರಿಪ್ಟೋಕರೆನ್ಸಿಗಳಲ್ಲಿ ಸ್ಥಿರವಾಗಿದೆ. ಕ್ರಾಕನ್, ಬೈನಾನ್ಸ್ ಮತ್ತು ಕಾಯಿನ್‌ಬೇಸ್ ಸೇರಿದಂತೆ ಹೆಚ್ಚಿನ ಪ್ರಮುಖ ಕ್ರಿಪ್ಟೋ ವಿನಿಮಯ ಕೇಂದ್ರಗಳಲ್ಲಿ ನೀವು ಟೆಥರ್ ಅನ್ನು ಕಾಣಬಹುದು.

ಅಮೇರಿಕದ ಸರ್ಕಾರ ಸ್ಥಿರ ನಾಣ್ಯಗಳನ್ನು ಗುರುತಿಸಿ ಅವುಗಳಿಗೆ ಮಾನ್ಯತೆ ನೀಡುವ/ ಬೆಂಬಲ ಕೊಡುವುದಕ್ಕೆ ಚೌಕಟ್ಟು ಒದಗಿಸುವ ಕಾಯಿದೆ ಹೊರತಂದಿದೆ. ಅಲ್ಲಿನ ತಂತ್ರಜ್ಞಾನ ಉದ್ದಿಮೆ ಇಂತಹ ನಡೆಯನ್ನು ಅತ್ಯುತ್ಸಾಹದಿಂದ ಸ್ವಾಗತಿಸಿವೆ. ಆಪಲ್, ಗೂಗಲ್, ಮೆಟ, ಊಬರ್ ಮತ್ತು ಎಕ್ಸ್‌ಗಳು ತಮ್ಮದೇ ಸ್ಥಿರ ನಾಣ್ಯಗಳನ್ನು ಪರೀಕ್ಷಿಸುವ ಉತ್ಸಾಹದಲ್ಲಿವೆ. ಎಲ್ಲಕ್ಕಿಂತ ಮುಖ್ಯವಾಗಿ ಟ್ರಂಪ್ ಅವರ ಕುಟುಂಬದ ವ್ಯವಹಾರದ ಭಾಗವಾದ 'ವರ್ಲ್ಡ್ ಲಿಬರ್ಟಿ ಫೈನಾನ್ಷಿಯಲ್' ತನ್ನ ವಾಸ್ತವ ನಾಣ್ಯ USD1 ಅನ್ನು ಮಾರಲು ಕಾತರಿಸಿ ಕುಳಿತಿದೆ! ಇಂದು ಗಾತ್ರದಲ್ಲಿ 250 ಬಿಲಿಯ ಡಾಲರುಗಳ ಗಡಿ ದಾಟಿರುವ ಈ ಸ್ಥಿರನಾಣ್ಯ ಈ ಕಾನೂನು ಹೊರಬರುವುದನ್ನು ಕಾದಿದೆ.

ಅಮೆರಿಕದ ಹಲವರು ಈ ಕಾನೂನು ವಿವಿಧ ತರಹದ ಭ್ರಷ್ಟ ಒಪ್ಪಂದಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಹೇಳುತ್ತಾರಷ್ಟೇ ಅಲ್ಲ, ಇಂತಹ ಭ್ರಷ್ಟ ವ್ಯವಹಾರಗಳ ಕುರುಹೂ ಕಾಣದಂತೆ ಆಗುತ್ತದೆ ಎಂಬ ಭಯವನ್ನು ಹೊಂದಿದ್ದಾರೆ. ಟ್ರಂಪ್ ಪರಿವಾರದ ನೇರ ಭಾಗ ಇಂತಹ ವ್ಯವಹಾರದಲ್ಲಿರುವುದೂ ಇಂತಹ ಆತಂಕಗಳನ್ನು ಹೆಚ್ಚಿಸಿದೆ.

ಗ್ರಾಹಕ ರಕ್ಷಣೆ

ಇನ್ನೊಂದು ದೊಡ್ಡ ಆತಂಕ ಇರುವುದು ಗ್ರಾಹಕ ರಕ್ಷಣಾ ಕಾನೂನುಗಳು ದುರ್ಬಲವಾಗುತ್ತಿರುವುದರ ಕುರಿತು. ಮೇಲೆ ಕಾಣಿಸಿದ ಕಾನೂನು (ಸ್ಥಿರನಾಣ್ಯದ ಕಾನೂನು) ಹಣಕಾಸು ಗ್ರಾಹಕರ ರಕ್ಷಣಾ ಬ್ಯುರೋ (CFPB)ವನ್ನು ದುರ್ಬಲಗೊಳಿಸಿ, ಹಣಕಾಸು ಮತ್ತು ತಂತ್ರಜ್ಞಾನ ಕಂಪನಿಗಳು ಗ್ರಾಹಕರನ್ನು ಶೋಷಿಸಲು ಅನುವು ಮಾಡಿಕೊಡುತ್ತದೆ. ಈಗಾಗಲೇ CFPB ಮೆಟ ದಂತಹ ಕಂಪನಿಗಳ ಪಾವತಿ ವ್ಯವಸ್ಥೆಯ ತನಿಖೆ ನಡೆಸುತ್ತಿತ್ತು. ಹೊಸ ಕಾನೂನಿನಡಿ ಇಂತಹ ತನಿಖೆಗಳಿಗೆ ಇರುವ ಅಧಿಕಾರ ಬಹಳಷ್ಟು ಕಡಿತವಾಗಿದೆ!!

ಆದರೂ ವಾಸ್ತವ ಕರೆನ್ಸಿ (Virtual Currency) ಹೊಂದುವುದು ಸದ್ಯಕ್ಕೆ ಕನಸಿನ ಮಾತು. ಡಿಜಿಟಲ್ ಮತ್ತು ಸೃಜನಶೀಲ ಆರ್ಥಿಕಗಳು ತೊನೆಯುತ್ತಿವೆ. ಇವೆಲ್ಲ ಇದ್ದರೂ, ಗಡಿಯಾಚೆ ಪಾವತಿ ಮಾಡುವುದು ಈಗಿನ ನಿಯಂತ್ರಿತ ಹಣಕಾಸು ವಾತಾವರಣದಲ್ಲಿ ದೊಡ್ಡ ಸವಾಲೇ ಆಗಿದೆ. ವಾಸ್ತವ ಕರೆನ್ಸಿ ಈ ಸಮಸ್ಯೆಯನ್ನು ಪರಿಹರಿಸಬಲ್ಲದು. ಉದಾಹರಣೆಗೆ ಫೇಸ್ಬುಕ್ ಅಥವಾ ಟ್ವಿಟ್ಟರ್‌ಗಳು ತಮ್ಮ ಸೃಜನಶೀಲರಿಗೆ ಅವರದೇ ಕರೆನ್ಸಿಯಲ್ಲಿ ಪಾವತಿ ಮಾಡಬಲ್ಲವು. ಇಲ್ಲಿ ಸಾಂಪ್ರದಾಯಿಕ ಕರೆನ್ಸಿ ಪರಿವರ್ತನೆಯ ಜಂಜಡವಿಲ್ಲ. ಇತರೆ ಬ್ಯಾಂಕಿಂಗ್ ರಗಳೆಗಳಿಲ್ಲ. ಈ ಕಂಪನಿಗಳಿಗೂ ಭೂ ಗಡಿಗಳ ನಿರ್ಭಂಧವಿಲ್ಲ ಎಂಬುದನ್ನೂ ನಾವು ಗಮನಿಸಬೇಕು. ಈ ಕಂಪನಿಗಳು ಜಗತ್ತಿನಾದ್ಯಂತ ಹರಡಿಕೊಂಡಿವೆ. ಅಲ್ಲದೆ ಅವುಗಳು ಭೌತಿಕವಾಗಿ ಇಲ್ಲದೆಡೆಗಳಲ್ಲೂ ಅವುಗಳ ನಿಲುಕು ಇದೆ. ಆದ್ದರಿಂದಲೇ ಅವು

ಪುಟ 12 ಕ್ಕೆ

ಮಾರುಕಟ್ಟೆ ಕ್ಯಾಪ್ ಪ್ರಕಾರ ಟಾಪ್ ಸ್ಟೇಬಲ್‌ಕಾಯಿನ್‌ಗಳು ಅಥವಾ ಸ್ಥಿರನಾಣ್ಯಗಳು

ಕ್ರಮ ಸಂಖ್ಯೆ	ನಾಣ್ಯದ ಹೆಸರು	ವಿನಿಮಯ ಪ್ರಮಾಣ
1	ಟೆಥರ್‌ಯುಎಸ್‌ಡಿಟಿ	0.02%
2	ಯುಎಸ್‌ಡಿಸಿ	0.01%
3	ಯುಎಸ್‌ಡಿಎಸ್	0.02%
4	ಡೈಡಿಎಐ	0.05%

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**